ಕರಡಿಯಾಡಿಸುವ ಮದಾರಿಗಳ ವೃತ್ತಿ ಜನಪದ

(ಬಳ್ಳಾರಿ ಹಾಗೂ ಕೊಪ್ಪಳ ಜಿಲ್ಲೆಗಳ ಆಯ್ದ ಪ್ರದೇಶಗಳನ್ನು ಅನುಲಕ್ಷಿಸಿ)

ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಎಂ.ಫಿಲ್. ಸಂಪ್ರಬಂಧ

ಸಂಶೋಧಕ

ಅಬ್ದುಲ್ ನಿಶಾರ್

ಮಾರ್ಗದರ್ಶಕರು

ಡಾ. ಸಿ. ಟಿ. ಗುರುಪ್ರಸಾದ್

ಸಮಾಜ ವಿಜ್ಞಾನಗಳ ನಿಕಾಯ
ಜಾನಪದ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

೨೦೦೮

ಕರಡಿಯಾಡಿಸುವ ಮದಾರಿಗಳ ವೃತ್ತಿ ಜನಪದ

(ಬಳ್ಳಾರಿ ಹಾಗೂ ಕೊಪ್ಪಳ ಜಿಲ್ಲೆಗಳ ಆಯ್ದ ಪ್ರದೇಶಗಳನ್ನು ಅನುಲಕ್ಷಿಸಿ)

ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಎಂ.ಫಿಲ್. ಸಂಪ್ರಬಂಧ

ಸಂಶೋಧಕ

ಡಿ. ಅಬ್ದುಲ್ ನಿಶಾರ್

ಮಾರ್ಗದರ್ಶಕರು

ಡಾ. ಸಿ. ಟಿ. ಗುರುಪ್ರಸಾದ್

ಸಮಾಜ ವಿಜ್ಞಾನಗಳ ನಿಕಾಯ

ಜಾನಪದ ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

೨೦೦೮

ಪ್ರಮಾಣ ಪತ್ರ

ಕರಡಿ ಆಡಿಸುವ ಮದಾರಿಗಳ ವೃತ್ತಿ ಜನಪದ (ಬಳ್ಳಾರಿ ಹಾಗೂ ಕೊಪ್ಪಳ ಜಿಲ್ಲೆಗಳ ಆಯ್ದ ಪ್ರದೇಶಗಳನ್ನು ಅನುಲಕ್ಷಿಸಿ) ಎಂಬ ಶೀರ್ಷಿಕೆಯ ಸಂಪ್ರಬಂಧವನ್ನು ಎಂ.ಫಿಲ್. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯದ ಜಾನಪದ ಅಧ್ಯಯನ ವಿಭಾಗಕ್ಕೆ ೨೦೦೮-೦೯ ನೇ ಶೈಕ್ಷಣಿಕ ಸಾಲಿನಲ್ಲಿ ಡಾ. ಸಿ. ಟಿ. ಗುರುಪ್ರಸಾದ್ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಲಾಗಿದೆ. ಪ್ರಸ್ತುತ ಸಂಪ್ರಂಬಧದ ಯಾವುದೇ ಭಾಗವನ್ನು ಈ ಮೊದಲು ಬೇರೆ ಯಾವುದೇ ಉದ್ದೇಶ ಅಥವಾ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ಡಿ. ಅಬ್ದುಲ್ ನಿಶಾರ್

ದಿನಾಂಕ:

ಸ್ಥಳ: ವಿದ್ಯಾರಣ್ಯ

(**ಡಿ. ಅಬ್ದುಲ್ ನಿಶಾರ್**)
ಸಂಶೋಧಕ
ಜಾನಪದ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ-೫೮೩೨೭೬

ಮಾರ್ಗದರ್ಶಕರ ಪ್ರಮಾಣಪತ್ರ

ಕರಡಿ ಆಡಿಸುವ ಮದಾರಿಗಳ ವೃತ್ತಿ ಜನಪದ (ಬಳ್ಳಾರಿ ಮತ್ತು ಕೊಪ್ಪಳ ಜಿಲ್ಲೆಯ ಆಯ್ದ ಪ್ರದೇಶಗಳನ್ನು ಅನುಲಕ್ಷಿಸಿ) ಎಂಬ ನಿಬಂಧವನ್ನು ಕನ್ನಡ ವಿಶ್ವವಿದ್ಯಾಲಯದ ಎಂ.ಫಿಲ್. ಪದವಿಗಾಗಿ ಡಿ. ಅಬ್ದುಲ್‌ನಿಶಾರ್ ಅವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಪ್ರಸ್ತುತ ನಿಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಧೃಡೀಕರಿಸುತ್ತೇನೆ.

ಡಾ. ಸಿ. ಟಿ. ಗುರುಪ್ರಸಾದ್
ಹಿರಿಯಶ್ರೇಣಿ ಅಧ್ಯಾಪಕರು
ಜಾನಪದ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩೨೭೬

ಸ್ಥಳ: ವಿದ್ಯಾರಣ್ಯ
ದಿನಾಂಕ: ೨೭-೦೯-೦೮

ಕೃತಜ್ಞತೆಗಳು

ಕನ್ನಡ ವಿಶ್ವವಿದ್ಯಾಲಯದಲ್ಲಿ ಎಂ.ಫಿಲ್. ಅಧ್ಯಯನ ಮಾಡಲು ಅವಕಾಶ ಕಲ್ಪಿಸಿಕೊಟ್ಟ ಮಾನ್ಯ ಕುಲಪತಿಗಳಾದ ಡಾ. ಎ.ಮುರಿಗೆಪ್ಪ ಅವರಿಗೆ, ಮಾನ್ಯ ಕುಲಸಚಿವರಾದ ಡಾ.ಹಿ.ಚಿ.ಬೋರಲಿಂಗಯ್ಯ ಅವರಿಗೆ, ಅಧ್ಯಯನಾಂಗದ ನಿರ್ದೇಶಕರಾಕದ ಡಾ.ಡಿ.ಪಾಂಡುರಂಗಬಾಬು ಅವರಿಗೆ ನಾನು ಕೃತಜ್ಞನಾಗಿರುತ್ತೇನೆ.

ಎಂ.ಫಿಲ್. ಸಂಪ್ರಬಂಧದ ಸಿದ್ಧತೆಗೆ ಸಲಹೆ ಮತ್ತು ಮಾರ್ಗದರ್ಶನ ನೀಡಿದ ಮಾರ್ಗದರ್ಶಕರಾದ ಡಾ.ಸಿ.ಟಿ.ಗುರುಪ್ರಸಾದ್ ಅವರಿಗೆ ನಾನು ಕೃತಜ್ಞನಾಗಿರುತ್ತೇನೆ.

ಅತ್ಯಂತ ಕಾಳಜಿವಹಿಸಿ ಎಂ.ಫಿಲ್ ಅಧ್ಯಯನದ ಪಠ್ಯಕ್ರಮವನ್ನು ಭೋಧಿಸಿದ ಜಾನಪದ ವಿಭಾಗದ ಅಧ್ಯಾಪಕ ವೃಂದದವರಾದ ಡಾ.ಸ.ಚಿ.ರಮೇಶ್, ಡಾ. ಮೊಗಳ್ಳಿ ಗಣೇಶ್, ಡಾ. ಹರಿಶ್ಚಂದ್ರ ದಿಗ್ಸ್ಂಗಿಕರ್, ಡಾ. ಮಂಜುನಾಥ ಬೇವಿನಕಟ್ಟೆ ವಿಭಾಗದ ಮುಖ್ಯಸ್ಥರಾದ ಡಾ. ಎಚ್.ಕೆ.ನಾಗೇಶ್ ಮತ್ತು ಬೋಧಕೇತ ಸಿಬ್ಬಂದಿಯವರಾದ ಶ್ರೀ ಬಸವರಾಜ್ ಹಾಗೂ ಅಬ್ದುಲ್‌ನಬಿ ಅವರಿಗೂ ನಾನು ಕೃತಜ್ಞನಾಗಿರುತ್ತೇನೆ.

ನನ್ನ ಅಧ್ಯಯನದ ಬೆಳವಣಿಗೆಗೆ ಸರ್ವರೀತಿಯಲ್ಲೂ ಯಶಸ್ವಿಯಾಗಲು ಕಾರಣೀಕರ್ತರಾದ ನನ್ನ ತಂದೆ ಡಿ.ಭಾಷಾಸಾಹೇಬ್ ತಾಯಿ ಮಕ್ತುಂಬಿ ಇವರಿಗೆ ನನ್ನ ನಮನಗಳನ್ನು ಸಲ್ಲಿಸುತ್ತೇನೆ. ಈ ಪ್ರಬಂಧದ ಸಿದ್ಧತೆಗಾಗಿ ಗ್ರಂಥಗಳನ್ನೊದಗಿಸಿದ ಅಕ್ಷರ ಹಾಗೂ ಸಿರಿಗನ್ನಡ ಗ್ರಂಥಾಲಯದ ಸಿಬ್ಬಂದಿಗೆ ನಾನು ಕೃತಜ್ಞನಾಗಿರುತ್ತೇನೆ.

ಕ್ಷೇತ್ರಕಾರ್ಯದ ಸಮಯದಲ್ಲಿ ಮಾಹಿತಿ ನೀಡಿ ಸಹಕರಿಸಿದ ವೆಂಕಟಾಪುರ, ಹಂಪಿನಕಟ್ಟೆ, ಮಂಗಳಾಪುರ ಗ್ರಾಮಗಳಲ್ಲಿಯ ಖಲಂದರರ ಜನಾಂಗದ ಪ್ರಮುಖರೆನಿಸಿದ ಹೋಟೆಲ್ ರಾಜಾಸಾಬ್, ರಾಜಾಹುಸೇನ್, ರಾಜಾಸಾಬ್ ಮತ್ತು ಈ ಗ್ರಾಮಗಳಲ್ಲಿರುವ ಮದಾರಿ ಸದಸ್ಯರೆಲ್ಲರಿಗೂ ನಾನು ಅಭಾರಿಯಾಗಿದ್ದೇನೆ.

ಈ ಪ್ರಬಂಧದ ಸಿದ್ದತೆ ಸಮಯದಲ್ಲಿ ಸಲಹೆ ಮತ್ತು ಸಹಕಾರಿ ನೀಡಿದ ಮಂಗಳಾ, ವಿಜಯಲಕ್ಷ್ಮಿ, ಹೊನ್ನೂರ್ ಸಾಬ್ ಇವರೆಲ್ಲರಿಗೂ ನಾನು ಕೃತಜ್ಞನಾಗಿರುತ್ತೇನೆ. ಹಾಗೂ ಈ ಪ್ರಬಂಧವನ್ನು ಅಕ್ಷರ ರೂಪದಲ್ಲಿ ಅಂಧವಾಗಿ ಮುದ್ರಿಸಿಕೊಟ್ಟ ಶ್ರೀ ಹೆಚ್.ಶರಣಬಸಪ್ಪ ಹಾಗೂ ಡಾ. ಮಲ್ಲಿಕಾರ್ಜುನ ಗೌಡ ವಣೆನೂರು, ನಾನು ಕೃತಜ್ಞನಾಗಿರುತ್ತೇನೆ.

ಡಿ. ಅಬ್ದುಲ್ ನಿಸಾರ್

ಪರಿವಿಡಿ

ಅಧ್ಯಾಯ ಒಂದು

ಅಧ್ಯಯನದ ಉದ್ದೇಶ ಸ್ವರೂಪ ಮತ್ತು ವ್ಯಾಪ್ತಿ

ಅಧ್ಯಾಯ ಒಂದು

ಅಧ್ಯಯನದ ಉದ್ದೇಶ ಸ್ವರೂಪ ಮತ್ತು ವ್ಯಾಪ್ತಿ

ಪೀಠಿಕೆ

೧೬ ನೇ ಶತಮಾನದಲ್ಲಿ ನಮ್ಮ ಪ್ರಪಂಚದ ದೇಶದಲ್ಲಿರುವ ಬುಡಕಟ್ಟು ಅಲೆಮಾರಿಗಳನ್ನು ಕುರಿತಾದ ಅಧ್ಯಯನ ಪ್ರಾರಂಭವಾಯಿತು. ನಮ್ಮ ದೇಶದಲ್ಲಿಯೇ ಇದು ಮೊದಲು ಪ್ರಾರಂಭವಾಯಿತೆಂದರೆ ತಪ್ಪಾಗಲಾರದು. ೧೮ನೇ ಶತಮಾನದ ಕೊನೆಗೆ ಇದು ಕೂಡಾ ವಸಾಹಾತುಶಾಹಿ ಹಿನ್ನೆಲೆಯಲ್ಲಿ ಬುಡಕಟ್ಟುಗಳನ್ನು ಕುರಿತಾದ ಅಧ್ಯಯನ ಪ್ರಾರಂಭವಾಯಿತು. ಭಾರತದಂತಹ ದೇಶದಲ್ಲಿಯೇ ಬುಡಕಟ್ಟುಗಳ ಸಮೀಕ್ಷೆ ಮಾಡಿದಾಗ ಸುಮಾರು ೧೯೫೧ರ ಜನಗಣತಿಯನ್ನು ಇಟ್ಟುಕೊಂಡು ನೋಡಿದಾಗ ನಮ್ಮ ದೇಶದಲ್ಲಿ ೫೭೧ ಬುಡಕಟ್ಟು ಅಲೆಮಾರಿಗಳಿವೆ. ಆದರೆ ಈ ಬುಡಕಟ್ಟುಗಳು ಜಾತಿಗಳಾಗುವಂತಹವು. ಬುಡಕಟ್ಟುಗಳು ಅಲೆಮಾರಿಗಳಾಗಿವೆ. ಅರೆ ಅಲೆಮಾರಿಗಳಾಗಿವೆ. ಇಂದು ಕರ್ನಾಟಕದಲ್ಲಿ ಅಲೆಮಾರಿಗಳೆಷ್ಟಿದ್ದಾರೆ ಅರೆ ಅಲೆಮಾರಿಗಳೆಷ್ಟಿದ್ದಾರೆ ಇದನ್ನು ಕೂಡಾ ನಿರ್ದಿಷ್ಟವಾಗಿ ಹೇಳಿದಂತಹ ಸ್ಥಿತಿ ನಮ್ಮ ಕಣ್ಣ ಮುಂದೆ ಸೃಷ್ಟಿಗೊಂಡಿದೆ.

ಭಾರತವು ಇಡೀ ಜನಗತ್ತಿನಲ್ಲಿಯೇ ಅತ್ಯಂತ ವೈವಿಧ್ಯಮಯವಾದ ಸಂಸ್ಕೃತಿಯನ್ನು ಹೊಂದಿರುವಂತಹ ದೇಶವಾಗಿದೆ. ಇದಕ್ಕಾಗಿಯೇ ''ಭಾರತ ದೇಶ ಸಂಸ್ಕೃತಿಯ ತೊಟ್ಟಿಲು'' ಎಂದು ಅನೇಕ ವಿದ್ವಾಂಸರು ಅಭಿಪ್ರಾಯ ಪಟ್ಟಿದ್ದಾರೆ. ಇಂತಹ ಭಾರತ ದೇಶದಲ್ಲಿ ಸಾವಿರಾರು ವರ್ಷಗಳ ಸಂಸ್ಕೃತಿಯನ್ನುಳಿಸಿಕೊಂಡು ಬಂದ ಅನೇಕ ಬುಡಕಟ್ಟು ಅಲೆಮಾರಿಗಳು ವಾಸವಾಗಿರುವುದು ಭಾರತೀಯ ಸಂಸ್ಕೃತಿ ವಿಶಿಷ್ಟ ಗುಣವನ್ನು ತಿಳಿಸುತ್ತದೆ. ಇಂತಹ ಅಲೆಮಾರಿ ಬುಡಕಟ್ಟು ಸಮುದಾಯಗಳ ಅಂತರಂಗವನ್ನು ಪ್ರವೇಶಿಸಿ ಅಧ್ಯಯನ ಮಾಡುವುದೆಂದರೆ ಸುಮ್ಮನೆ ಅಲ್ಲ ಬಹಳ ಕಷ್ಟಕರವಾದ ಕೆಲಸ. ಇಂತಹ ಕಷ್ಟವಾದ ಕೆಲಸವನ್ನು ವೆರಿಯರ್ ಎಲ್ವಿನ್ ನಂತಹ ಶ್ರೇಷ್ಠ ಮಾನವಶಾಸ್ತ್ರಜ್ಞ ಹಾಗೂ ಜಾನಪದ ವಿದ್ವಾಂಸನು ಸರಳಗೊಳಿಸಿ ಮುಂದಿನ ಜನಾಂಗಕ್ಕೆ ಅಭ್ಯಾಸಮಾಡುವ ಅಭ್ಯಾಸಿಗಳಿಗೆ ಮಾದರಿಯಾಗಿದ್ದಾರೆ. ಇವರಾಡುವ ಮಾತು ಈಗಲೂ ಹಲವು ವಿದ್ವಾಂಸರಿಗೆ ನುಡಿ ಮುತ್ತು ಅದು ಹೀಗಿದೆ. ''ಈ ಬಾಳಿನಲ್ಲಿ ಮಾಡಬೇಕಾದುದನ್ನು ಮಾಡಲೇಬೇಕು. ಸ್ವರ್ಗವನ್ನು ಮುಟ್ಟದಿರಬಹುದು ಆದರೆ ಭೂಮಿಯ ಮೇಲಿದ್ದುಕೊಂಡು ಮಾಡಬೇಕಾದದ್ದು ಬಹಳಷ್ಟಿದೆ. ಅಂದರೆ ಜನರಿಗಾಗಿ ನಮ್ಮ ಅಧ್ಯಯನ ಪ್ರಯೋಜನ ಆದಾಗ ಮಾತ್ರ ಅಂಥಾ ಅಧ್ಯಯನ ಉಪಯೋಗವಾಗುವುದು ಎಂಬ ಮಾತು ಮುಂದಿನ ಬ್ರಿಟಿಷ್ ವಿದ್ವಾಂಸರಿಗೂ ಪಾದ್ರಿಗಳಿಗೂ ಅಧ್ಯಯನ ಮಾಡಲು ಅನುಕೂಲವಾಯಿತು.

ಅಲೆಮಾರಿ ಅಧ್ಯಯನವೆಂದರೆ ಒಂದು ಅರ್ಥದಲ್ಲಿ ಭಾರತದ ಜಾತಿಪದ್ಧತಿಯ ರಾಜಕೀಯಾರ್ಥಿಕ ವಿಕಟ ನಾಟಕದ ಅಧ್ಯಾಯನವೆಂದು, ತಿಳಿಯುತ್ತದೆ. ಪರಂಪರೆಯ ಕಾರಣಕ್ಕೆ ಈವತ್ತಿಗೂ ತಮ್ಮ ಸಾಂಪ್ರದಾಯಿಕ ಕುಲಕಸುಬುಗಳನ್ನು ಅನಿವಾರ್ಯವಾಗಿ ಅವಲಂಬಿಸಿಕೊಂಡು ಬದುಕುವ ಸಮುದಾಯಗಳೆಲ್ಲ ಬಹುತೇಕ ಅಲೆಮಾರಿಗಳೇ ಆಗಿದ್ದಾರೆ. ಈ ಸಮುದಾಯಗಳನ್ನು ಭಾರತದ ರಾಜಪಾಹಿ ವ್ಯವಸ್ಥೆಯು ಅನೇಕ ಕಾರಣಗಳಿಗಾಗಿ ಪೋಷಿಸಿಕೊಂಡು ಬಂದಿದೆ. ಈ ದೇಶದ ಚರಿತ್ರೆಯಲ್ಲಿ ಅಲೆಮಾರಿಗಳು ಅನೇಕ ಭಿನ್ನ ವೇಷಗಳಲ್ಲಿ ಕಾಣಿಸಿಕೊಂಡಿದ್ದಾರೆ. ಈ ಹಿನ್ನೆಲೆಯಲ್ಲಿ ವೃತ್ತಿಯನ್ನು ಅವಲಂಬಿಸಿರುವ ಕರಡಿಯಾಡಿಸುವ ಮಾದಾರಿಗಳು ಒಂದು ಪ್ರಮುಖ ಅಲೆಮಾರಿ ಜನಾಂಗವಾಗಿದೆ.

ಅಧ್ಯಯನದ ಉದ್ದೇಶ

ಅಲೆಮಾರಿ ಬುಡಕಟ್ಟು ಜನಾಂಗಕ್ಕೆ ಸೇರಿದ ಮದಾರಿ ಅಥವಾ ಖಲಂದರರು ಒಬ್ಬರಾಗಿದ್ದಾರೆ. ''ಕರಡಿಯಾಡಿಸುವುದು'' ಮೂಲ ವೃತ್ತಿ ಹಾಗೂ ವಂಶಪಾರಂಪರಿಕ ವೃತ್ತಿ ತಲೆತಲಾಂತರಗಳಿಂದ ಬಂದ ಈ ವೃತ್ತಿಯು ಇಂದಿಗೂ ಮದಾರಿಗಳಿಂದ ಪೋಷಿಸಲ್ಪಟ್ಟಿದೆ. ಇದೊಂದು ವೃತ್ತಿ ಪ್ರದರ್ಶನ ಕಲೆಯಾಗಿದ್ದು ಈ ವೃತ್ತಿಯನ್ನು ಮಾಡಿಕೊಂಡುಖಲಂದರ ಮದಾರಿ ಜನಾಂಗ ಹೊಟ್ಟೆಯನ್ನು ತುಂಬಿಸಿಕೊಳ್ಳುತ್ತಾರೆ. ಈ ವೃತ್ತಿ ಪರಂಪರೆಯು ಚರಿತ್ರೆಯಲ್ಲಿ ಬರುವ ರಾಜಪಾಹಿ ಆಳ್ವಿಕೆ ಕಾಲಕ್ಕಾಗಲೇ ಮನರಂಜನೆಯನ್ನು ನೀಡುವ ಕಲಾವರ್ಗವೆಂದು ಕರೆಸಿಕೊಂಡದ್ದನ್ನು ಚರಿತ್ರೆಯಲ್ಲಿ ನೋಡಬಹುದಾಗಿದೆ. ಗೌಡ ಶ್ಯಾನುಭೋಗ, ಪಾಳೆಗಾರರಂತಹ ಪ್ರಮುಖರ ಆಳ್ವಿಕೆಯ ಕಾಲದಲ್ಲಿ ಇವರೆಲ್ಲರ ಅನುಮತಿಯನ್ನು ಪಡೆದು ಊರೊಳಗೆ ಪ್ರವೇಶ ಮಾಡಬೇಕಾಗಿತ್ತು. ಇಂತಹ ಕರಡಿಯಾಡಿಸುವ ಕ್ರೀಡೆಗೆ ಅಂದಿನ ಕಾಲದಲ್ಲಿ ಜನರಿಂದ ಅರಸರಿಂದ, ಗೌಡ, ಶ್ಯಾನುಬೋಗರಿಂದ ಹೆಚ್ಚು ಪ್ರೋತ್ಸಾಹ, ಚಪ್ಪಾಳೆ ಲಭಿಸುವುದರ ಜೊತೆಗೆ ರಾಜರಿಂದ ದಾನ ದತ್ತಿ ಪುರಸ್ಕಾರಗಳು ಹಾಗೂ ವೃತ್ತಿ ನಡೆಸಲು ಅನುಮತಿ ಪತ್ರವನ್ನು ನೀಡಲಾಗುತ್ತಿತ್ತು. ಜೊತೆಗೆ ಈ ಜನರಿಗೆ ವಿಶೇಷ ಸ್ಥಾನವನ್ನು ಕೊಡಲಾಗುತ್ತಿತ್ತು.

ಮೈಸೂರು ಅರಸರು ಈ ಕರಡಿಯಾಡಿಸುವಿಕೆಯನ್ನು ಪ್ರತಿ ''ಜನಪದ ಕ್ರೀಡೆ''ಯೆಂದೆ ಹೆಸರು ಕೊಟ್ಟರು ಈ ಕ್ರೀಡೆಯನ್ನು ವರ್ಷ ಹಬ್ಬದ ಸಂದರ್ಭದಲ್ಲಿ ನಡೆಸುತ್ತಿರುವ ಸಂದರ್ಭಗಳು ಚರಿತ್ರೆಯಲ್ಲಿ ಕಾಣಬಹುದು. ಇಂತಹ ಕ್ರೀಡೆಯೇ ಈ ಜನಾಂಗದ ಮೂಲ ಚಹರೆಯನ್ನು ಗುರುತಿಸಲು ಅಧ್ಯಯನ ಕಾರರಿಗೆ ಸಹಾಯಕವಾಗಿದೆ. ಮೊಗಲ್ ಅರಸರ ಕಾಲದಲ್ಲಿ ಈ ಸಮುದಾಯ ಪ್ರವೇಶಿಸಿರುವ ಸಂಗತಿಗಳು ನಮಗೆ ಇತಿಹಾಸದಿಂದ ತಿಳಿದುಬರುತ್ತದೆ. ಕರಡಿಯಾಡಿಸುವಿಕೆ ಕೇವಲ ಪ್ರದರ್ಶನ ಕಲೆಯಾಗಿರುವುದರ ಜೊತೆಗೆ ನಮ್ಮ ಸಮಾಜದಲ್ಲಿ ನಶಿಸಿಹೋಗುತ್ತಿರುವ ಜನಪದರ ನಂಬಿಕೆ ಸಂಪ್ರದಾಯ. ಕಾಪಾಡಿಕೊಂಡು ಬಂದಿರುವುದು ಬಹಳ ವಿಶಿಷ್ಟವೆನಿಸಿದೆ. ಇದರ ಜೊತೆಗೆ ಕರಡಿ ಪ್ರಾಣಿ ಪುರಾಣದಲ್ಲಿ ಬರುವ ತ್ರೇತಾಯುಗದ ಜಾಂಬವಂತನಾಗಿ ರಾಮಾಯಣದ ರಾಮನ ಸಹಾಯಕನಾಗಿ ಬರುವ ಪಾತ್ರವು ಯಾರಿಗೆ ತಾನೆ ಗೊತ್ತಿಲ್ಲ. ನಮ್ಮ ಜನಪದರು ಪುರಾಣದಲ್ಲಿ ನಂಬಿಕೆವುಳ್ಳವರು ಈ ಪುರಾಣದ ಪ್ರಮುಖ ವ್ಯಕ್ತಿಯಾಗಿರುವ ಅಂದಿನ ಜಾಂಬವಂತ ಇಂದು

ಕರಡಿಯ ರೂಪವನ್ನು ಧರಿಸಿರುವ ಅಂಶಗಳೆಲ್ಲ ಈ ಮದಾರಿ ಖಲಂದರರ ವೃತ್ತಿಗೆ ಇನ್ನಷ್ಟು ಪುಷ್ಟಿಯನ್ನು ನೀಡಿವೆ. ನಿಶ್ಚಿತ ಆದಾಯ ಆರ್ಥಿಕ ಮೂಲವನ್ನು ಹೊಂದಿರದ ಮದಾರಿಗಳು ನೆಲ-ನೆಲೆ ಎರಡನ್ನು ಹೊಂದಿಲ್ಲದವರು ಎಂದರೇ ತಪ್ಪಾಗಲಾರದು. ಸಮಾಜದ ದೃಷ್ಟಿಯಲ್ಲಿ ಇವರು ಕೇವಲ ರಂಜಿಸುವ ವರ್ಗಮಾತ್ರವೆನಿಸಿದ್ದು ತನ್ನ ಜೀವನವನ್ನೆಲ್ಲಾ ಕರಡಿ ಆಡಿಸುವುದರಲ್ಲಿಯೇ ಕಳೆದು ಮುಂದಿನ ಭವಿಷ್ಯತ್ತಿನ ಯೋಜನೆಗಳ ಬಗೆಗೆ ಚಿಂತಿಸದೆ ಅಂದು ಸಂಪಾದಿಸಿದ ದುಡ್ಡನ್ನು ಅಂದೆ ಖರ್ಚುಮಾಡಿ ಹೊಟ್ಟೆ ತುಂಬಿಸಿಕೊಂಡು ನೆಮ್ಮದಿಯ ಜೀವನವನ್ನು ನಡೆಸುತ್ತಾಬರುವಂತಹದ್ದು, ಈ ಮದಾರಿಗಳ ಜೀವನ ಕ್ರಮವನ್ನು ನೋಡಿದಾಗ ಯಾವುದೇ ಕಪಟತನವಿರದ ಶುದ್ಧ ಪರಿಪೂರ್ಣವಾದ ಜೀವನ ನಿರ್ವಹಣೆ ಮಾಡುವಂತಹವರು. ಮುಖದಲ್ಲಿ ಮುಗ್ಧತೆಯ ಜೊತೆಗೆ ಅಸಹಾಯಕತೆಗಳು ಕಂಡುಬರುತ್ತವೆ. ತನಗೆ ಸಿಗಬಹುದಾದ ಹಕ್ಕುಗಳನ್ನು ಪಡೆಯುವಲ್ಲಿ ಅಸಹಾಯಕತೆಯನ್ನು ಹೊಂದಿರುವುದು ತಿಳಿಯುತ್ತದೆ.

ಅವಿಭಕ್ತ ಕುಟುಂಬಗಳು ಹೆಚ್ಚಾಗಿರುವ ಮದಾರಿಗಳಲ್ಲಿ ಅನಕ್ಷರತೆ, ಬಡತನ ಅಜ್ಞಾನ, ಸಂಪ್ರದಾಯದಲ್ಲಿ ನಂಬಿಕೆ, ಬೇರೆ ವೃತ್ತಿಯ ತಿಳುವಳಿಕೆ ಇಲ್ಲದಿರುವುದರಿಂದ ಜೀವನ ನಿರ್ವಹಣೆಯಲ್ಲಿ ಏರುಪೇರುಗಳಾಗಿ ಸದಾ ಕುಟುಂಬದಲ್ಲಿ ಜಗಳಗಳು, ಪುರುಷನು ಕುಡಿತದ ಚಟದಿಂದ ಮಹಿಳೆಯು ಕೆಲವು ಬಾರಿ ಹಿಂಸೆ ಅನುಭವಿಸುವುದು ಈ ಕುಟುಂಬಗಳಲ್ಲಿ ಕಂಡುಬರುತ್ತದೆ. ಇದಕ್ಕೆ ಮೂಲ ಕಾರಣವೇ ಕರಡಿಯಾಟ ನಿಷೇದದಿಂದಾಗಿ ಇಂತಹ ಕೃತ್ಯಗಳು ಸಂಸಾರದಲ್ಲಿ ದಿನನಿತ್ಯ ಜರುಗುತ್ತಿರುತ್ತವೆ. ಇತರ ಸಮುದಾಯಗಳಿಗೆ ಸರಕಾರ ಸೌಲಭ್ಯ ಕಲ್ಪಿಸಿಕೊಟ್ಟಂತೆ ತಮಗೂ ಕಲ್ಪಿಸಿಕೊಡುತ್ತಿಲ್ಲ ಎಂಬ ಕೊರಗು ಕೂಡಾ ಅಧ್ಯಯನದ ಪ್ರಮುಖ ತಾತ್ವಿಕ ಸಂಗತಿ ಎನಿಸಿದೆ. ಪ್ರಸ್ತುತ ದಿನಮಾನಗಳಲ್ಲಿ ಮದಾರಿಗಳ ಕರಡಿಯಾಡಿಸುವಿಕೆ ವೃತ್ತಿಯು ಸಮಾಜಕ್ಕೆ ಅಪರಾಧವೆಂಬಂತೆ ಕಂಡುಬಂದಿದೆ. ಸರಕಾರದ ಹೊಸ ನೀತಿ ೧೯೭೨ರ ಪ್ರಾಣಿ ಹಿಂಸೆ ನಿಷೇದ ಎಂಬ ಕಾಯಿದೆಯಿಂದಾಗಿ ಮದಾರಿಗಳ ಸಾವಿರಾರು ವರ್ಷದ ಪಾರಂಪರಿಕ ವೃತ್ತಿಗೆ ಬಲವಾದ ಪೆಟ್ಟನ್ನು ಕೊಟ್ಟಂತಾಗಿದೆ. ಕುಟುಂಬಗಳಲ್ಲಿ ತಲ್ಲಣವುಂಟಾಗಿದ್ದು ವೃತ್ತಿಯಿಲ್ಲದೆ ಮದಾರಿಗಳು ಬೇರೆ ಊರಿಗೆ ವಲಸೆ ಹೋಗತೊಡಗಿರುವುದು ಪ್ರಮುಖವೆನಿಸಿದೆ. ಈ ಸಮುದಾಯಕ್ಕೆ ಮೊದಲಿನ ಕಾಲದಲ್ಲಿ ಸಿಗುತ್ತಿದ್ದ ಗೌರವ ಪುರಸ್ಕಾರ ಜನರ ಪ್ರೋತ್ಸಾಹಗಳು ಇಂದು ಕಣ್ಮರೆಯಾಗಿವೆ. ಕರಡಿಯಾಡಿಸಿ ಬರುತ್ತಿದ್ದ ಅಲ್ಪಸ್ವಲ್ಪ ಹಣದಿಂದ ಹೊಟ್ಟೆ ತುಂಬಿಸಿಕೊಳ್ಳುವುದು ನಿಂತುಹೋಗಿದೆ. ಸರಕಾರದ ಯಾವ ಸೌಲಭ್ಯಗಳನ್ನು ಪಡೆಯದ ಇವರು ಈಗ ತಮ್ಮ ಜನಾಂಗದ ಅಸ್ತಿತ್ವ ಉಳಿಸಿಕೊಳ್ಳಲು ಹೆಣಗಾಡುತ್ತಿರುವುದು ಇಂದು ಕಂಡುಬರುತ್ತದೆ. ಮುಸ್ಲಿಂ ಜಾತಿಯೊಳಗೆ ಸೇರಿದ ಅಲ್ಪಸಂಖ್ಯಾತರೆಂದು ಸರಕಾರ ಘೋಷಿಸಿದ್ದರಿಂದ ಈ ಸಮುದಾಯದವರು ಬಹಳ ಸಂದಿಗ್ದ ಪರಿಸ್ಥಿತಿಯ ಬದುಕನ್ನು ನಡೆಸುತ್ತಿದ್ದಾರೆ.

ಮದಾರಿ ಜನಾಂಗದವರು ಸರಕಾರಕ್ಕೆ ತನ್ನ ಬೇಡಿಕೆಗಳನ್ನು ಸಲ್ಲಿಸುವುದಕ್ಕಾಗಿ ಹಗಲು, ರಾತ್ರಿ, ದಿನ, ವಾರವೆನ್ನದೆ ಧರಣಿ ಕೂತು ಹೋರಾಟಕ್ಕೆ ಸಿದ್ಧವಾಗಿ ನಿಂತಿದ್ದಾರೆ. ಈ ಸ್ಥಿತಿಯನ್ನು ನೋಡಿದಾಗ ಈ ಸಮುದಾಯದ ಅಸಹಾಯಕತೆಯು ಎದ್ದು ಕಾಣುತ್ತದೆ. ಇತರೆ ಸಮುದಾಯಗಳು ಸರಕಾರದ ಎಲ್ಲಾ ಸೌಲಭ್ಯಗಳನ್ನು ಪಡೆಯುತ್ತಿದ್ದು ಮೀಸಲಾತಿಯನ್ನು ಸಹ ಪಡೆದಿವೆ. ಆದರೆ ತಮ್ಮ (ಮದಾರಿ) ಜನಾಂಗಕ್ಕೆ

ಮಾತ್ರ ಇತ್ತ ಮೂಲ ವೃತ್ತಿಯೂ ಇಲ್ಲದೆ ಅತ್ತ ಬೇರೆವೃತ್ತಿ ಮಾಡಲು ಆರ್ಥಿಕ ಸಹಾಯವಿಲ್ಲದಿರುವುದರಿಂದ ಅತಂತ್ರ ರೀತಿಯ ಬದುಕನ್ನು ನಡೆಸುತ್ತಿರುವುದನ್ನು ನೋಡಬಹುದಾಗಿದೆ. ಇಂತಹ ಅತಂತ್ರ ಪರಿಸ್ಥಿತಿಗೆ ಕಾರಣಗಳನ್ನು ತಿಳಿಯುವುದು ಹಾಗೂ ಮದಾರಿಗಳು ತಮ್ಮ ಮೂಲ ವೃತ್ತಿಯಲ್ಲಿನ ಸಂವೇದನೆ, ಕರಡಿಯೊಂದಿಗಿನ ಒಡನಾಟ, ಕರಡಿಯ ಜತೆಗೆ ಜನಪದ ನಂಬಿಕೆಗಳು, ಮದಾರಿಗಳು ಸರಕಾರಕ್ಕೆ ಸಲ್ಲಿಸಿದ ಬೇಡಿಕೆಯಲ್ಲಿನ ವಾಸ್ತಾವಾಂಶಗಳನ್ನು ಕುರಿತು ತಿಳಿಯುವುದು ಅಧ್ಯಯನದ ಉದ್ದೇಶವಾಗಿದೆ.

ವ್ಯಾಪ್ತಿ

ಪ್ರಸ್ತುತ ನನ್ನ ಅಧ್ಯಯನಕ್ಕೆ "ಕರಡಿಯಾಡಿಸುವ ಮದಾರಿಗಳ ವೃತ್ತಿ ಜನಪದ" ಎಂಬ ವಿಷಯದ ವ್ಯಾಪ್ತಿಯನ್ನು ಬಳ್ಳಾರಿ ಹಾಗೂ ಕೊಪ್ಪಳ ಜಿಲ್ಲೆಗಳ ಆಯ್ದು ಕೆಲವು ಪ್ರದೇಶಗಳಾದ ಮರಿಯಮ್ಮನಹಳ್ಳಿಯ ಹಂಪಿನಕಟ್ಟೆ, ವೆಂಕಟಾಪುರ, ಹಾಗೂ ಕೊಪ್ಪಳದ ಹತ್ತಿರವಿರುವ ಮಂಗಳಾಪುರ, ಮುಂತಾದ ಹುಲಿಹೈದರ ಪ್ರದೇಶಗಳಿಗೆ ಮಾತ್ರ ನನ್ನ ಅಧ್ಯಯನದ ವ್ಯಾಪ್ತಿಯನ್ನು ಸೀಮಿತಗೊಳಿಸಿಕೊಂಡಿದ್ದು. ಉಳಿದಂತೆ ಕರ್ನಾಟಕದ ಕೆಲವು ಭಾಗಗಳಲ್ಲಿ ಮದಾರಿಗಳು ವಾಸಮಾಡುತ್ತಿದ್ದು, ಅವರ ವಾಸವಾಗಿರುವ ಪ್ರದೇಶಗಳನ್ನು ಪ್ರಸ್ತುತ ಪ್ರಬಂಧದಲ್ಲಿ ಹೆಸರಿಸಲಾಗಿದೆ.

ಅಧ್ಯಯನದ ವಿಧಾನ

ಪ್ರಸ್ತುತ ಅಧ್ಯಯನಕ್ಕಾಗಿ ಮಾಹಿತಿ ಸಂಗ್ರಹಣೆಗಾಗಿ ಕ್ಷೇತ್ರಕಾರ್ಯ ಕೈಗೊಂಡಾಗ ನಿರ್ದಿಷ್ಟ ಪ್ರಶ್ನಾವಳಿಯನ್ನು ರಚಿಸಿಕೊಳ್ಳಲಾಗಿದೆ. ಈ ಪ್ರಶ್ನಾವಳಿಯಿಂದ ಪಡೆದುಕೊಂಡ ಅಂಕಿ ಅಂಶಗಳನ್ನು ಈ ಅಧ್ಯಯನದುದ್ದಕ್ಕೂ ಬಳಸಿಕೊಳ್ಳಲಾಗಿದೆ. ಪ್ರತಿಯೊಂದು ಕುಟುಂಬದ ವಿವರವಾದ ಮಾಹಿತಿಯನ್ನು ಸಂದರ್ಶನದ ಮುಖಾಂತರ ಅಧ್ಯಯನದ ಅಗತ್ಯಕ್ಕೆ ತಕ್ಕಂತೆ ಪಡೆಯಲಾಗಿದೆ. ಪ್ರಸ್ತುತ ಅಧ್ಯಯನವು ಎರಡು ಜಿಲ್ಲೆಗಳಾದ ಬಳ್ಳಾರಿ ಹಾಗೂ ಕೊಪ್ಪಳ ಪ್ರದೇಶದ ಆಯ್ದ ಪ್ರದೇಶಗಳಾದ ಹಂಪಿನಕಟ್ಟೆ, ವೆಂಕಟಾಪುರ, ಮಂಗಳಾಪುರ, ಹುಲಿಹೈದರ ನಾಲ್ಕು ಪ್ರದೇಶಗಳನ್ನು ಆಯ್ದುಕೊಂಡು ಪ್ರತಿಯೊಂದು ಕುಟುಂಬಗಳಿಂದ ಮಾಹಿತಿಯನ್ನು ಸಹಬಾಗಿತ್ವ ಅವಲೋಕನದಿಂದ ಪಡೆದು ಪ್ರತಿಯೊಂದು ಮದಾರಿ ಕುಟುಂಬದ ಸದಸ್ಯರ ಜೊತೆಗಿನ ಚರ್ಚೆಯ ಮುಖಾಂತರ ಆ ಭಾಗದ ಪ್ರದೇಶಗಳ ಹಲವಾರು ವಿಷಯಗಳನ್ನು ಸೂಕ್ಷ್ಮವಾಗಿ ಗಮನಿಸಿ ಮಾಹಿತಿಯನ್ನು ಪಡೆಯಲಾಗಿದೆ.

ಸ್ವರೂಪ

ಕರಡಿಯಾಡಿಸಿ ಅಥವಾ ಪ್ರದರ್ಶಿಸಿ ಹೊಟ್ಟೆತುಂಬಿಸಿಕೊಳ್ಳುತ್ತಾ ಬಂದಿರುವ ಮದಾರಿಗಳ ಈ ವೃತ್ತಿಯ ಚರಿತ್ರೆ ಇಂದು ನಿನ್ನೆಯದಲ್ಲ ಸಾವಿರಾರು ವರ್ಷಗಳ ಹಿಂದಿನ ಮಾತಾಗಿದೆ. ಚರಿತ್ರೆಗಳಲ್ಲಿಯೂ ತಿಳಿಯಬಹುದಾಗಿದೆ. ಭಿಕ್ಷೆಬೇಡುವುದಾಗಲಿ, ಕಳ್ಳತನ, ದರೋಡೆಯಂತಹ ಕೀಳುಮಟ್ಟದ ದಂದೆಗಿಳಿಯದ ಈ ಜನಾಂಗದವರು ಅಮಾಯಕ ಮುಗ್ಧರು ಆಗಿರುವರು. ತನ್ನ ವಂಶವೃತ್ತಿಯಾದ ಕರಡಿ ಆಟ ಆಡಿಸಿಯೇ ಸಮಾಜದೊಳಗೆ ತನ್ನ ಮೂಲ ಅಸ್ತಿತ್ವವನ್ನು ಕಾಪಾಡಿಕೊಂಡು ಬಂದಿರುವವರು. ಇವರಾಗಿದ್ದಾರೆ ಇವರ ಈ

ಕಲೆಯು ಮೊಗಲ್ ಅರಸರ ಕಾಲದಲ್ಲಿಯೇ ಇರುವ ಬಗೆಗೆ ಕೆಲವು ಮಾಹಿತಿಗಳಿಂದ ತಿಳಿದುಬರುತ್ತದೆ. ಆರ್ಥಿಕ ಮೂಲ ಹೊಂದಿರದ ಮದಾರಿಗಳು ಅನುತ್ಪಾದಕ ಸಮುದಾಯವಾಗಿ ರೂಪುಗೊಂಡಂತಹವರು. ತಮ್ಮದೆನಿಸಿಕೊಳ್ಳುವ ಅಥವಾ ಸ್ವಂತ ಎನಿಸುವ ಯಾವುದೇ ರೀತಿಯ ಸರ್ಕಾರದ ಸೌಲಭ್ಯಗಳಿಲ್ಲದ ನಿರ್ಲಕ್ಷ್ಯಕ್ಕೊಳಗಾದ ಅಲೆಮಾರಿವರ್ಗವೆನಿಸಿದೆ. ಹಿರಿಯರು ಮಾಡಿಟ್ಟ ಯಾವುದೇ ಆಸ್ತಿ, ಮನೆ, ಹೊಲಗಳಿಲ್ಲ ಕರಡಿ ಆಟವೇ ಮೂಲ ವೃತ್ತಿ ದೇವರು ರಕ್ಷಕ, ಅನ್ನದಾತ ಎಂದು ನಂಬಿಕೊಂಡು ಬಂದಿದ್ದಾರೆ. ಈ ಸಮುದಾಯದ ಮೂಲ ಸಂಸ್ಕೃತಿಯು ಅವಸಾನದ ಅಂಚಿನಲ್ಲಿದೆ. ಸರ್ಕಾರದ ಪ್ರಾಣಿ ನಿಷೇದ ಕಾಯಿದೆಯಿಂದ ಇನ್ನಷ್ಟು ಜರ್ಜರಿತಗೊಂಡು ಕುಟುಂಬಗಳು ತತ್ತರಿಸಿ ಹೋಗಿರುವುದು ಕಂಡುಬರುತ್ತದೆ.

ಬಹಳ ಸಂದಿಗ್ದ ರೀತಿಯ ಬದುಕನ್ನು ನಡೆಸುತ್ತಿದೆ. ಸಮಾಜದ ಕೆಲವು ಶ್ರೀಮಂತವರ್ಗ ಅಧಿಕಾರಿಶಾಹಿಗಳು ಇಂತಹ ಜನರ ಪ್ರದರ್ಶನ ಕಲೆಯನ್ನು ನೋಡಿ ಸಂತೋಷಗೊಂಡು ಚಪ್ಪಾಳೆ ತಟ್ಟುತ್ತಾರೆ. ಹೊರತು ಈ ಕಲೆ ನಂಬಿಕೊಂಡವರಿಗೆ ಸಹಾಯ ಹಸ್ತವನ್ನು ಕಲ್ಪಿಸಿಕೊಡಲು ಹಿಂದೆ ಸರಿಯುತ್ತಿರುವುದು ತುಂಬಾ ನೋವಿನ ಸಂಗತಿಯಾಗಿದೆ.

ಮೂಲತಃ ಅಲೆಮಾರಿಗಳಾದ ಮದಾರಿಗಳು ಈಗ ಒಂದು ಕಡೆ ನೆಲೆ ನಿಂತು ವಿಶಿಷ್ಟವಾದ ಜೀವನವನ್ನು ನಿರ್ವಹಿಸಿಕೊಂಡು ಬಂದಿವೆ. ಬಹುಭಾಷಿಕರಾಗಿರುವ ಮದಾರಿಗಳು ಸಂದರ್ಭಕ್ಕೆ ತಕ್ಕಂತೆ ಇತರೆ ಭಾಷೆಗಳನ್ನು ಪ್ರಯೋಗಿಸುವ ನಿಪುಣರೆನಿಸಿದ್ದಾರೆ. ಈ ನೈಪುಣ್ಯತೆ ವೃತ್ತಿಯಿಂದ ಲಭಿಸಿದೆ. ಆರ್ಥಿಕವಾಗಿ, ರಾಜಕೀಯವಾಗಿ ಸಾಮಾಜಿಕವಾಗಿ ಬಹಳ ಹಿಂದುಳಿದಿರುವ ಮದಾರಿಗಳು ಸರಕಾರದ ಯಾವುದೇ ಸೌಲಭ್ಯಗಳು ಇವರ ಮನೆಯ ಬಾಗಿಲಿಗೆ ತಲುಪಿಲ್ಲ. ಅನಕ್ಷರತೆಯು ಇವರನ್ನು ಎಲ್ಲಾ ರಂಗದಿಂದ ಹಿಂದುಳಿಯುವಂತೆ ಮಾಡಿದೆ. ಅನಕ್ಷರಸ್ಥರಾದ ಮದಾರಿಗಳು ಮುಸ್ಲಿಂ ಸಮುದಾಯದ ಒಂದು ಉಪವರ್ಗಕ್ಕೆ ಸೇರಿದವರಾಗಿದ್ದು ಮುಸ್ಲಿಂ ಸಂಪ್ರದಾಯ ಬದ್ದ ಜೀವನವನ್ನು ಅಳವಡಿಸಿಕೊಂಡವರು. ಆದರೂ ಹಿಂದೂ ಹಬ್ಬ ಆಚರಣೆಗಳನ್ನು ಜೀವನದ ಒಂದು ಭಾಗವನ್ನಾಗಿಸಿಕೊಂಡಿರುವುದು ಇವರಲ್ಲಿ ಕಂಡುಬರುತ್ತದೆ. ಸಂಪ್ರದಾಯಸ್ಥ ಮುಸ್ಲಿಂರು ಇವರ ಈ ಪದ್ಧತಿ ವಿಧಾನಗಳನ್ನು ವಿರೋಧಿಸಿ ಮದಾರಿಗಳನ್ನು ಬಹಳ ಕೀಳು ದೃಷ್ಟಿಯಿಂದ ನೋಡುವುದನ್ನು ಕಾಣಬಹುದಾಗಿದೆ.

ಭಾಷೆ ಉಡುಗೆ, ತೊಡುಗೆ ಧಾರ್ಮಿಕತೆಗೆ ಸಂಬಂಧಿಸಿದಂತೆ ಹೇಳುವುದಾದರೆ ಹಿಂದೂಗಳ ಎಲ್ಲಾ ಹಬ್ಬಗಳನ್ನು ಆಚರಿಸುತ್ತಾರೆ ಬದುಕಿನಲ್ಲಿ ಅಳವಡಿಸಿಕೊಂಡಿದ್ದಾರೆ. ಇದಕ್ಕೆ ನಿದರ್ಶನವೆಂಬಂತೆ ಹಿಂದು ದೇವತೆಯಾದ ಚೌಡಮ್ಮನನ್ನು ಇಂದಿಗೂ ಪೂಜಿಸುತ್ತಾರೆ. ಹಾಗೂ ಹಬ್ಬವನ್ನು ಪ್ರತಿವರ್ಷ ಆಚರಿಸುತ್ತಾರೆ. ಇಂದಿನ ದಿನಗಳಲ್ಲಿ ಹಿಂದು ಸಂಸ್ಕೃತಿ ಮುಸ್ಲಿಂ ಸಂಸ್ಕೃತಿ ಹೆಸರಿನಲ್ಲಿ ತ್ರಿಶೂಲ, ಜಿಹಾದ್ ನಂತಹ ದೀಕ್ಷೆಯನ್ನು ಹಿಡಿದು ಪಠಿಸುವವರಿಗೆ ಮದಾರಿಯಂತಹ ಇನ್ನಿತರ ಸಮುದಾಯಗಳು ಸೂಕ್ತಪಾಠವನ್ನು ತಿಳಿಸಿಕೊಡುತ್ತದೆ. ಕೋಮುಜ್ವಾಲೆ ಸೃಷ್ಟಿಸುವವರಿಗೆ ತಕ್ಕ ಪಾಠವನ್ನು ಹೇಳುವ ಕೆಲಸವನ್ನು ಈ ಸಮುದಾಯ ಮಾಡುತ್ತವೆ.

ಅಧ್ಯಾಯ ಎರಡು

ಮದಾರಿಗಳ ಭೌಗೋಳಿಕ ಪರಿಸರ

ಅಧ್ಯಾಯ ಎರಡು

ಮದಾರಿಗಳ ಭೌಗೋಳಿಕ ಪರಿಸರ

ಬಳ್ಳಾರಿ ಜಿಲ್ಲೆಯು ಕರ್ನಾಟಕ ರಾಜ್ಯದ ಪೂರ್ವಭಾಗದ ಮಧ್ಯದಲ್ಲಿ ದಕ್ಷಿಣೋತ್ತರದವರೆಗೆ ಹಬ್ಬಿದೆ. ೧೪°-೧೩ ಮತ್ತು ೧೫°-೫೦ ಉತ್ತರ ಅಕ್ಷಾಂಶ ಹಾಗೂ ೭೫°-೪೦ ಮತ್ತು ೭೭°-೧೧ ಪೂರ್ವರೇಖಾಂಶ ಇವುಗಳ ಮಧ್ಯದಲ್ಲಿದೆ. ಜಿಲ್ಲೆಯು ಉತ್ತರದಲ್ಲಿ ರಾಯಚೂರು ಜಿಲ್ಲೆ ಪಶ್ಚಿಮದಲ್ಲಿ ಧಾರವಾಡ ಜಿಲ್ಲೆ ದಕ್ಷಿಣದಲ್ಲಿ ಚಿತ್ರದುರ್ಗ ಜಿಲ್ಲೆ ಹಾಗು ಪೂರ್ವದಲ್ಲಿ ಆಂಧ್ರಪ್ರದೇಶದ ಕರ್ನೂಲು ಜಿಲ್ಲೆ ಮತ್ತು ಅನಂತಪುರ ಜಿಲ್ಲೆಗಳಿಂದ ಸುತ್ತುವರಿದಿದೆ. ತುಂಗಾಭದ್ರಾ ನದಿಯು ಜಿಲ್ಲೆಯ ಪಶ್ಚಿಮ ಮತ್ತು ಉತ್ತರ ಮೇರೆಯಾಗಿ ಹರಿಯುತ್ತದೆ. ಜಿಲ್ಲೆಯ. ಹವಾಮಾನವು ವರ್ಷದಲ್ಲಿ ಹೆಚ್ಚಿನಭಾಗ ಶುಷ್ಕವಾಗಿದ್ದು ಬೇಸಿಗೆಯು ಉಷ್ಣಾಂಶಗಳಿಂದ ಕೂಡಿರುತ್ತದೆ. ಬೇಸಿಗೆ ಕಾಲವು ಮಾರ್ಚ್‌ನಿಂದ ಮೇ ವರೆಗೆ ಇದ್ದು ರಾಜ್ಯದಲ್ಲಿಯೇ ಹೆಚ್ಚು ಉಷ್ಣಾಂಶತೆಯಿಂದ ಕೂಡಿರುತ್ತದೆ.

ಜಿಲ್ಲೆಯು ೮೪೨೦ ಚ.ಕಿ.ಮೀ ವಿಸ್ತೀರ್ಣ ಹೊಂದಿದ್ದು ರಾಜ್ಯದ ಒಟ್ಟು ಶೇ. ೬ ರಷ್ಟು ವಿಸ್ತೀರ್ಣವನ್ನು ಹೊಂದಿದೆ. ವಿಸ್ತೀರ್ಣದಲ್ಲಿ ಬಳ್ಳಾರಿ ತಾಲೂಕು ಹೆಚ್ಚಿನ ವಿಸ್ತೀರ್ಣ ಅಂದರೆ ೧೬೮೯ ಚ.ಕಿ.ಮೀ. (ಶೇ೨೦) ಹೊಂದಿದ್ದು ಅತಿ ಕಡಿಮೆ ಎಂದರೇ ೯೩೪ ಚ.ಕಿ.ಮೀ. (ಶೇ ೧೧) ವಿಸ್ತೀರ್ಣವನ್ನು ಹೊಸಪೇಟೆ ತಾಲೂಕು ಹೊಂದಿರುತ್ತದೆ. ಬಳ್ಳಾರಿ ಜಿಲ್ಲೆಯು, ಹಡಗಲಿ ಹೆಚ್.ಬಿ.ಹಳ್ಳಿ ಹೊಸಪೇಟೆ, ಕೂಡ್ಲಿಗಿ, ಸಂಡೂರು ಹಾಗೂ ಸಿರಗುಪ್ಪ ತಾಲೂಕುಗಳನ್ನು ಹೊಂದಿರುತ್ತದೆ. ಜಿಲ್ಲೆಯ ಕೇಂದ್ರಸ್ಥಾನ ಬಳ್ಳಾರಿ.

ಜಿಲ್ಲೆಯ ಪೂರ್ವಭಾಗದಲ್ಲಿ ಬರುವ ಹೊಸಪೇಟೆ ತಾಲೂಕು ಪ್ರದೇಶದಿಂದ ೨೦ ಕಿ.ಮೀ. ಕ್ರಮಿಸಿದರೆ ಮರಿಯಮ್ಮನಹಳ್ಳಿ ಹೋಬಳಿ ಬರುತ್ತದೆ. ಇಲ್ಲಿಂದ ೪ ಕಿ.ಮೀ. ದೂರದಲ್ಲಿ ಹಂಪಿನಕಟ್ಟೆ ವೆಂಕಟಾಪುರ ಎಂಬ ಎರಡು ಪುನರ್‌ವಸತಿ ಗ್ರಾಮಗಳು ಕಂಡುಬರುತ್ತವೆ. ಈ ವೆಂಕಟಾಪುರ ಗ್ರಾಮವು ತುಂಗಭದ್ರಾ ಜಲಾಶಯದಲ್ಲಿ ಮುಳುಗಿದ್ದು ಇಲ್ಲಿನ ನಿವಾಸಿಗಳು ಹೊಸನೆಲೆಯನ್ನು ಮಾಡಿಕೊಂಡು ಇದನ್ನು ವೆಂಕಟಾಪುರ ಎಂಬ ಹೆಸರಿನಿಂದ ಕರೆದುಕೊಂಡಿದ್ದಾರೆ. ವೆಂಕಟಾಪುರ ಎಂಬ ಸ್ಥಳನಾಮವು ಹಳೆಯ ಊರಿನಲ್ಲಿದ್ದ ವಿಷ್ಣುದೇವಾಲಯದಿಂದ ಬಂದಿದೆ. ಈ ಗ್ರಾಮಕ್ಕೆ ಸೇರಿದ ಮತ್ತೊಂದು ವಸತಿ ನೆಲೆಯು ಹಂಪಿನಕಟ್ಟೆ ಎಂಬ ಹೆಸರನ್ನು ಹೊಂದಿದೆ. ಹಳೆಯ ಹಂಪಿನಕಟ್ಟೆಯು ನೀರಿನಲ್ಲಿ ಮುಳುಗಿದ ನಂತರ ಹೊಸನೆಲೆಗೆ ಇದೇ ಹೆಸರನ್ನು ಇಟ್ಟುಕೊಂಡಿದ್ದಾರೆ. ಸರ್ಕಾರವು ಮುಳುಗಿಹೋದ ಹಂಪಿನಕಟ್ಟೆ ಗ್ರಾಮದ ಜನರಿಗೆ ಬುಕ್ಕಿನ ಮರಡಿ ಕಾಲೋನಿ

ಎಂಬ ಹೆಸರಿನಲ್ಲಿ ವಸತಿ ವ್ಯವಸ್ಥೆಯನ್ನು ಮಾಡಿಕೊಟ್ಟಿತು. ಆದರೆ ಗ್ರಾಮದ ಜನರು ತಮ್ಮ ಹೊಸ ಕಾಲೋನಿಗೆ ಹಳೆಯ ಗ್ರಾಮದ ಹೆಸರನ್ನೇ ಇಟ್ಟುಕೊಂಡಿದ್ದಾರೆ.

ಈ ಎರಡು ಗ್ರಾಮಗಳು ಒಂದಕ್ಕೊಂದು ಕೂಡಿಕೊಂಡ ಗ್ರಾಮಗಳಾಗಿವೆ. ಇಲ್ಲಿ ಎಲ್ಲಾ ಧರ್ಮದ ಜನರು ವಾಸವಾಗಿದ್ದಾರೆ. ಇಂತಹ ಗ್ರಾಮಗಳಲ್ಲಿ ಕರಡಿಯಾಡಿಸುವ ಅಲೆಮಾರಿ ಮದಾರಿ ಖಲಂದರರ ಕೆಲವೇ ಕುಟುಂಬಗಳು ವಾಸವಾಗಿದ್ದಾರೆ. ಇವರು ಆಡುವ ಭಾಷೆ, ವೇಷ ಭೂಷಣ, ಮೂಲ ವೃತ್ತಿಯಿಂದ ಬಹುಬೇಗನೆ ಎಲ್ಲರ ಗಮನ ಸೆಳೆಯುತ್ತಾರೆ. ಈ ಗ್ರಾಮಕ್ಕೆ ಹೋದ ಕೂಡಲೆ ಆಕಸ್ಮಿಕವಾಗಿ ಕರಡಿಯೇನಾದರೂ ಕಣ್ಣಿಗೆ ಕಾಣಿಸಿಕೊಂಡರೆ ಎರಡು ಮಾತಿಲ್ಲ ಅದು ಕರಡಿ ಆಡಿಸುವವರ ಮನೆ ಎಂದು ಖಾತರಿಯಾಗುತ್ತದೆ.

ಡಣಾಪುರ ಗ್ರಾಮ ಪಂಚಾಯಿತಿ ಅಡಿಯಲ್ಲಿ ವೆಂಕಟಾಪುರ ಹನುಮನಹಳ್ಳಿ ಹಂಪಿನಕಟ್ಟೆ ಮೂರು ಗ್ರಾಮಗಳು ಬರುತ್ತವೆ. ಡಣಾಪುರ ಗ್ರಾಮ ಪಂಚಾಯಿತಿಯ ಒಟ್ಟು ವಿಸ್ತೀರ್ಣ ೨೦೮೯.೬೦ ರಷ್ಟಿದೆ. ಕಬ್ಬಿಣ ಮ್ಯಾಂಗನೀಸ್ ನಂತಹ ಖನಿಜಸಂಪತ್ತಿಗೆ ತುತ್ತಾಗಿರುವ ಈ ಭಾಗದ ಕೃಷಿ ಭೂಮಿಯಲ್ಲಿ ಬೆಳೆ ಬೆಳೆಯಲು ಫಲವತ್ತತೆಯನ್ನು ಕಳೆದುಕೊಂಡು ಬಂಜರುಭೂಮಿ ಆಗಿವೆ. ಕಬ್ಬಿಣದ ಪುಡಿ ಆಸೆಗಾಗಿ ಸಮೃದ್ಧ ಹೊಲಗಳನ್ನು ಇಂದು ನಾಶ ಮಾಡಿರುವ ಗಣಿ ಮಾಲೀಕರು ಎಲ್ಲಿನೋಡಿದರೂ ಇವರ ಕಾರ್ಖಾನೆಗಳೇ ಕಣ್ಣಿಗೆ ಕಾಣಿಸುತ್ತವೆ. ಕೆಲ ಭೂಮಿಗಳು ಇಂದು ಉಳಿದುಕೊಂಡಿದ್ದು ಇಂತಹ ಭೂಮಿಯಲ್ಲಿ ಕೆಲವು ಕುಟುಂಬಗಳು ಕೃಷ್ಷಿ ಮಾಡಿ ಬೆಳೆ ಬೆಳೆಯುತ್ತಿರುವರು. ಆದರೆ ಕರಡಿ ಆಡಿಸುವವರಿಗೆ ಯಾವುದೇ ಭೂಮಿ ಹೊಲ ವಸತಿಗಳಿಲ್ಲ ಅಲೆಮಾರಿಗಳಾದ ತಪ್ಪಿಗೆ ಎಲ್ಲವನ್ನು ಕಳೆದುಕೊಂಡು ಈಗ ಇಲ್ಲಿಯೇ ನೆಲೆಯೂರಿದ್ದಾರೆ. ಈ ಭಾಗದಲ್ಲಿ ಯಾವುದೇ ಏತನೀರಾವರಿ ಕೊಳವೆ ಭಾವಿಗಳಿಲ್ಲ ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರವು ಇಲ್ಲ. ಮರಿಯಮ್ಮನಹಳ್ಳಿ ಪಟ್ಟಣಕ್ಕೆ ಹೋಗಬೇಕೆಂದರೆ ಸಾರಿಗೆ ವ್ಯವಸ್ಥೆ ಇರುವುದಿಲ್ಲ. ರಸ್ತೆಯು ತಗ್ಗು ಗುಂಡಿಗಳಿಂದ ಕೂಡಿದೆ. ಜನರ ಅನುಕೂಲಕ್ಕೆ ಖಾಸಗಿಯ ಎರಡು ಆಟೋಗಳು (೩ ಗಾಲಿ ಆಟೋ) ಬಂದು ಹೋಗು ಮಾಡುತ್ತಿವೆ. (ಸಾಯಂಕಾಲ ೬ ಗಂಟೆಯ ತನಕ ಮಾತ್ರ) ಸಂತೆಯ ದಿನ (ಸೋಮವಾರ)ದಂದು ಜನಸಂದಣಿ ಹೆಚ್ಚಿಗೆ ಇದ್ದಾಗ ಕಾಲ್ನಡಿಗೆಯಲ್ಲಿಯೇ ಹೋಗುವರು. ೨೧ ನೇ ಶತಮಾನದಲ್ಲೂ ಈ ಗ್ರಾಮಗಳಿಗೆ ಸಾರಿಗೆ ಆರೋಗ್ಯ ಸ್ವಚ್ಛಗ್ರಾಮದಂತಹ ಯೋಜನೆಗಳು ಅಭಿವೃದ್ಧಿಯಾಗದಿರುವುದು ಸರ್ಕಾರದ ದಿವ್ಯ ನಿರ್ಲಕ್ಷ್ಯತೆಯನ್ನು ತೋರಿಸುತ್ತದೆ.

ಕರ್ನಾಟಕದ ಹೃದಯ ಭಾಗದಲ್ಲಿರುವ ಕೊಪ್ಪಳ ಕರ್ನಾಟಕದ ಇತಿಹಾಸದಲ್ಲಿ ಮಹತ್ವದ ಸ್ಥಾನ ಪಡೆದಿದೆ. ಶಾಸನಗಳಲ್ಲಿ ಹಾಗೂ ಸಾಹಿತ್ಯದಲ್ಲಿ ಜೈನರಕಾಶಿ ಹಾಗೂ ತಿರುಳ್ಗನ್ನಡದ ನಾಡೆಂದು ಕರೆಯಿಸಿಕೊಂಡಿರುವುದು ಈ ಪ್ರದೇಶವೇ ಕೊಪ್ಪಳವು ಸುಮಾರು ಎರಡು ಸಾವಿರ ವರ್ಷಗಳ ಇತಿಹಾಸವನ್ನು ಹೊಂದಿದ್ದು ಪ್ರಾಚೀನ ಕಾಲದಿಂದ ಇಂದಿನವರೆಗೂ ಪರಧರ್ಮ ಸಹಿಷ್ಣುತೆಯನ್ನು ಬೆಳಸಿಕೊಂಡು ಬಂದಿದೆ.

ಇದರ ಭೌಗೋಳಿಕ ವಿಸ್ತೀರ್ಣ ೧೫೫೯೫ ಚ.ಕೀ.ಮೀ. ನಷ್ಟಿದೆ. ೭೫°-೭೬ ರೇಖಾಂಶ ೧೫°-೧೫ ಅಕ್ಷಾಂಶವನ್ನು ಹೊಂದಿದೆ. ಸಮುದ್ರ ಮಟ್ಟದಿಂದ ೫೨೩.೦೪ ಮೀಟರ್ ಎತ್ತರದಲ್ಲಿದೆ ಜಿಲ್ಲಾ ಕೇಂದ್ರವಾದ

ಕೊಪ್ಪಳವು ಕೊಪ್ಪಳ, ಗಂಗಾವತಿ, ಕುಷ್ಟಗಿ, ಹಾಗೂ ಯಲಬುರ್ಗಾ ಎಂಬ ನಾಲ್ಕು ತಾಲೂಕುಗಳನ್ನು ಒಳಗೊಂಡಿದೆ.

ಕೊಪ್ಪಳ ಜಿಲ್ಲೆಯ ಚರಿತ್ರೆಯನ್ನು ಪುರಾಣಕಾಲದೊಂದಿಗೆ ತಳುಕು ಹಾಕಲು ಈ ಜನರಲ್ಲಿ ಬೇರೂರಿ ಬಂದಿರುವ ಹಲವಾರು ನಂಬಿಕೆಗಳೇ ಉದಾಹರಣೆಗಳಾಗಿವೆ. ರಾಮಾಯಣದ ಆಂಜನೇಯನ ಸ್ಥಳ 'ಕಿಷ್ಕಿಂದೆ' ಕೊಪ್ಪಳ ಪ್ರದೇಶಕ್ಕೆ ಹೊಂದಿಕೊಂಡೆ ಇದೆ. ರಾವಣ ಸೀತೆಯನ್ನು ಹೊತ್ತುಕೊಂಡು ಲಂಕೆಗೆ ಅಪಹರಿಸುವಾಗ ಈ ಸ್ಥಳವನ್ನು ಹಾದುಕೊಂಡು ಹೋದ ಬಗ್ಗೆ ಕೊಪ್ಪಳದ ಸುತ್ತಮುತ್ತ ಕೆಲವು ಪ್ರದೇಶಗಳಲ್ಲಿ ಪ್ರತೀತಿಗಳಿವೆ. ಹಂಪೆಯ ಸೀತೆಯ ಸೆರಗು ಇದಕ್ಕೊಂದು ಉತ್ತಮ ಉದಾಹರಣೆ ಎನ್ನಬಹುದು. ಈ ಎಲ್ಲ ಕಾಲ್ಪನಿಕ ಪುರಾಣ ಇತಿಹಾಸದ ಕಾಲದಿಂದೀಚೆಗೆ ಬಂದರೆ ನೈಜ ಮಾನವನ ಅಂದರೆ ಆದಿಮಾನವನ ಕುರುಹುಗಳು ಈ ಸ್ಥಳದಲ್ಲಿ ಗಟ್ಟಿಯಾಗಿ ಸ್ಥಾನ ಪಡೆದುಕೊಂಡಿವೆ.

ಈ ಮೇಲಿನ ಪುರಾಣ ಐತಿಹ್ಯಗಳು ನನ್ನ ಕ್ಷೇತ್ರಕಾರ್ಯದ ವಿಷಯಕ್ಕೆ ಪೂರಕವಾಗಿದೆ. ಹಾಗೂ ಸಂಬಂಧವನ್ನು ಕಲ್ಪಿಸುತ್ತದೆ. ಪುರಾಣದ ರಾಮಾಯಣದ ಅಂದಿನ ಜಾಂಬವಂತ ಇಂದು ಈ ಮದಾರಿ ಖಲಂದರರ ಅನ್ನದಾತನಾಗಿ ಕರಡಿ (ಪ್ರಾಣಿ) ರೂಪ ತಾಳಿರುವುದು ಈ ಪುರಾಣದ ಅಂಶಗಳಿಂದಲೇ ಇರಬೇಕೆಂದೆನಿಸುತ್ತದೆ. ಮತ್ತು ಈ ಕರಡಿಯಾಡಿಸುವ ಕುಟುಂಬಗಳು ಹೆಚ್ಚಿನ ಸಂಖ್ಯೆಯಲ್ಲಿ ಈ ಭಾಗದಲ್ಲಿ ನೆಲೆಸಿರುವರು. ಇಂತಹ ಪರಿಸರ ಕರಡಿ ಆಡಿಸುವವರಿಗೆ ಮೂಲ ಸ್ಥಾನವಾಗಿಬರಬಹುದೆಂದು ಊಹಿಸಬಹುದಾಗಿದೆ.

ಮಂಗಳಾಪುರ ಗ್ರಾಮ ಕೊಪ್ಪಳ ಜಿಲ್ಲೆ ಹಾಗೂ ತಾಲೂಕಿಗೆ ಸೇರುತ್ತದೆ. ಕೊಪ್ಪಳಕ್ಕೆ ಹೊಂದಿಕೊಂಡ ಗ್ರಾಮವಾಗಿದೆ. ಕೊಪ್ಪಳ ಜಿಲ್ಲಾ ಕೇಂದ್ರದಿಂದ ಕೇವಲ ೩ ಕಿ.ಮೀ. ರಸ್ತೆಯಾಗಿದೆ. ಮಂಗಳಾಪುರದ ಜನರ ಎಲ್ಲಾ ವ್ಯಾಪಾರ ವಹಿವಾಟು ಕೆಲಸ ಕಾರ್ಯಗಳೆಲ್ಲಾ ಕೊಪ್ಪಳದಲ್ಲಿಯೇ ಸಾಗುತ್ತದೆ. ಸಾರಿಗೆ ವ್ಯವಸ್ಥೆಯ ಸೌಲಭ್ಯವಿದೆಯಾದರೂ ದಿನಕ್ಕೆ ಎರಡು ಬಾರಿ ಬಂದು ಹೋಗು ಮಾಡುತ್ತಾರೆ. ಮಂಗಳಾಪುರ ಕೋಳೂರು ಗ್ರಾಮ ಪಂಚಾಯಿತಿ ಅಡಿಯಲ್ಲಿ ಬರುತ್ತದೆ. ಒಟ್ಟು ೭ ಹಳ್ಳಿಗಳಿಂದ ಕೂಡಿದ ಗ್ರಾಮ ಪಂಚಾಯಿತಿ ಕೋಳೂರು ಪ್ರಮುಖವೆನಿಸಿದೆ. ಈ ಗ್ರಾಮ ಪಂಚಾಯಿತಿಯ ಒಟ್ಟು ವಿಸ್ತೀರ್ಣ ೪೭೫. ರಷ್ಟಿದ್ದು. ಮಂಗಳಾಪುರ ಪ್ರಮುಖ ಕೇಂದ್ರವಾಗಿದೆ. ಈ ಗ್ರಾಮದಲ್ಲಿ ಎಲ್ಲಾ ಜನಾಂಗದವರು ವಾಸಿಸುತ್ತಿದ್ದು ಕರಡಿಯಾಡಿಸುವ ಮದಾರಿ ಖಲಂದರರ ಮೂವತ್ತು ಕುಟುಂಬಗಳು ಇಲ್ಲಿ ವಾಸಿಸುತ್ತಿವೆ.

ಜನಸಂಖ್ಯೆ :

ಕರ್ನಾಟಕದ ಅನೇಕ ಕಡೆಗಳಲ್ಲಿ ಅಲೆಮಾರಿ ಮದಾರಿ ಅಥವಾ ಖಲಂದರರು ವಾಸವಾಗಿದ್ದಾರೆ. ಮುಖ್ಯವಾಗಿ ಬಳ್ಳಾರಿ ಜಿಲ್ಲೆ ಹಂಪಿನಕಟ್ಟೆ ವೆಂಕಟಾಪುರ, ಕೊಪ್ಪಳ ಜಿಲ್ಲಾ ಮಂಗಳಾಪುರ ಹುಲಿಹೈದರ ಜ್ಯಾಡು, ಕೋಲಾರ ಜಿಲ್ಲಾ ಶಿವನಾಪುರ ಅಗಲಕುಂಟಾ, ಬೆಳಗಾವಿ ಜಿಲ್ಲಾ ಚಿಕ್ಕ ಅಂಗರವಳ್ಳಿ ಗಂದಿಗವಾಡು, ಯರಗುದ್ದಿ ಹೀಗೆ ಇನ್ನಿತರ ಸ್ಥಳಗಳಲ್ಲಿ ವಾಸವಾಗಿದ್ದಾರೆ.

ನನ್ನ ಕ್ಷೇತ್ರಕಾರ್ಯದ ವ್ಯಾಪ್ತಿಗೆ ಬರುವ ಗ್ರಾಮಗಳಾದ ಬಳ್ಳಾರಿ ಜಿಲ್ಲೆಯ ಹಂಪಿನಕಟ್ಟೆ, ವೆಂಕಟಾಪುರ, ಹಾಗೂ ಕೊಪ್ಪಳ ಜಿಲ್ಲಾ ತಾಲೂಕು ಮಂಗಳಾಪುರ, ಹುಲಿಹೈದರ ಗ್ರಾಮಗಳಲ್ಲಿರುವ ಮದಾರಿಗಳ ಕುಟುಂಬಗಳ ಗಂಡು, ಹೆಣ್ಣು, ಎರಡರ ಅಂಕಿ ಸಂಖ್ಯೆಯನ್ನು ಕೆಲವು ವಿಧಾನಗಳ ಮೂಲಕ ಸಂಗ್ರಹಿಸಲಾಗಿದೆ. ಉಳಿದಂತೆ ಇವರ ವಾಸವಾಗಿರುವ ಕರ್ನಾಟಕದ ಇತರ ಪ್ರದೇಶಗಳನ್ನು ಮೇಲೆ ಹೆಸರಿಸಿದ್ದೇನೆ.

ಮಂಗಳಾಪುರದ ಮದಾರಿಗಳ ಜನಸಂಖ್ಯೆ ಈ ಕೆಳಕಂಡಂತೆ ಇದೆ.

ಮಂಗಳಾಪುರ	ಗಂಡು	ಹೆಣ್ಣು	ಒಟ್ಟು
	೭೨	೫೮	೧೩೦

ಒಟ್ಟು ೧೩೦ ಕುಟುಂಬಗಳಿವೆ.

ಹುಲಿಹೈದರ್	ಗಂಡು	ಹೆಣ್ಣು	ಒಟ್ಟು
	೧೦೦	೭೫	೧೭೫

	ಗಂಡು	ಹೆಣ್ಣು	ಒಟ್ಟು
ಹಂಪಿನಕಟ್ಟೆ	೯೦	೧೬೦	೨೫೦
ವೆಂಕಟಾಪುರ	೫೮	೧೦೦	೧೫೮

ಒಟ್ಟು ೭೦ ಕುಟುಂಬಗಳಿವೆ ಒಟ್ಟು ೪೦೮

ಮೂಲ ಹಾಗೂ ವಲಸೆ

ಯಾವುದೇ ಸಮುದಾಯದ ಮೂಲವನ್ನು ಶೋಧಿಸಿದರೂ. ನಿರ್ದಿಷ್ಟವಾಗಿ ಇಂತಹದೆ ಮೂಲದಿಂದ ಬಂದವರು ಇಂತಹ ಸ್ಥಳದಿಂದಲೇ ಬಂದವರೆಂದು ಹೇಳುವುದು ಕಠಿಣವಾದ ಕಾರ್ಯ ಇದೇ ಮೂಲವೆಂದು ಹೇಳುವುದು ಕೂಡಾ ಕಷ್ಟವಾದುದು. ಸಮುದಾಯ ಎಲ್ಲಿ ಜೀವಿಸಲು ಅನುಕೂಲವಾದ ಈ ವಾತಾವರಣ ಕಾಡಿನ ಸಂಪನ್ಮೂಲ ನೀರಿನ ಸಂಪನ್ಮೂಲ ಹಾಗೂ ಹೇರಳವಾಗಿ ಭಿಕ್ಷೆ ದೊರೆಯುವ ಸ್ಥಳಗಳು ಬೇಟೆಗೆ ಅನುಕೂಲಕರವಾದ ಸ್ಥಳಗಳು ಮತ್ತು ವ್ಯಾಪಾರಕ್ಕಾಗಿ ಎಲ್ಲೆಲ್ಲಿ ಅನುಕೂಲವಾಗುತ್ತದೆಯೋ ಅಲ್ಲಲ್ಲಿ ನೆಲೆಸಿರುವುದನ್ನು ಕಾಣಬಹುದಾಗಿದೆ.

ಮದಾರಿಗಳ ಮೂಲದ ಬಗ್ಗೆ ಕೆದಕುತ್ತಾ ಹೋದಂತೆಲ್ಲಾ ಇವರ ಸೃಷ್ಟಿ ಪುರಾಣಗಳಿಂದ ಮತ್ತು ವಕ್ತೃಗಳಿಂದ ಬಂದಿರುವ ಮಾಹಿತಿಯು ತುಂಬಾ ವಿಚಿತ್ರವಾಗಿದೆ. ಆದಿಮ ಕಾಲದಲ್ಲಿ ಪ್ರಾಣಿಯಂತಿದ್ದ ಮಾನವ ಹಂತ ಹಂತವಾಗಿ ಬೇರೆ ಬೇರೆ ಆಯಾಮಗಳಲ್ಲಿ ಬೆಳೆದುಬಂದಿದ್ದಾನೆ. ಈ ಹಂತಗಳಲ್ಲಿ ಬದುಕಿನ ಹವಮಾನ ವೈಪರೀತ್ಯವಾದ ಘಟನೆಗಳಾದ ಪ್ರಕೃತಿ ವಿಕೋಪ ವಿಪರೀತ ಮಳೆ, ಚಳಿ, ಬಿಸಿಲು ಕ್ರೂರ ಮೃಗಗಳ ಹಾವಳಿ ಆಹಾರದ ಅಭಾವ ಬೇಟೆಯತುಡಿತ ವ್ಯಾಪಾರದ ಅಮಲು. ಬ್ರಿಟೀಷ್‌ರ ಮತ್ತು ಸ್ಥಳೀಯರ ಆಡಳಿತದಿಂದ

ಬೇಸತ್ತು ಮತ್ತು ಕೆಲವೊಂದು ಮುಸ್ಲಿಂ ದೊರೆಗಳಿಂದ ಹಿಂಸೆಯನ್ನು ಅನುಭವಿಸಿ ಬಂದವರಾಗಿದ್ದಾರೆ. ಇಂತಹ ಸಮುದಾಯಗಳನ್ನು ಅಂದಿನ ಆಳುವ ವರ್ಗವು ಧರ್ಮದ ಪ್ರಚಾರಕ್ಕಾಗಿ ಸೇವೆಗಾಗಿ ತಮ್ಮ ಮನರಂಜನೆಗಾಗಿ ಇನ್ನಿತರ ಕಾರಣಗಳಿಗಾಗಿ ಬಳಸಿಕೊಂಡಿದ್ದರು. ವೈವಿಧ್ಯಮಯ ಸ್ಥಳಗಳಲ್ಲಿ ಚದುರಿ ಹಂಚಿಹೋದ ಸಮುದಾಯಗಳು ಅಲೆಮಾರಿಗಳಾಗಿ ವಾಸದ ನೆಲೆ ಇಲ್ಲದೆ ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶದಲ್ಲಿ ಅಲೆಯುತ್ತಲೇ ಇದ್ದಾರೆ ಮತ್ತೆ ಇವರ ವೃತ್ತಿ ಕೂಡಾ ಅಂತಹದು ಆದ್ದರಿಂದಲೇ ಅಲೆಮಾರಿಗಳ ಮೂಲ ಹುಡುಕಾಟ ತುಂಬಾ ಕಷ್ಟಕರ

ಮದಾರಿಗಳ ಮೂಲವನ್ನು ಕುರಿತು ಹೇಳುವುದಾದರೆ ಇವರ ಜನಾಂಗಕ್ಕೆ ಸಂಬಂಧಿಸಿದಂತೆ ಯಾವುದೇ ಪುರಾಣ ಐತಿಹ್ಯಗಳಿಲ್ಲ ಸೃಷ್ಟಿಪುರಾಣಗಳಾಗಲಿ ಇಲ್ಲ. ವೃತ್ತಿಗೆ ಸಂಬಂಧಿಸಿದಂತೆ ವಕ್ತೃಹೇಳುವ ಮಾಹಿತಿಯು ಇಲ್ಲಿ ಪ್ರಮುಖ ಆಧಾರವೆನಿಸಿದೆ.

ವಕ್ತೃವಿನ ಪ್ರಕಾರ ಆಂಧ್ರದ ಒಬ್ಬ ವೃದ್ಧ ಮುದುಕಿ ಹೇಳುವಂತೆ ಮುಸ್ಲಿಂ ದೊರೆಗಳ ಆಳ್ವಿಕೆ ಕಾಲದಲ್ಲಿ ಒಂದು ಘೋರ ಯುದ್ಧ ನಡೆಯಿತು ಆ ಯುದ್ಧವು ಅತ್ಯಂತ ಭೀಕರವಾಗಿದ್ದು ರಕ್ತದ ಹೊಳೆಯೇ ಹರಿಯಿತು. ಸಾವಿರಾರು ಸೈನಿಕರು ಯುದ್ಧದಲ್ಲಿ ಮಡಿದರು. ಇನ್ನು ಕೆಲವು ಸೈನಿಕರು ತಮ್ಮ ಪ್ರಾಣ ಉಳಿಸಿಕೊಳ್ಳಲು ರಾಜನನ್ನು ಬಿಟ್ಟು ಓಡಿ ಹೋದರಂತೆ ಆಗ ಆ ಸೈನ್ಯದಲ್ಲಿದ್ದ ಮದಾರಿಗಳು ತಮ್ಮ ಸಾಹಸವನ್ನು ಪ್ರದರ್ಶಿಸಿ ರಾಜನನ್ನು ಪ್ರಾಣಾಪಾಯದಿಂದ ರಕ್ಷಿಸಿದರಂತೆ ರಾಜನು ಇದರಿಂದ ಸಂತೋಷಗೊಂಡು ತನ್ನ ಪ್ರಾಣ ಉಳಿಸಿದವರನ್ನು ಕರೆಯಿಸಿ ತಮಗೇನು ಬೇಕು ಕೇಳಿ ಎಂದಾಗ ಮದಾರಿಗಳು ತಮಗೆ ತಮ್ಮ ರಾಜ್ಯದಲ್ಲಿ ಕರಡಿಯಾಡಿಸಿಕೊಂಡು ಬದುಕುತ್ತೇವೆ ಅದಕ್ಕಾಗಿ ರಾಜ್ಯದ ತುಂಬಾ ಸಂಚರಿಸಲು ತಮ್ಮ ಅನುಮತಿ ಬೇಕೆಂದು ಕೇಳಿದಾಗ ರಾಜನು ಅದಕ್ಕೆ ಅನುಮತಿ ಕೊಟ್ಟನಂತೆ ಹೀಗೆ ಅಂದಿನಿಂದ ಇಂದಿನವರೆಗೆ ಈ ವೃತ್ತಿ ನಡೆದುಕೊಂಡು ಬಂದಿದೆ. ಎಂಬುದು ನನ್ನ ಕ್ಷೇತ್ರಕಾರ್ಯದ ಸಂದರ್ಭದಲ್ಲಿ ತಿಳಿಯಲಾಯಿತು.

ಇನ್ನೊಬ್ಬ ವಕ್ತೃವಿನ ಪ್ರಕಾರ ಸ್ವಾತಂತ್ರ ಪೂರ್ವದಲ್ಲಿ ಬ್ರಿಟೀಷ್‌ರ ಆಳ್ವಿಕೆ ಸಮಯದಲ್ಲಿ ಕೊಪ್ಪಳದ ಹೊಸಳ್ಳಿಯ ಬಳಿಯಿರುವ ಬಹಾದ್ದೂರ್ ಬಂಡಿ ಗ್ರಾಮದಲ್ಲಿ ಭಾರತೀಯರು ಹಾಗೂ ಬ್ರಿಟೀಷರ ನಡುವೆ ನಡೆದ ದಂಗೆಯಲ್ಲಿ ಬಹಳಷ್ಟು ಭಾರತೀಯರು ಹತರಾದರು. ಈ ದಂಗೆಯಲ್ಲಿ ಒಬ್ಬ ಮಾತ್ರ ಬದುಕುಳಿದನಂತೆ ಬ್ರಿಟೀಷ್ ಅಧಿಕಾರಿಯು ಆತನನ್ನು ಕರೆದು ನಿನಗೇನು ಬೇಕು ಎಂದು ಕೇಳಿದಾಗ ತಾನೂ ಕರಡಿಯಾಡಿಸುತ್ತಾ ಬಂದಿದ್ದೇನೆ. ಅದನ್ನು ಮುಂದುವರೆಸಲು ತಮ್ಮ ಅನುಮತಿಬೇಕೆಂದು ಕೇಳಿಕೊಂಡಾಗ ಅಧಿಕಾರಿಯು ಒಪ್ಪಿದನೆಂದು "ಫಕ್ರುಸಾಬ್ ಕರಡಿ"ಯವರು ಹೇಳುತ್ತಾರೆ.

ಕೆ.ಎಸ್. ಸಿಂಗ್‌ರವರು ತಮ್ಮ Indias all communities ಎಂಬ ಗ್ರಂಥದಲ್ಲಿ ಕರಡಿಯಾಡಿಸುವ ಮದಾರಿ ಖಲಂದರರ ಬಗೆಗೆ ಅವರ ವೃತ್ತಿಯ ನೆಲೆಯನ್ನು ಗುರುತಿಸುವುದರ ಮೂಲಕ ಜನಾಂಗವನ್ನು ಗುರುತಿಸುತ್ತಾರೆ. ಮತ್ತು ಉತ್ತರ ಭಾರತದ ರಾಜ್ಯಗಳ ಕೆಲವು ಭಾಗಗಳಲ್ಲಿ ಈ ಮದಾರಿ ಜನಾಂಗ ವಾಸವಾಗಿರುವುದನ್ನು ಗುರುತಿಸಿ ಕರ್ನಾಟಕದಲ್ಲಿ ವಲಸೆ ಬಂದ ಈ ಸಮುದಾಯದ ಬಗ್ಗೆ ಚರ್ಚಿಸಿದ್ದಾರೆ.

ಮೊದಲನೆಯದಾಗಿ ತಮಿಳುನಾಡಿನ ಭಾಗದಲ್ಲಿ ಹಾವಾಡಿಸುವ ಮದಾರಿಗಳು ಕಂಡುಬರುತ್ತಾರೆ. ಅರೆ ಅಲೆಮಾರಿಗಳಾದ ಇವರು ಮುಸ್ಲಿಂನ ಸೈಯದ್ ಬೆಡಗಿಗೆ ಸೇರಿದವರು. ಮದರಾಸು, ಮಧುರೈ, ತಂಜಾವೂರು, ತಿರುಚನಾಪಳ್ಳಿ, ಸೇಲಂ ಹಾಗೂ ಕೊಯಮತ್ತೂರಿನ ಕಡೆಯಲ್ಲೆಲ್ಲ ನೆಲೆಸಿರುವರು. ಬೆಂಗಳೂರಿನಲ್ಲಿಯೂ ವಾಸವಾಗಿದ್ದಾರೆ. ಉರ್ದು, ತಮಿಳು ಭಾಷೆಯನ್ನು ಬಲ್ಲವರು ಇಸ್ಲಾಂಧರ್ಮದ ನಿಯಮ ಕಟ್ಟಳೆಗಳಿಗೆ ಇವರು ಬದ್ಧರಾಗಿ ನಡೆಯುತ್ತಾರೆ. ವಿವಾಹ, ಸಂಪ್ರದಾಯಗಳೆಲ್ಲಾ ಜಮಾತ್‌ನ ಸಮಕ್ಷಮದಲ್ಲಿ ಜರುಗುತ್ತದೆ. ಇವರು ಕಣ್‌ಕಟ್, ಮೋಡಿಯಾಟವನ್ನು ಕೂಡಾ ಪ್ರದರ್ಶಿಸುತ್ತಾರೆ. ಹೆಂಗಸರು ಮನೆಯೊಳಗಿನ ಕೆಲಸವನ್ನು ಮಾಡಿ ಧಾರ್ಮಿಕವಾಗಿ ಇವರು ಸೂಫಿ ಅನುಯಾಯಿಗಳಾಗಿ ಖಾದರ್‌ವಲಿ (ನಾಗೋರ್) ಎಂಬ ದರ್ಗಾ ಅನುಯಾಯಿಗಳಾಗಿದ್ದಾರೆ.ತಮ್ಮ ಧರ್ಮದ ಇತರ ಪಂಗಡದವರನ್ನು 'ಭಾಯಿ' (ಅಣ್ಣ) ನೆಂದು ಸಂಬೋಧಿಸುತ್ತಾರೆ. ಶಿಕ್ಷಣದಲ್ಲಿ ಇವರು ತೀರ ಹಿಂದುಳಿದಿದ್ದಾರೆ.

ಎರಡನೆಯದಾಗಿ ಕಾಥೆವಾಡ ಹಾಗೂ ಸೌರಾಷ್ಟ್ರದಲ್ಲಿರುವ ಮದಾರಿಗಳು "ಗಾರುಡಿ" ಎಂಬ ಹೆಸರಿನಿಂದ ಕರೆಯಿಸಿಕೊಳ್ಳುತ್ತಾರೆ. ಇವರು ಭಾರತದ ಪಂಜಾಬ್, ಹರಿಯಾಣ, ಉತ್ತರ ಪ್ರದೇಶ ಮತ್ತು ಬಿಹಾರ್ ರಾಜ್ಯಗಳಲ್ಲಿ ವಾಸವಾಗಿದ್ದಾರೆ.ತಮ್ಮನ್ನು "ಮುಸಲ್ಮಾನ ಗಾರುಡಿಗರು" ಎಂತಲೇ ಕರೆಯಿಸಿಕೊಳ್ಳುತ್ತಾರೆ. ಈ ಮೊದಲು ಹಿಂದು ಧರ್ಮದಲ್ಲಿದ್ದು ನಂತರ ಸೂಫಿ ಪ್ರಭಾವಕ್ಕೆ ಒಳಗಾಗಿ ಮುಸ್ಲಿಂ ಧರ್ಮಕ್ಕೆ ಮತಾಂತರಗೊಂಡರೆಂದು ಇಲ್ಲಿಯ ಸ್ಥಳೀಯ ಐತಿಹ್ಯ ಹೇಳುತ್ತದೆ. ಮುಸ್ಲಿಂ ಸಂತ ಫಕೀರ್‌ಷಾ ಜಿಂದಾ ಷಾ ಮದಾರ್ (ಮಕಾನಪುರ) ಎಂಬುವವರ ಅನುಯಾಯಿಗಳು ಇವರು. ಕೋತಿ ಹಾಗೂ ಕರಡಿಯಾಡಿಸುವುದೇ ಇವರ ಮೂಲ ವೃತ್ತಿ ಆಗಿದೆ. ಅಲೆಮಾರಿಗಳಾದ ಇವರು ಒಂದೇ ಕಡೆ ವಾಸವಾಗಿಲ್ಲ.

ಗುಜರಾತಿನಲ್ಲಿರುವ ಮದಾರಿಗಳು ಗಾರುಡಿ ಅಥವಾ ಮೋಡಿಕಾರರೆಂದು ಕರೆಯುವರು.ಎಂದು ಎಂಡೋವನ್ (೧೯೨೦) ರವರು ಅಭಿಪ್ರಾಯ ಪಡುತ್ತಾರೆ. ಇವರ ಅಭಿಪ್ರಾಯದಂತೆ ಮದಾರಿಗಳು "ಮದಾರ್ ಅಥವಾ ರೂಹಿ" ಎಂದೆ ಕರೆಯಿಸಿಕೊಳ್ಳುತ್ತಾರೆ. ಇವರು ಕಾಥೆವಾಡದ ಮೂಲಿಸೈಲೈ ಎಂಬ ಗ್ರಾಮದಿಂದ ವಲಸೆ ಬಂದಿರುವರು. ಹಿಂದಿ ಹಾಗೂ ಗುಜರಾತ್ ಲಿಪಿಯನ್ನು ಬಳಸುತ್ತಾರೆ ಸಸ್ಯಹಾರಿಗಳಾದ ಇವರು ಅಕ್ಕಿ, ಗೋಧಿ, ಮುಸುಕಿನ ಜೋಳ, ಹೆಚ್ಚು ಬಳಸುತ್ತಾರೆ. ಈ ಮದಾರಿಗಳಲ್ಲಿ ೨ ವರ್ಗಗಳಿವೆ. ಒಂದು ವರ್ಗ ಹಾವಾಡಿಸುವವರು ಇನ್ನೊಂದು ವರ್ಗ ಕೋತಿ ಹಾಗೂ ಕರಡಿ ಯಾಡಿಸುತ್ತಾರೆ. ಈ ಎರಡು ವರ್ಗಗಳ ನಡುವೆ ವೈವಾಹಿಕ ಬಂಧವೇರ್ಪಡುತ್ತದೆ. ಗಿಡಮೂಲಿಕೆ ಔಷದವನ್ನು ಬಳಸುತ್ತಾರೆ.

ಪಂಜಾಬ್‌ನಲ್ಲಿನ ಮದಾರಿಗಳನ್ನು ಗಮನಿಸಿದಾಗ ಇವರು ಮುಸಲ್ಮಾನರಾಗಿದ್ದು "ತಮಾಷೆ" ಎಂಬ ಸಂಪ್ರದಾಯ ಕಲೆಯ ಆಟವನ್ನು ಪ್ರದರ್ಶಿಸಿ ಹೊಟ್ಟೆ ತುಂಬಿಸಿಕೊಳ್ಳುವರು. ಅಲೆಮಾರಿಗಳಾದ ಇವರು ಒಂದು ಕಡೆ ನೆಲೆ ನಿಲ್ಲುವುದಿಲ್ಲ ಈ ಜನಾಂಗದ ಹೆಂಗಸರು ಪ್ರಾಣಿ ಪೋಷಣೆಯಲ್ಲಿ ಹೆಚ್ಚು ತೊಡಗಿರುತ್ತಾರೆ. ಮುಸ್ಲಿಂನ ಷಿಯಾ ಪಂಗಡಕ್ಕೆ ಸೇರಿದವರು ಅವರ ರೀತಿ ನೀತಿಗೆ ಬದ್ದರಾಗಿರುವರು. ಮಕ್ಕಳ ನಾಮಕರಣ (ಅಖೀಖಾ) ಹಾಗೂ ವಿವಾಹ (ನಿಖಾಃ) ಪದ್ಧತಿಯು ಇಸ್ಲಾಂನ ನಿಯಮದಂತೆ ನಡೆಯುವುದು. ಕದ್ದು ಓಡಿಹೋಗಿ ಮದುವೆ

ಯಾಗುವುದು ಇವರಲ್ಲಿ ರೂಢಿಯಲ್ಲಿದೆ. ವ್ಯಕ್ತಿಯ ಸಾವಿನ ನಂತರ ೩ ದಿನದ ಕಾರ್ಯವು ಇವರಲ್ಲಿ ಜಾರಿಯಲ್ಲಿದ್ದು ಇದನ್ನು ಮೌಲ್ವಿ (ಪುರೋಹಿತ)ಯಿಂದ ಮಾಡಿಸುತ್ತಾರೆ.

ಹರಿಯಾಣದಲ್ಲಿನ ಮದಾರಿಗಳನ್ನು ಗಮನಿಸಿದಾಗ ಇವರು ಬುಡಕಟ್ಟು ಹಾಗೂ ಹಳ್ಳಿಯ ಸಂಪ್ರದಾಯಗಳಲ್ಲಿ ನಂಬಿಕೆ ಹೊಂದಿದ್ದು ಆದರಂತೆಯೇ ನಡೆದುಕೊಳ್ಳುತ್ತಾರೆ. ಮದಾರಿ ಖೇಲ್ ಎಂದು ತಮ್ಮ ವೃತ್ತಿಯನ್ನು ಕರೆಯುತ್ತಾರೆ. ಮದಾರಿಖೇಲ್ ಎಂದರೆ ದೊಂಬರಾಟ ಕಣ್ಕಟ್ಟು ಬಿಗಿ ಹಗ್ಗದ ಮೇಲೆ ನಡೆಯುವುದು ಇತ್ಯಾದಿಗಳನ್ನು ಪ್ರದರ್ಶಿಸಿ ಹೊಟ್ಟೆ ತುಂಬಿಸಿಕೊಳ್ಳುವರು.ಇದರ ಜೊತೆಗೆ ಕೋತಿಯನ್ನು ಆಡಿಸುತ್ತಾರೆ. ಮುಸ್ಲಿಂ ಧರ್ಮದ ರೀತಿ-ನೀತಿಗಳನ್ನು ಅನುಸರಿಸುತ್ತಾರೆ. ಇವರ ಜೀವನ ಚಕ್ರದ ಸಂಪ್ರದಾಯ ಪದ್ಧತಿಗಳು ಇಸ್ಲಾಂನ ನಿಯಮದಂತೆ ಜರುಗುತ್ತವೆ.ವಿವಾಹ ಪದ್ಧಶ್ರಿಯಲ್ಲಿ ಗಂಡನಾದವನು ಮೊದಲ ಹೆಂಡತಿ ತೀರಿಕೊಂಡರೆ ಹೆಂಡತಿಯ ತಂಗಿಯನ್ನು ವಿವಾಹವಾಗುವ ಪದ್ಧತಿ ಇವರಲ್ಲಿದೆ ಜಡಿ ಭೂಟ ಎಂಬ ಗಿಡ ಮೂಲಿಕೆಯ ಜ್ಞಾನ ಗೊತ್ತಿದೆ ಆದರೆ ಕುಟುಂಬ ನಿಯಂತ್ರಣಕ್ಕೆ ಇವರು ಮಹತ್ವ ಕೊಡುವುದಿಲ್ಲ.

ಬಿಹಾರದ ಮದಾರಿಗಳನ್ನು ಅವಲೋಕಿಸಿದಾದ ಇವರಲ್ಲಿ ಖಿಲ್‌ವಾರ್ ಹಾಗೂ ಜಾದುಗರ್ ಎಂಬ ವರ್ಗಗಳಿವೆ ಮತ್ತು ಈ ಹೆಸರುಗಳಿಂದಲೇ ಗುರುತಿಸಿಕೊಳ್ಳುತ್ತಾರೆ. ಅರೆ ಅಲೆಮಾರಿಗಳಾದ ಇವರು ಕಸರತ್ತು ಮಾಡುವುದು. ಚಮತ್ಕಾರ ಪ್ರದರ್ಶಿಸುವಿಕೆಯಿಂದ ಹೊಟ್ಟೆ ತುಂಬಿಸಿಕೊಳ್ಳುತ್ತಾರೆ. ವಧುದಕ್ಷಿಣೆ ಪದ್ಧತಿ ಜಾರಿಯಲ್ಲಿದೆ.ವಧುಧಕ್ಷಿಣೆಯ ಮೊತ್ತ ೩೦೦೦.೦೦ ವರೆಗಿರುವುದು. ಕುಟುಂಬದ ತಂದೆಯ ನಂತರ ಹಿರಿಯ ಮಗನೆ ವಾರಸುದಾರನಾಗುತ್ತಾನೆ. ಮಂಗ್‌ನಿ (ನಿಶ್ಚಿತಾರ್ಥ) ಅಖೀಖಾ ದಂತಹ ಆಚರಣೆಗಳು ಆಚರಿಸುತ್ತಾರೆ. ಮೆಹರ್ ಹಣದ ಮಾತುಕತೆ, ಕುತ್ಬು-ಎ-ನಿಖಾ ಹಾಗೂ ಜುಲ್ವಾದಂತಹ ವಿವಾಹ ಸಂಬಂಧಿತ ಆಚರಣೆಗಳು ಹಾಗೂ ವ್ಯಕ್ತಿ ಸತ್ತಾಗ ಮಾಡುವ ಚಾಲಿಸ್‌ವಾ (೪೦ ದಿನದ ಕಾರ್ಯ) ಜುಲುಪಿ ಜನಾಜ್ ಹಾಗೂ ಪಾತೆಹಾ ದಂತಹ ಇಸ್ಲಾಂ ಕ್ರಿಯೆಗಳನ್ನು ಸಂಪ್ರದಾಯದಂತೆ ಆಚರಿಸುತ್ತಾರೆ. ಇವರು ಖಲಂದರರೊಡನೆ ಹೆಚ್ಚು ಸ್ನೇಹ ಬೆಳೆಸುತ್ತಾರೆ. ಗಿಡಮೂಲಿಕೆ ಔಷಧಿಯ ಜ್ಞಾನ ಬಲ್ಲವರು ಆಗಿರುತ್ತಾರೆ. ಕೊನೆಯದಾಗಿ ಮದಾರಿ ಖಲಂದರರನ್ನು ಕುರಿತು ಕೆ.ಎಸ್. ಸಿಂಗ್‌ರವರು ಹೀಗೆ ಗುರುತಿಸುತ್ತಾರೆ. ಇವರಲ್ಲಿ ಕೆಲವರು ಅರಬ್‌ನ ಮುಸ್ಲಿಂ ಸಂನ್ಯಾಸಿಗಳಾಗಿ ಅಂದರೆ ದೇವರ ಭಕ್ತಿಗೆ ಮಾರುಹೋಗಿ ಉದ್ದವಾದ ತಲೆಗೂದಲು ಗಡ್ಡವನ್ನು ಬಿಟ್ಟು ಅಲೆಮಾರಿಯಾಗಿ ಸಂಚರಿಸುತ್ತಿರುತ್ತಾರೆ. ಇವರನ್ನು ಖಲಂದರ ಎಂದು ಕರೆಯುವುದುಂಟು. ಮತ್ತು ಇತರರು ಕೋತಿಯಾಡಿಸುವುದು ಸಾಮಾನ್ಯ ವೃತ್ತಿಯೆನಿಸಿದೆ ಇವರು ಖಲಂದರ ಅಥವಾ ಮದಾರಿ ಎಂದೇ ಕರೆಸಿಕೊಳ್ಳುತ್ತಾರೆ. ಹೆಚ್ಚಾಗಿ ದೆಹಲಿಯಂತಹ ಮಹಾನಗರದಲ್ಲಿ ಸ್ಲಂ ಪ್ರದೇಶದಲ್ಲಿ ವಾಸವಾಗಿರುವವರು.ಅಲ್ಲದೆ ಬೇರೆ ಬೇರೆ ರಾಜ್ಯಗಳಲೆಲ್ಲಾ ಹಂಚಿಹೋಗಿರುವರು. ಪಂಜಾಬ್, ಹರಿಯಾಣ, ಹಾಗೂ ಉತ್ತರ ಪ್ರದೇಶ ದಂತಹ ರಾಜ್ಯಗಳಲ್ಲಿಯೂ ಇದ್ದಾರೆ. ''ಮದಾರಿ'' ಎಂತಲೇ ಗುರುತಿಸಿಕೊಳ್ಳುತ್ತಾರೆ. ೧೯೮೧ರ ಜನಗಣತಿಯ ಪ್ರಕಾರ ಇವರ ಒಟ್ಟು ಜನಸಂಖ್ಯೆ ೨೫೮೭ ರಷ್ಟಿದೆ ಉರ್ದು ಭಾಷೆಯನ್ನು ಮಾತನಾಡುತ್ತಾರೆ. ಮಾಂಸಹಾರಿಗಳಾಗಿದ್ದಾರೆ. ಗೋಧಿ, ಭತ್ತದ ಬೆಳೆ ಬೆಳೆಯುತ್ತಾರೆ. ಸಗೋತ್ರ ವಿವಾಹ ಪದ್ಧತಿ ಜಾರಿಯಲ್ಲಿದೆ. ಈ ಜನಾಂಗದ ಹೆಂಗಸರು

ಮನೆಯೊಳಗಿನ ಕೆಲಸ ಹಾಗೂ ಪ್ರಾಣಿ ಪೋಷಣೆಯಲ್ಲೆ ತೊಡಗಿರುತ್ತಾರೆ. ಪುರುಷನಷ್ಟೆ ಸಮಾನತೆ ಹೊಂದಿರುತ್ತಾರೆ. ಕರಡಿ ಆಡಿಸುವ ಇವರಿಗೆ ಯಾವುದೇ ಭೂಮಿ, ಮನೆ, ಆಸ್ತಿಯಿಲ್ಲ ಕೋತಿಯಾಡಿಸುವುದು. ಕರಡಿಯಾಡಿಸುವ ವೃತ್ತಿಯ ಜೀವನಾಧಾರವಾಗಿದೆ. ಇವರೊಳಗೆ ಕೋತಿಯನ್ನು ಕೆಲವರು ಆಡಿಸುತ್ತಾರೆ. ಇನ್ನು ಕೆಲವರು ಕರಡಿಗಳನ್ನು ಆಡಿಸುತ್ತಾರೆ. ವೃತ್ತಿಯಿಂದ ಹಂಚಿಹೋಗಿರುತ್ತಾರೆ. ಕೆಲವರು ಕೈಗಾರಿಕೆ, ಕಾರ್ಖಾನೆಗಳಲ್ಲಿ ಕಾರ್ಮಿಕರಾಗಿ ದುಡಿಯುತ್ತಿದ್ದಾರೆ.

ಇಸ್ಲಾಂ ಧರ್ಮದ ಸುನ್ನಿ ಪಂಗಡಕ್ಕೆ ಸೇರಿದ ಇವರು "ಪೀರ್‌ಬು ಆಲಿ ಷಾ ಖಲಂದರ್" ಎಂಬ ಸಂತನ ಅನುಯಾಯಿಗಳು ಎಲ್ಲಾ ಹಬ್ಬ ಹರಿದಿನಗಳಲ್ಲಿ ಪಾಲ್ಗೊಳ್ಳುತ್ತಾರೆ. ಪುರುಷರ ಶಿಕ್ಷಣಕ್ಕೆ ಹೆಚ್ಚು ಒತ್ತು ನೀಡುತ್ತಾರೆ. ನಂತರ ಸ್ತ್ರೀಯರಿಗೆ ನೀಡಲಾಗುತ್ತದೆ. ಇವರ ಸಾಕ್ಷರತೆಯು ೧೯೮೧ರ ಜನಗಣತಿಯ ಪ್ರಕಾರ ಶೇ. ೨೨,೫೭% ರಷ್ಟು ಹೊಂದಿದ್ದಾರೆ. ಇವರು ಕರ್ನಾಟಕದ ಹಲವು ಕಡೆಗಳಲ್ಲಿ ವಾಸವಾಗಿದ್ದಾರೆ. ಇವರ ಜನಸಂಖ್ಯೆಯು ೧೯೮೧ರ ಜನಗಣತಿ ಪ್ರಕಾರ ಶೇ ೩೪.೩೪ ರಷ್ಟಿದೆ

ಕೆ.ಎಸ್. ಸಿಂಗ್‌ರವರು ಈ ಮೇಲಿನ ಮದಾರಿ ಖಲಂದರನ್ನು ಗುರುತಿಸುತ್ತಾ ಉತ್ತರ ಭಾರತದಿಂದ ಕರ್ನಾಟಕಕ್ಕೆ ವಲಸೆ ಬಂದುದರ ಕುರಿತು ಮಾಹಿತಿಯನ್ನು ನೀಡಿದ್ದಾರೆ. ಈ ಮೇಲಿನ ಮಾಹಿತಿಯಿಂದ ನಾವು ಮದಾರಿ ಖಲಂದರರು ಉತ್ತರ ಭಾರತದಿಂದ ಕರ್ನಾಟಕಕ್ಕೆ ವಲಸೆ ಬಂದಿದ್ದಾರೆ ಎಂದು ತಿಳಿಯಬಹುದು. ಹೀಗೆ ಮದಾರಿಗಳು ಉತ್ತರ ಭಾರತದಿಂದ ಕರಡಿ ಆಡಿಸುತ್ತಾ ಕರ್ನಾಟಕಕ್ಕೆ ಬಂದು ಇಲ್ಲಿಯ ನೆಲೆಯೂರಿದ್ದಾರೆ.

ಎಡ್ಗರ್ ಥರ್‌ಸ್ಟನ್ ರವರು ತಮ್ಮ ಗ್ರಂಥವಾದ " Caste and tribes of Southern India" ಕೃತಿಯಲ್ಲಿ ಮದಾರಿ ಎಂದರೆ "ಗಾರುಡಿಗರು" ಎಂದು ಗುರುತಿಸುತ್ತಾರೆ.

ಅಡಿಟಿಪ್ಪಣಿ

೧. ಹೊಸಪೇಟೆ ತಾಲೂಕು ದರ್ಶನ ಡಾ.ಸಿ.ಮಹದೇವ, ಡಾ. ಮಾಧವ ಪೆರಾಜೆ, ಕನ್ನಡ ವಿಶ್ವವಿದ್ಯಾಲಯ, ಹಂಪಿ ೨೦೦೨ ಪು. ೮೯

೨. ಬಳ್ಳಾರಿ ಜಿಲ್ಲಾ ಅಂಕಿ ಅಂಶಗಳ ನೋಟ ೨೦೦೨ (ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಛೇರಿ ಬಳ್ಳಾರಿ)

೩. ಕೊಪ್ಪಳ ಜಿಲ್ಲೆ ಮೊಹರಂ ಪದಗಳು ಪ್ರಕಾಶ ಬಳ್ಳಾರಿ (ಎಂ.ಪಿಲ್. ಅಪ್ರಕಟಿತ ನಿಬಂಧ)

೪. India all communities K.S.Sing ಪು 2037, 2038, 2039, 2041

೫. Caste and tribes of Southern India vol iv Edger Thurston ಪು 292

~~ಕ್ಷೇತ್ರಕಾರ್ಯದ ಸಂದರ್ಭದಲ್ಲಿನ~~

೬. ವಕ್ತೃ ಮಾಹಿತಿ ಕರಡಿ ರಾಜಾಹುಸೇನ್, ಕರಡಿ ಪಕ್ರುಸಾಬ್ ಹಂಪಿನಕಟ್ಟೆ, ಮಗಂಳಾಪುರು.

೭. ಹೊಸಪೇಟೆ ತಾಲೂಕು ದರ್ಶನ ಡಾ. ಸಿ.ಮಹಾದೇವ, ಡಾ. ಮಾಧವ ಪೆರಾಜೆ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೨ ಪು

ಅಧ್ಯಾಯ ಮೂರು

ಸಾಮಾಜಿಕ ಸ್ಥಿತಿಗತಿ

ಮದಾರಿಗಳ ಸಾಮಾಜಿಕ ಸ್ಥಿತಿಗತಿ

ಶೈಕ್ಷಣಿಕ ಸ್ಥಿತಿಗತಿ

ಆರ್ಥಿಕ ಸ್ಥಿತಿಗತಿ

ರಾಜಕೀಯ ಸ್ಥಿತಿಗತಿ

ಅಧ್ಯಾಯ ಮೂರು

ಸಾಮಾಜಿಕ ಸ್ಥಿತಿಗತಿ

ನ್ಯಾಯ ಪದ್ಧತಿ

ಪರಂಪರೆಯಲ್ಲಿ ನ್ಯಾಯ ಪದ್ಧತಿಯುತನ್ನದೇ ಆದ ವಿಶಿಷ್ಟ ಪರಂಪರೆಯಾಗಿ ಬೆಳೆದುಕೊಂಡು ಬಂದಿರುವುದನ್ನು ಕಾಣಬಹುದಾಗಿದೆ. ಪ್ರಪಂಚದ ಎಲ್ಲಾ ಅಲೆಮಾರಿ ಬುಡಕಟ್ಟು ಸಮುದಾಯಗಳು ತಮ್ಮದೇ ಆದ ನ್ಯಾಯ ಪದ್ಧತಿ ಕ್ರಮವನ್ನು ಅನುಸರಿಸುವುದನ್ನು ಕಾಣಬಹುದು.

ಒಂದು ಜನಸಮುದಾಯದ ನಂಬಿಕೆ ಆಚರಣೆ ಆದರ್ಶ ಮೌಲ್ಯಗಳು ನ್ಯಾಯ ಪದ್ಧತಿಯನ್ನು ರೂಪಿಸುತ್ತವೆ. (ರುದ್ರಪ್ಪ ಕರಿಶೆಟ್ಟಿ ೧೯೯೫-೫೬) ಈ ನ್ಯಾಯ ಪದ್ಧತಿ ಕ್ರಮವು ಬುಡಕಟ್ಟುಗಳಲ್ಲಿ ತುಂಬಾ ಗೌರವ ಮತ್ತು ನಿಷ್ಠೆಯಿಂದ ನಡೆಯಲ್ಪಡುತ್ತವೆ. ಇದು ಸರ್ಕಾರ ರಚಿಸಿದ ನ್ಯಾಯಾಲಯಗಳಿಗಿಂತ ಹೆಚ್ಚಿನ ಮಹತ್ವವನ್ನು ಈ ಸಮುದಾಯಗಳಲ್ಲಿ ಹೊಂದಿರುತ್ತದೆ.

ಮದಾರಿಗಳು ತಮ್ಮದೇ ಆದ ಇತರೆ ಸಮುದಾಯಗಳಿಗಿಂತ ಭಿನ್ನವಾದ ನ್ಯಾಯ ಪದ್ಧತಿಯ ರಚನೆ ಮಾಡಿಕೊಂಡಿರುವರು ತಮ್ಮ ಹಿರಿಯರು ಹಾಕಿಕೊಟ್ಟ ಮಾರ್ಗವನ್ನು ನ್ಯಾಯ ಪಂಚಾಯಿತಿಯಲ್ಲಿ ಅನುಸರಿಸಿಕೊಂಡು ಬಂದಿರುತ್ತಾರೆ. ನ್ಯಾಯವನ್ನು ದೊರಕಿಸಿಕೊಡುವುದೆಂದರೆ ಅದು ದೈವದ ಹಾಗೂ ತಮ್ಮ ಮನೆಯ ದೇವರ ಮೇಲೆ ಪ್ರಮಾಣ ಮಾಡಿದಂತಿರುತ್ತದೆ. ಅಂದರೆ ನ್ಯಾಯ ಪಂಚಾಯಿತಿ ಎನ್ನುವುದು ದೇವರ ತೀರ್ಮಾನ ಅಥವಾ ದೈವದ ಸಂಕೇತ ಎಂದು ಇವರು ಭಾವಿಸುತ್ತಾರೆ. ನ್ಯಾಯ ಪಂಚಾಯತಿಯಲ್ಲಿ ೩ ರಿಂದ ೪ ಜನ ಮುಖಂಡರಿರುವರು ಈ ಮುಖಂಡರನ್ನು ಜಮಾತ್ ಎಂಬ ಹೆಸರಿನಿಂದ ಕರೆಯುವರು. ''ಜಮಾತ್‌ಎಂದರೆ ಪ್ರಾಮಾಣಿಕ ನ್ಯಾಯ ದೊರಕಿಸಿಕೊಡುವ ಒಂದು ದೈವದ ಗುಂಪು'' ಎಂದು ಕರೆಯುವರು. ಈ ಜಮಾತ್‌ನವರು ತಪ್ಪು ಸರಿಗಳನ್ನೆಲ್ಲಾ ಬಹಳ ಸೂಕ್ಷ್ಮವಾಗಿ ಪರಿಶೀಲಿಸಿ ಯಾವುದು ತಪ್ಪು ಇರುವುದೊ ಅದಕ್ಕೆಶಿಕ್ಷೆ ವಿಧಿಸಿ ಸರಿ ಇರುವ ಕ್ರಮಕ್ಕೆ ನ್ಯಾಯ ದೊರಕಿಸಿಕೊಡುವುದು ಈ ಜಮಾತ್‌ನ ಕರ್ತವ್ಯವಾಗಿದೆ. ಈ ಜಮಾತ್‌ನ್ನು ಆರಿಸುವುದು ಈ ಸಮುದಾಯದ ಜನರ ಮುಖ್ಯ ಕರ್ತವ್ಯ ಆಗಿದೆ.

ಕುಟುಂಬದಲ್ಲಿ ಆಸ್ತಿಯ ವಿಷಯವಾಗಿ ಮಕ್ಕಳು ತಂದೆ ತಾಯಿಯರೊಡನೆ ಜಗಳ ಮಾಡಿದಾಗ ಅವರನ್ನು ಹೆದರಿಸುವುದು, ಬೆದರಿಸುವುದು ಮಾಡಿದಾಗ ಆಗ ಗ್ರಾಮದಲ್ಲಿ ದೇವರ ಕಟ್ಟೆ (ಪಂಚಾಯಿತಿ ಮಾಡುವಸ್ಥಳ) ಯಲ್ಲಿ ಸಭೆ ಸೇರಿ ಸಮುದಾಯದವರೆಲ್ಲರ ಸಮ್ಮುಖದಲ್ಲಿ ಜಮಾತ್‌ನ ಮುಖಂಡರು ಆ ಕುಟುಂಬದ ಹಿರಿಯರು

ಹಾಗೂ ಮಕ್ಕಳನ್ನು ಕರೆಸಿ ಮಕ್ಕಳಿಗೆ ಬುದ್ಧಿಮಾತು ಹೇಳುವರು. ಹಾಗೂ ತಮ್ಮ ತಂದೆ ತಾಯಿಯರ ಕಾಲಿಗೆ ಬಿದ್ದು ತಮ್ಮ ತಪ್ಪನ್ನು ತಿದ್ದಿಕೊಂಡು ಮುಂದೆ ಹೀಗಾಗದಂತೆ ನೋಡಿಕೊಳ್ಳುವಂತೆ ತಿಳಿಸುವರು.

ಈ ಸಮುದಾಯದಲ್ಲಿ ತಪ್ಪು ಮಾಡಿದಾಗ ದಂಡವನ್ನು ಕಟ್ಟಬೇಕಾಗುತ್ತದೆ. ಇವರು ಕಟ್ಟುವ ದಂಡದ ಶುಲ್ಕ ೫ ರೂಪಾಯಿಯಿಂದ ಪ್ರಾರಂಭವಾಗುತ್ತದೆ. ತಪ್ಪು ದೊಡ್ಡಪ್ರಮಾಣದಲ್ಲಿದ್ದರೆ ೧೦೦ ರೂಪಾಯಿ ದಂಡ ಕಟ್ಟುತ್ತಾರೆ. ಕೆಲವು ಸಾರಿ ಎಲೆ ಅಡಿಕೆಯ ಮೂಲಕ ನ್ಯಾಯ ತೀರ್ಮಾನ ಮಾಡುವುದುಂಟು.

ಗಂಡ ಹೆಂಡತಿಯ ನಡುವೆ ಪರಸ್ಪರ ಕಲಹ ಅಥವಾ ವೈಮನಸ್ಸು ಮೂಡಿದರೆ, ಗಂಡನಿಗೆ ತನ್ನ ಹೆಂಡತಿಯ ಶೀಲ ಶಂಕಿಸಿ ಅವಳ ಜತೆ ಸಂಸಾರ ಮಾಡಲು ಇಷ್ಟವಿರದಿದ್ದರೆ ಆಗ ಜಮಾತ್‌ನವರು ಸಮುದಾಯದವರ ಸಮ್ಮುಖದಲ್ಲಿ ಸಭೆ ಸೇರಿ ಗಂಡನಿಗೆ ಹೆಂಡತಿಯಿಂದ ವಿಚ್ಛೇದನೆ ಕೊಡಿಸುವರು. ಇದೇ ರೀತಿ ಗಂಡನಿಂದ ಹೆಂಡತಿಗೇನಾದರೂ ಕಿರುಕುಳವಾಗಲಿ, ಚಿತ್ರಹಿಂಸೆಯಾಗಲಿ ಆದರೆ ಗಂಡನಿಂದ ಹೆಂಡತಿಗೆ ಪರಿಹಾರಧನವನ್ನು ಕೊಡಿಸುವರು. ಗಂಡನಾದವನು ತನ್ನ ಹೆಂಡತಿಯನ್ನು ಉದ್ದೇಶಪೂರ್ವಕವಾಗಿ ನೇಣಿಗೆ ಹಗ್ಗ ಬಿಗಿಯುವುದಾಗಲಿ, ವಿಷಕೊಟ್ಟು ಸಾಯಿಸುವುದಾಗಲಿ, ಮಾನಸಿಕ ಹಿಂಸೆ ನೀಡುವುದಾಗಲಿ ಮಾಡಿದರೆ ಗಂಡನಾದವನಿಗೆ ಕಠಿಣ ಶಿಕ್ಷೆ ಅಥವಾ ಗಡಿಪಾರು ಮಾಡುವರು. ಶಿಕ್ಷೆಯನ್ನೇನಾದರೂ ತಿರಸ್ಕರಿಸಿದರೆ ಪೋಲೀಸ್ ಸ್ಟೇಷನ್ನಿಗೆ ಒಪ್ಪಿಸುವರು.

ಈ ಸಮುದಾಯದ ವಿವಾಹಿತನಿಗೆ ಹೆಂಡತಿಯಾದವಳು ಆಕಸ್ಮಾತ್ ಆಗಿ ತೀರಿಕೊಂಡರೆ ಪುರುಷನಿಗೆ ಇನ್ನೊಂದು ವಧು ನೋಡಿ ಮದುವೆ ಮಾಡುತ್ತಾರೆ. ಆದರೆ ಅದೇ ಹೆಂಡತಿಯಾದವಳಿಗೆ ಗಂಡ ಸತ್ತರೆ ಮರುಮದುವೆಯಾಗಲು ಅವಳಿಗೆ ಅವಕಾಶವಿಲ್ಲ ಇದು ಬಹಳ ಪ್ರಾಚೀನ ಕಾಲದಿಂದಲೂ ನಡೆದುಕೊಂಡು ಬಂದಿದೆ. ಇಂದಿಗೂ ಇವರು ಈ ಪದ್ಧತಿ ಅನುಸರಿಸುತ್ತಿದ್ದಾರೆ.

ಹೊರಗಿನಿಂದ ಯಾರಾದರೂ ಈ ಸಮುದಾಯಕ್ಕೆ ಅಪನಿಂದನೆ ಅಥವಾ ಅಪಹಾಸ್ಯ ಮಾಡಿದರೆ ಈ ಜನಾಂಗದವರೆಲ್ಲರೂ ಅದರ ಬಗೆಗೆ ತೀರ್ಮಾನ ಕೈಗೊಳ್ಳಲು ಅಂದು ಸಭೆ ಸೇರಿ ಸೂಕ್ತ ತೀರ್ಮಾನವನ್ನು ಜಮಾತ್‌ನ ಸಮ್ಮುಖದಲ್ಲಿ ಸಮುದಾಯದವರ ಅಭಿಪ್ರಾಯದ ಮೇಲೆ ತೀರ್ಮಾನ ತೆಗೆದುಕೊಂಡು ಮುಂದಿನ ಕ್ರಮವನ್ನು ಕೈಗೊಳ್ಳುತ್ತಾರೆ. ಹಾಗೂ ಅದರ ಮೇಲೆ ಶಿಕ್ಷಿಸಲು ಮುಂದಾಗುತ್ತಾರೆ.ಇದರಾಚೆಗೆ ಈ ಸಮಸ್ಯೆಬಗೆ ಹರಿಯದಿದ್ದರೆ ಪೋಲೀಸ್ ಸ್ಟೇಷನ್ ಮೆಟ್ಟಿಲು ಹತ್ತುವರು.

ಕೌಟುಂಬಿಕ ಜೀವನ

ಕುಟುಂಬ ಒಂದು ಸಾಮಾಜಿಕ ಸಂಸ್ಥೆಯಾಗಿದ್ದು ಭಾರತೀಯ ಸಂದರ್ಭದಲ್ಲಿ ಮುಖ್ಯವಾದ ಸಾಮಾಜಿಕ ಘಟಕವಾಗಿದೆ. ಇಂಡಿಯಾದ್ಯಂತ ಬುಡಕಟ್ಟುಗಳು ಸಾಮಾನ್ಯವಾಗಿ ಪಿತೃ ಪ್ರಧಾನ ಕುಟುಂಬಗಳನ್ನು ಹೊಂದಿವೆ. ಸಮಾಜ ಶಾಸ್ತ್ರಜ್ಞರು ಕುಟುಂಬವನ್ನು ''ವಿಭಕ್ತ ಕುಟುಂಬ'' ಮತ್ತು ''ಅವಿಭಕ್ತ ಕುಟುಂಬ'' ಎಂದು ಎರಡು ಪ್ರಕಾರಗಳಾಗಿ ವಿಂಗಡಿಸಿದ್ದಾರೆ. ವಿಭಕ್ತ ಕುಟುಂಬದಲ್ಲಿ ಕೇವಲ ಗಂಡ ಹೆಂಡತಿ ಮಕ್ಕಳು ಮಾತ್ರ ಇದ್ದರೆ

ಅವಿಭಕ್ತ ಕುಟುಂಬದಲ್ಲಿ ತಂದೆ ತಾಯಿ ಮಕ್ಕಳು ಸೊಸೆಯಂದಿರು ಮೊಮ್ಮಕ್ಕಳು ಹಾಗೂ ಇತರ ಸಂಬಂಧಿಗಳು ಒಟ್ಟಾಗಿ ಇರುತ್ತಾರೆ. ಇಂಡಿಯಾದ್ಯಂತ ಬುಡಕಟ್ಟುಗಳು ಸಾಮಾನ್ಯವಾಗಿ ಪಿತೃಪ್ರಧಾನ ಕುಟುಂಬಗಳನ್ನು ಹೊಂದಿದೆ. ದಕ್ಷಿಣ ಭಾರತದ ಕೆಲವು ಬುಡಕಟ್ಟುಗಳನ್ನು ಹೊರತು ಪಡಿಸಿ ಮತ್ತು ಕೇರಳದ ನಾಯರ್‌ಗಳಲ್ಲಿ ಬಿಟ್ಟರೆ ಎಲ್ಲಾ ಕಡೆಗಳಲ್ಲಿ ಪಿತೃಪ್ರಧಾನ, ಪಿತೃವಂಶೀಯ ಮತ್ತು ಪಿತೃಸ್ಥಾನೀಯ ಕುಟುಂಬಗಳನ್ನು ನೋಡಬಹುದಾಗಿದೆ.

ಮದಾರಿಗಳು ಪಿತೃ ಪ್ರಧಾನ ಕುಟುಂಬ ವ್ಯವಸ್ಥೆಯನ್ನು ಪಾಲಿಸಿಕೊಂಡು ಬಂದಿದ್ದಾರೆ. ಬಂದುತ್ವ ಮತ್ತು ಆಸ್ತಿಯ ಹಂಚಿಕೆ ಪುರುಷರ ಮೂಲಕ ಆಗುವುದು ಜೊತೆಗೆ ಇವರಲ್ಲಿ ಪುರುಷನೇ ಕುಟುಂಬದ ಯಜಮಾನನಾಗಿರುತ್ತಾನೆ. ಕುಟುಂಬದ ಆಗು-ಹೋಗುಗಳಿಗೆಲ್ಲಾ ಇವನೇ ಜವಾಬ್ದಾರನಾಗಿರುತ್ತಾನೆ. ಮಹಿಳೆಯರಿಗೆ ಸಂಪೂರ್ಣ ಸ್ವಾತಂತ್ರ್ಯವಿರುವುದಿಲ್ಲ. ಆದರೆ ಈ ಕುಟುಂಬದಲ್ಲಿ ಮಹಿಳೆಯೇ ಹೆಚ್ಚಿನ ಜವಾಬ್ದಾರಿಯಾಗಿ ಕಾರ್ಯನಿರ್ವಹಿಸುತ್ತಾಳೆ. ಮದಾರಿ ಜನರಲ್ಲಿ ಮೊದಲಿಗೆ ಅವಿಭಕ್ತ ಕುಟುಂಬಗಳೇ ಜಾಸ್ತಿ. ಒಂದೇ ಸೂರಿನಲ್ಲಿ ಎರಡು ಅಥವಾ ಮೂರು ತಲೆಮಾರಿನ ಜನರು ವಾಸಿಸುತ್ತಿದ್ದರು. ಆದರೆ ಇತ್ತೀಚಿನ ದಿನಗಳಲ್ಲಿ ಆಧುನೀಕರಣದ ಫಲವೆಂಬಂತೆ ವಿಭಕ್ತ ಕುಟುಂಬಗಳು ಹೆಚ್ಚಾಗಿ ರಚನೆಯಾಗುತ್ತಿರುವುದು ಕಂಡುಬರುತ್ತದೆ.

ಕುಟುಂಬದಲ್ಲಿ ತಂದೆಯ ತರುವಾಯ ಮನೆಯ ಹಿರಿಯ ಮಗನೆ ಹಿರಿತನ ಮಾಡುತ್ತಾನೆ.ಒಂದು ವೇಳೆ ತಂದೆ ತೀರಿಕೊಂಡು ಗಂಡು ಮಗ ಇರದಿದ್ದರೆ ಈ ಜವಾಬ್ದಾರಿಯನ್ನೇಲ್ಲಾ ಯಜಮಾನನ ಹೆಂಡತಿಯೇ ನೋಡಿಕೊಳ್ಳುವುದುಂಟು. ಕುಟುಂಬದಲ್ಲಿ ಜೀವನ ನಿರ್ವಹಣೆಗೆ ಹೆಂಡತಿಯು ಅರ್ಧಪಾಲು ಖರ್ಚನ್ನು ಸಂಗ್ರಹಿಸುತ್ತಾಳೆ. ಇತ್ತೀಚಿನ ದಿನಗಳಲ್ಲಿ ಮೂಲ ವೃತ್ತಿಯ ನಿಷೇದದಿಂದ ಗಂಡು ಮಕ್ಕಳು ಕೆಲಸವಿಲ್ಲದೆ ಮನೆಯಲ್ಲಿದ್ದ ಸಂದರ್ಭದಲ್ಲಿ ಮಹಿಳೆಯು ಕೂಲಿಗೆ ಹೋಗಿ ದುಡಿದು ಕುಟುಂಬವನ್ನು ಸಾಕಿರುವ ನಿದರ್ಶನ ಕ್ಷೇತ್ರಕಾರ್ಯಕ್ಕೆ ಹೋದಾಗ ತಿಳಿಯಿತು. ಇನ್ನೊಂದು ಕುಟುಂಬದಲ್ಲಿ ಪುರಷನು ಕೆಲಸವಿಲ್ಲದೆ ಮನೆಯಲ್ಲಿದ್ದದ್ದು ಆ ಕುಟುಂಬದ ಮಹಿಳೆಯು ಸಣ್ಣ ಬೀಡಿ ಅಂಗಡಿಯಿಟ್ಟು ಕುಟುಂಬವನ್ನು ನಡೆಸುತ್ತಿರುವ ನಿದರ್ಶನವು ಆ ಸಮಯದಲ್ಲಿ ತಿಳಿಯಿತು. ಹೀಗೆ ಮಹಿಳೆಯು ಕೂಡಾ ಇಂದಿನ ದಿನಗಳಲ್ಲಿ ಪುರುಷನಷ್ಟೆ ಸಾಮರ್ಥ್ಯ ಹೊಂದಿ ಕುಟುಂಬವನ್ನು ನೋಡಿಕೊಳ್ಳುತ್ತಿರುವ ಸಂದರ್ಭಗಳು ಈ ಜನಾಂಗದಿಂದ ಕ್ಷೇತ್ರಕಾರ್ಯದ ಸಮಯದಲ್ಲಿ ಪ್ರತ್ಯಕ್ಷವಾಗಿ ಕಂಡುಬಂದಿತು.

ಆಹಾರ ಪದ್ಧತಿ

ಮದಾರಿಗಳು ಮಾಂಸಹಾರಿಗಳು ಮತ್ತು ಶಾಖಾಹಾರಿಗಳು ಸಾಂದರ್ಭಿಕತೆಗೆ ತಕ್ಕಂತೆ ಮಾಂಸಹಾರಿಗಳಾಗಿದ್ದಾರೆ. ಇತ್ತೀಚಿನ ದಿನಗಳಲ್ಲಿ ಮಾಂಸದ ಊಟವನ್ನು ಮಾಡುವುದು ಕಷ್ಟವಾಗಿದೆ ಎನ್ನುತ್ತಾರೆ. ಮೊದಲು ಕರಡಿ ಇದ್ದಾಗೆ ಚೆನ್ನಾಗಿ ಮಾಂಸವನ್ನು ತಿನ್ನುತ್ತಿದ್ದವು ಇಂದು ಮಾತ್ರ ತಿನ್ನುವುದು ಕಷ್ಟವಾಗಿದೆ. ಹಣದ ಕೊರತೆಯಿಂದಾಗಿ ಯಾವುದನ್ನು ಕೊಳ್ಳಲಿಕ್ಕಾಗುವುದಿಲ್ಲ ಅಕ್ಕಿ ಜೋಳ, ಬೇಳೆ, ಎಣ್ಣೆ

ಪದಾರ್ಥಗಳ ಬೆಲೆ ಗಗನಕ್ಕೆ ಏರಿಬಿಟ್ಟಿವೆ. ಕೈಯಲ್ಲಿ ಬಿಡಿಗಾಸು ಇಲ್ಲ ಆಸ್ತಿ ಪಾಸ್ತಿಯೂ ಇಲ್ಲ ಒಂದು ಹೊತ್ತಿನ ಊಟಕ್ಕೆ ಚಿಂತೆ ಮಾಡಬೇಕಾಗಿದೆ ಎಂದು ಕಣ್ಣೀರಿಟ್ಟು ವಕ್ತೃ ತಿಳಿಸಿದುದು ಸಂಶೋಧನೆಯಿಂದ ಗೊತ್ತಾಗುತ್ತದೆ.

ಮದಾರಿಗಳು ಇಂದು ಸಸ್ಯಹಾರಿಗಳೇ ಆಗಿಬಿಟ್ಟಿದ್ದಾರೆ. ಕಾರಣ ಎಲ್ಲಾ ಬೆಲೆಗಳು ಗಗನಕ್ಕೆ ಏರಿಬಿಟ್ಟಿವೆ. ದಿನನಿತ್ಯ ಇವರು, ರಾಗಿಮುದ್ದೆ ಅನ್ನ, ಸಾರು, ರೊಟ್ಟಿಯೇ ಮುಖ್ಯ ಆಹಾರವನ್ನಾಗಿಸಿಕೊಂಡಿದ್ದಾರೆ. ಅಕ್ಕಿ, ಬೇಳೆ, ಜೋಳವನ್ನು ಅಂಗಡಿಯಿಂದ ಕೊಳ್ಳಬೇಕಾಗಿದೆ. ಮೊದಲೆಲ್ಲಾ ಕರಡಿ ಇದ್ದಾಗ ಬೇಡಿ ತಂದದ್ದು ಮನೆಗೆ ಆಗುತ್ತಿತ್ತು. ಇಂದು ಏನೂ ಇಲ್ಲವಾಗಿದೆ ಎಂದು ವಕ್ತೃ ಮಾಹಿತಿಯಿಂದ ಗೊತ್ತಾಗುತ್ತದೆ. ತಮ್ಮ ಮಕ್ಕಳು ಇಂದು ಪಕ್ಕದ ಪಟ್ಟಣಗಳಿಗೆ ಹೋಗಿ ಅಲ್ಪಸ್ವಲ್ಪ ಹಣ ಸಂಪಾದಿಸಿಕೊಂಡು ಬಂದರೆ ಮನೆಯ ಹೆಣ್ಣುಮಕ್ಕಳು ಆ ಊರಿನ ಉಳ್ಳವರ ಹೊಲಗಳಿಗೆ ಹೋಗಿ ಕೂಲಿ ಮಾಡಿ ಊಟದ ಅಭಾವವನ್ನು ನೀಗಿಸಿಕೊಳ್ಳುತ್ತಾರೆ. ಮನೆಯಲ್ಲಿ ಯಾರು ಕೂಡುವುದಿಲ್ಲ ಎಲ್ಲರೂದುಡಿಯಲು ಹೋಗಿಬಿಡುವರು. ಸಾಯಂಕಾಲದ ವೇಳೆಗೆ ಮನೆಗೆ ಬಂದು ರಾತ್ರಿ ಎಲ್ಲರು ಸೇರಿ ಒಟ್ಟಿಗೆ ಊಟವನ್ನು ಮಾಡುತ್ತಾರೆ.

ಮದಾರಿಗಳಿಗೆ ಕುಡಿತದ ಚಟವಿರುತ್ತದೆ ಆದರೂ ಕಡಿಮೆ ಪ್ರಮಾಣದಲ್ಲಿ, ರಾತ್ರಿಯಾಯಿತೆಂದರೆ ಸಾರಾಯಿ, ವಿಸ್ಕಿಯನ್ನು ಕುಡಿದು ಬರುತ್ತಾರೆ. ಕುಡಿಯಲು ಕಾರಣ ಕೇಳಿದಾಗ ದಿನವೆಲ್ಲಾ ಕಠಿಣ ಕೆಲಸಗಳನ್ನು ಮಾಡಿರುತ್ತೇವೆ ಆದರ ವಿಶ್ರಾಂತಿಗಾಗಿ ಕುಡಿಯುತ್ತೇವೆ ಎನ್ನುತ್ತಾರೆ. ಯುವಕರು ಅಷ್ಟೇನೂ ಕುಡಿತಕ್ಕೆ ಒಳಗಾಗಿಲ್ಲ ದೊಡ್ಡವರೆ ಹೆಚ್ಚಾಗಿ ಕುಡಿಯುವರು.

ಬೆಡಗುಗಳು

ಬೆಡಗುಗಳು ಪ್ರತಿಯೊಂದು ಸಮುದಾಯದಲ್ಲಿ ಬಹಳ ವಿಶಿಷ್ಟವಾದ ಪಾತ್ರವನ್ನು ವಹಿಸುತ್ತವೆ. ಬೆಡಗುಗಳು ಒಂದು ಜನಾಂಗದ ಸಂಬಂಧ ಕೂಡುಕೊಳ್ಳುವಿಕೆಯ ಸಂಸ್ಕೃತಿ, ವ್ಯಕ್ತಿಯ ಮಾಹಿತಿಯನ್ನು ತಿಳಿಸಿಕೊಡುತ್ತವೆ.

ಮದಾರಿಗಳಲ್ಲಿ ೫ ರೀತಿಯ ಒಳಪಂಗಡಗಳಿವೆ. ಮುಸ್ಲಿಂ ಧರ್ಮದ ಆಧಾರದ ಮೇಲೆ ಈ ಒಳಪಂಗಡಗಳು ರಚಿತವಾಗಿರುತ್ತವೆ. ಪ್ರಮುಖವಾದವುವೆಂದರೆ

ಶೇಖ್ ಸೈಯದ್ ಮೊಗಲ್, ಪಠಾಣ್, ದರ್ವೇಶ್ ಎಂಬ ೫ ಒಳಪಂಗಡಗಳಿವೆ. ಈ ಪಂಗಡಗಳು ಪರಸ್ಪರ ಭಿನ್ನವಾದ ಕಾರ್ಯವನ್ನು ನಿರ್ವಹಿಸುತ್ತವೆ. ಈ ಪಂಗಡಗಳು ವೈವಾಹಿಕ ಸಂಬಂಧದಲ್ಲಿ ಕೂಡುಕೊಳ್ಳುವಿಕೆಯಲ್ಲಿ ವಿಶಿಷ್ಟ ಬದಲಾವಣೆಯನ್ನು ಹೊಂದಿವೆ. ಉತ್ತರ ಭಾರತದಿಂದ ವಲಸೆ ಬಂದ ಈ ಸಮುದಾಯವು ಈ ನಾಡಿನ ಒಳಗೆ ತಮ್ಮ ಬೆಡಗನ್ನು ಹೋಲುವ ಬೆಡಗಿನೊಂದಿಗೆ ಸಂಬಂಧವಿಟ್ಟುಕೊಳ್ಳಲು ಹೆಚ್ಚು ಇಷ್ಟಪಡುತ್ತದೆ. ತಮ್ಮ ಬೆಡಗಿನ ಸಂಬಂಧಿಗಳೆಲ್ಲಾ ಉತ್ತರ ಭಾರತದಲ್ಲೆ ವಾಸವಾಗಿರುವುದು ಇವರ ಮೂಲ ವೃತ್ತಿಯಿಂದಲೇ (ಕರಡಿಯಾಡಿಸುವಿಕೆ) ತಿಳಿಯುತ್ತದೆ. ಆಹಾರವನ್ನು ಅರಸಿಕೊಂಡು ದೇಶಾಂತರವೆಲ್ಲಾ ಸಂಚರಿಸುತ್ತಾ ಕೊನೆಗೆ ಕರ್ನಾಟಕಕ್ಕೆ ಬಂದು ನೆಲೆಯೂರಿರುವರು. ಹೀಗಾಗಿ ಇವರ ಮೂಲವಾಸಸ್ಥಳ ಹಾಗೂ

ಇವರ ಸಂಬಂಧಿಗಳು ಉತ್ತರ ಭಾರತದ ರಾಜ್ಯಗಳಲ್ಲಿರುವರು. ರಾಜಸ್ಥಾನ, ಪಂಜಾಬ್, ಹರಿಯಾಣ, ದೆಹಲಿ, ಉತ್ತರ ಪ್ರದೇಶಗಳಲ್ಲಿ ಹೆಚ್ಚಾಗಿ ವಾಸಿಸಿರುವರು.

ಇಲ್ಲಿರುವ ಮದಾರಿಗಳು ಹೆಚ್ಚಾಗಿ ಪಠಾಣ್ ಸಯ್ಯದ್ ಹಾಗೂ ದರ್ವೇಶಿಗಳೇ ಕಂಡುಬರುವರು[9] ವೈವಾಹಿಕ ಸಂಬಂಧವನ್ನು ಪಠಾಣ್‌ರು ಪಠಾಣ್‌ರೊಡನೆ ಸಂಬಂಧವೇರ್ಪಡಿಸಿಕೊಳ್ಳುವರು ಪಠಾಣ್ ಪಂಗಡ ಸ್ವಲ್ಪ ಚಿಕ್ಕದು ಸೈಯದ್ ಪಂಗಡ ಸ್ವಲ್ಪ ದೊಡ್ಡದು ಶ್ರೇಷ್ಠದ್ದು ಎಂಬ ನಂಬಿಕೆ ಇವರಲ್ಲಿದೆ. ದರ್ವೇಶಿಗಳೊಡನೆ ಸಂಬಂಧವನ್ನು ಬೆಳೆಸುತ್ತಾರೆ. ಮದಾರಿಗಳು ತಮ್ಮ ಪಂಗಡ (ಸ್ವಜಾತಿ) ದೊಳಗಡೆ ಗಂಡನ್ನು ಹುಡಿಕಿ ಮದುವೆ ಮಾಡುತ್ತಾರೆ.ತಮ್ಮ ಬೆಡಗು ಬಿಟ್ಟು ಬೇರೆ ಪಂಗಡದಿಂದ ಹೆಣ್ಣನ್ನು ತಮ್ಮ ಗಂಡಿಗೆ ತರುತ್ತಾರೆ. ಆದರೂ ಇದು ಬಹಳ ವಿರಳವೆನಿಸಿದೆ. ಬೇರೆ ಬೆಡಗಿನವರು ಇವರ ವೃತ್ತಿ (ಕರಡಿಯಾಟ)ಯನ್ನು ನೋಡಿಯೇ ಹಿಂದೆ ಸರಿಯುವುದುಂಟು ಇತ್ತೀಚೆಗೆ ಇದು ಕಡಿಮೆಯಾಗಿದೆ ಎಂದು ಈ ಸದಸ್ಯರು ಹೇಳುತ್ತಾರೆ.

ಹಾವಾಡಿಸುವವರು ಕೋತಿಯಾಡಿಸುವವರು ಕೂಡಾ ಇವರಂತೆ ಇಬ್ಬರು ಒಂದೇ ಧರ್ಮೀಯರು ಸಂಬಂಧದಲ್ಲಿ ಸಹೋದರರಾಗುತ್ತಾರೆ. ಆದರೂ ಕೆಲವು ವೇಳೆ ಹಾವಾಡಿಸುವವರೊಡನೆ ವೈವಾಹಿಕ ಸಂಬಂಧವನ್ನು ಬೆಳಸಿರುವ ಸಂದರ್ಭ ಉಂಟು ಎಂದು ಕರಡಿಯಾಡಿಸುವ ಹಿರಿಯರೊಬ್ಬರು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ತಿಳಿಸಿದರು.

ವಿವಾಹ

ವಿವಾಹ ಬಂಧನಕ್ಕೆ ಮದಾರಿಗಳಲ್ಲಿ ವಿಶೇಷ ಪ್ರಾಶಸ್ತ್ಯವಿದೆ. ಇದೊಂದು ದೈವಿಕ ಘಟನೆ ಎಂಬ ಕಲ್ಪನೆ ಇದೆ. ಆದ್ದರಿಂದಲೇ ವಿವಾಹದ ಕಾರ್ಯಕಲಾಪಗಳಿಗೆಲ್ಲಾ ಶಾಸ್ತ್ರ ವಿಧಿ-ವಿಧಾನಗಳು ಕಂಡುಬರುತ್ತವೆ. ಮದುವೆಯ ಆಗು-ಹೋಗು ಕೇವಲ ಗಂಡು-ಹೆಣ್ಣಿಗೆ ಸೀಮಿತವಾದುದಲ್ಲ ಇಡೀ ಸಮಾಜಕ್ಕೆ ಸಂಬಂಧಿಸಿದ್ದು

ಮದಾರಿಗಳು ವಿವಾಹವನ್ನು ಬಹಳ ಸರಳವಾಗಿ, ಅತ್ಯಲ್ಪ ಖರ್ಚಿನಲ್ಲಿಯೇ ಮಾಡಿಮುಗಿಸುವರು, ಬಹಳ ಸ್ಥಿತಿವಂತರಲ್ಲದ ಈ ಜನರು ಕೈಯಲ್ಲಿ ಇದ್ದಷ್ಟುಹಣದಿಂದ ಮದುವೆ ಮಾಡಿ ಮುಗಿಸಿಬಿಡುವರು. ಬಹಳ ಚಿಕ್ಕವಯಸ್ಸಿನಲ್ಲಿ ಅಂದರೆ ೧೨ ರಿಂದ ೧೪ ವರ್ಷದ ಒಳಗೆ ಶಾಲೆ ಓದುತ್ತಿರುವಾಗಲೇ ಹೆಣ್ಣು ಮಕ್ಕಳನ್ನು ಅರ್ಧಕ್ಕೆ ಬಿಡಿಸಿಮದುವೆ ಮಾಡಿಬಿಡುತ್ತಾರೆ. ಒಳ್ಳೆ ಕಡೆಯ ಸಂಬಂಧಸಿಕ್ಕು ಹುಡುಗನೇನಾದರೂ ಸಣ್ಣಪುಟ್ಟ ಕೆಲಸ ಮಾಡುತ್ತಿದ್ದದ್ದನ್ನು ಕಂಡು ಚೆನ್ನಾಗಿ ಸಂಸಾರ ನಿಭಾಯಿಸುವನು ಎಂಬ ಆಶಯೊಂದಿಗೆ ಮದುವೆ ಮಾಡಿ ಬಿಡುವರು ಮದುವೆಗೆ ಮುಂಚೆ ಇಸ್ಲಾಂ ಧರ್ಮದ ಶಾಸ್ತ್ರೋಕ್ತದಂತೆ ವೀಳ್ಯಶಾಸ್ತ್ರ (ನಿಶ್ಚಯಶಾಸ್ತ್ರ) ಮಾಡಿ ಖಾಜಿ (ಪುರೋಹಿತ)ಯ ಸಮ್ಮುಖದಲ್ಲಿ ಮುಸ್ಲಿಂ ಜಮಾತ್ (ಗುಂಪು)ನ ಮುಖಂಡರ ನೇತೃತ್ವದಲ್ಲಿ ಹೆಣ್ಣಿಗೆ ಸೇರಬೇಕಾದ ಮೆಹರ್‌ನ್ನು ಮಾತನಾಡಿ ಗಂಡಿನ ಸಮ್ಮತಿ ೩ ಬಾರಿ ಹೇಳಿಸಿ ನಿಖಾ ಮಾಡಿಬಿಡುತ್ತಾರೆ.

ಮದಾರಿಗಳು ಒಳಬಾಂಧವ್ಯ ವಿವಾಹ ಪದ್ಧತಿಯನ್ನು ಪಾಲಿಸುತ್ತಾರೆ. ತಮ್ಮ ಸ್ವಜಾತಿ ಅಂದರೆ ಪಠಾಣ್‌ನವರು ಪಠಾಣ್‌ನ ಗಂಡನ್ನೆ ಹುಡುಕುತ್ತಾರೆ ಹೀಗೆ ಸ್ವಜಾತಿಯವರೊಡನೆ ವಿವಾಹ ಸಂಬಂಧ ಬೆಳೆಸುತ್ತಾರೆ. ವರದಕ್ಷಿಣೆಗೆ ಸಂಬಂಧಿಸಿದಂತೆ ಹಿಂದಿನ ಕಾಲದಲ್ಲಿ ಕರಡಿಯನ್ನೆ ವರನಿಗೆ ದಕ್ಷಿಣೆಯಾಗಿ ಕೊಟ್ಟು

ವಿವಾಹಮಾಡಿಕೊಟ್ಟ ನಿದರ್ಶನವನ್ನು ಕರಡಿ ರಾಜಾಹುಸೇನ ಕ್ಷೇತ್ರಕಾರ್ಯದ ಸಂದರ್ಭದಲ್ಲಿ ತಿಳಿಸಿದರು. ಹೊರಗೆ ದುಡಿಯುವವರಲ್ಲ ಕೈಯಲ್ಲಿ ಅಷ್ಟೊಂದು ಹಣವಿರುವುದಿಲ್ಲವಾದ್ದರಿಂದ ತಮ್ಮ ಬಳಿ ಇರುವ ಕರಡಿಯನ್ನೆ ಕೊಟ್ಟು ಜೀವನ ಸಾಗಿಸುವಂತೆ ಹೇಳುತ್ತೇವೆ ಎಂದು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ವಕ್ತೃ ತಿಳಿಸಿದರು. ಕೆಲವು ಸಾರಿ ಮದಾರಿಯ ಹುಡುಗ ಹಿಂದು ಜಾತಿಯ ಹುಡುಗಿಯನ್ನು ಪ್ರೇಮಿಸಿ ಮದುವೆಯಾದಾಗ ಈ ಜನಾಂಗದ ಹಿರಿಯರು ಪಂಚಾಯಿತಿ (ಜಮಾತ್) ಸೇರಿ ಸಮುದಾಯದ ಸಮ್ಮುಖದಲ್ಲಿ ಇಬ್ಬರು ತಪ್ಪನ್ನು ಕ್ಷಮಿಸುವರು ಹಾಗೂ ಹುಡುಗಿಯನ್ನು ಇಸ್ಲಾಂ ಧರ್ಮಕ್ಕೆ ಶಾಸ್ತ್ರೋಕ್ತವಾಗಿ ಸೇರಿಸಿಕೊಳ್ಳುವರು. ಮುಂದೆ ಇವರು ಆಚರಣೆ, ವಿಧಿ-ವಿಧಾನಗಳಂತೆ ನಡೆದುಕೊಳ್ಳಬೇಕಾಗುತ್ತದೆ.

ಶೈಕ್ಷಣಿಕ ಸ್ಥಿತಿಗತಿ

"ನಹಿ ಜ್ಞಾನೇನ ಸದೃಶ್ಯಂ" ಎಂದರೇ ಜ್ಞಾನಕ್ಕೆ ಸಮಾನವಾದುದು ಯಾವುದು ಇಲ್ಲ ಅಂತಹ ಜ್ಞಾನವನ್ನು ನೀಡುವುದೇ ಶಿಕ್ಷಣ ಮಾನವನ ಮೂಲಭೂತ ಅಗತ್ಯಗಳೆಂದರೆ ಆಹಾರ, ಉಡುಪು ಮತ್ತು ವಸತಿ ಇವುಗಳ ಜೊತೆಗೆ ಶಿಕ್ಷಣ ಆರೋಗ್ಯ ಮನರಂಜನೆ ಮೊದಲಾದವು ಸಹ ಮುಖ್ಯವಾದವುಗಳು. ಶಿಕ್ಷಣ ಹೊಂದಿದವರಿಗೆ ಇಂದು ಹೆಚ್ಚು ಗೌರವದಿಂದ ಕಾಣಲಾಗುತ್ತದೆ. ಈ ಶಿಕ್ಷಣ ತಿರಸ್ಕೃತ ಸಮಾಜಕ್ಕೆ ಬಹುದೊಡ್ಡ ಶಕ್ತಿಯನ್ನು ತಂದುಕೊಟ್ಟಿದೆ ಬುದ್ಧಿಶಕ್ತಿಯನ್ನು ಹೆಚ್ಚಿಸುತ್ತದೆ. ಈ ಬುದ್ಧಿಶಕ್ತಿಯ ಸಹಾಯದಿಂದ ಏನೆಲ್ಲಾ ಸಾಧನೆಗಳನ್ನು ಸಾಧಿಸಲು ಶಕ್ತನಾಗುತ್ತಾನೆ. ಇಲ್ಲಿ ಶೈಕ್ಷಣಿಕ ರೂಪಾಂತರಗಳಿಗೆ ಎಲ್ಲಾ ಸಮುದಾಯಗಳು ಒಳಗಾಗುತ್ತವೆ. ಶಿಕ್ಷಣಕ್ಕೆ ರೂಪಾಂತರಗೊಳ್ಳುವುದರಿಂದ ತನ್ನ ಸಂಸ್ಕೃತಿಯಿಂದ ದೂರಸರಿಯುವ ಸಾಧ್ಯತೆಗಳು ಇರಬಲ್ಲವಾದರೂ ಅವರ ಅಭಿವೃದ್ಧಿ ಹಾದಿಯಲ್ಲಿ ಅವನ್ನು ಸಕರಾತ್ಮಕವಾಗಿಯೇ ಎಚ್ಚರಿಕೆರಯಿಂದ ಪರಿಶೀಲಿಸಬೇಕಾಗುತ್ತದೆ.

ಶಿಕ್ಷಣ ಪಡೆಯಲಾಗದಂತೆ ಮಾಡಿರುವ ಸಾಮಾಜಿಕ ಅನಿವಾರ್ಯಗಳು

೧. ಕಿತ್ತು ತಿನ್ನುವ ಬಡತನ

೨. ಮೂಲ ವೃತ್ತಿಗೆ ಅಂಟಿಕೊಂಡಿರುವುದು ಕರಡಿಯಾಡಿಸುವಿಕೆ

೩. ಕುಟುಂಬದ ಪ್ರೋತ್ಸಾಹ ಇಲ್ಲದಿರುವುದು

೪. ಸರ್ಕಾರದ ಸೌಲಭ್ಯಗಳ ಕೊರತೆ

೫. ಅನಕ್ಷರಸ್ಥ ಪೋಷಕರ ಸಾಂಪ್ರದಾಯಿಕ ಧೋರಣೆ

೬. ಶಾಲೆಗಳಲ್ಲಿ ಬೋಧನೆಯ ಗುಣಮಟ್ಟ

೭. ಪರಿಸರ

ಮದಾರಿಗಳು ಶ್ರಮರಹಿತ ದುಡಿಮೆ ಹಾಗೂ ಕರಡಿಯಾಡಿಸಿ ಹೊಟ್ಟೆ ತುಂಬಿಸಿಕೊಳ್ಳುವವರಾದ್ದರಿಂದ ತಮ್ಮ ಮಕ್ಕಳ ವಿದ್ಯಾಭ್ಯಾಸದ ಕಡೆಗೆ ಗಮನ ಕೊಡುವುದಿಲ್ಲ. ಮತ್ತು ಕಿತ್ತು ತಿನ್ನುವ ಬಡತನದಿಂದಾಗಿ ಮಕ್ಕಳಿಗೆ ಬೇಕಾಗಿರುವ ಮೂಲ ಭೂತ ಅವಶ್ಯಕತೆಗಳನ್ನೊದಗಿಸಿಕೊಡುವ ಶಕ್ತಿಯಿಲ್ಲದೆ ತಮ್ಮ ಮೂಲ

ವೃತ್ತಿಯಾದ ಕರಡಿಯಾಡಿಸುವಿಕೆಯನ್ನು ಕಲಿಸಿ ಇದರಲ್ಲೇ ಜೀವನವನ್ನು ಕಳೆಯುತ್ತಿದ್ದಾರೆ. ಮಕ್ಕಳು ಶಾಲೆಗೆ ಹೋಗುವುದನ್ನು ಅರ್ಧಕ್ಕೆ ನಿಲ್ಲಿಸಿ ತಮ್ಮ ಮೂಲ ವೃತ್ತಿಗೆ ತೊಡಗಿಸಿಕೊಳ್ಳುತ್ತಿದ್ದದ್ದು ನಮ್ಮ ಕಣ್ಣಿಗೆ ಕಾಣಿಸುತ್ತದೆ.

ಮಕ್ಕಳು ನಾಲ್ಕು ಅಕ್ಷರ ಕಲಿತು ವಿಷಯ ತಿಳಿದುಕೊಂಡು ವಿದ್ಯಾವಂತರಾಗಿ ತಮ್ಮದೆ ಸ್ವಂತ ವೃತ್ತಿ ಮಾಡುವಂತರಾಗುತ್ತಾರೆ. ಸ್ವಾವಲಂಬಿಗಳಾಗುವರು. ದೇಶಕ್ಕೆ ಮತ್ತು ತಮ್ಮ ಸಮುದಾಯಕ್ಕೆ ಒಳಿತಾಗುವುದೆಂಬ ತಿಳುವಳಿಕೆ ಇಲ್ಲದ್ದರಿಂದ ಕತ್ತಲೆಯ ಕೂಪದಲ್ಲಿ ಇಂದು ಕಾಲ ಕಳೆಯುವಂತಾಗಿದೆ.

ಬಡತನ ಮತ್ತು ಅಲೆಮಾರಿತನದ ಕಾರಣಗಳಿಂದ ಇವರು ತಮ್ಮ ಮಕ್ಕಳನ್ನು ಸರಿಯಾಗಿ ಶಾಲೆಗೆ ಕಳಿಸುವುದಿಲ್ಲ. ಕರಡಿಯಾಡಿಸಲು ಹೋದರೆಂದರೆ ಇಡೀ ಸಂಸಾರವೇ ಮನೆಗೆ ಬೀಗಹಾಕಿ ಹೋಗುತ್ತಾರೆ. ಈ ವೃತ್ತಿಯಿಂದ ಏನಿಲ್ಲವೆಂದರೂ ೫೦ ಸಾವಿರದಿಂದ ೧ ಲಕ್ಷದವರೆಗೆ ಹಣ ಸಂಪಾದಿಸಬಹುದು. ಆ ಖರ್ಚಿನಿಂದ ತಮ್ಮ ಇಡೀ ಸಂಸಾರದ ಖರ್ಚನ್ನು ನಿಭಾಯಿಸಬಹುದು. ಜೊತೆಗೆ ಈ ವೃತ್ತಿಯನ್ನು ಮಕ್ಕಳು ಕಲಿತರೆ ಮುಂದೆ ಇವರು ಇದನ್ನು ಮುಂದುವರಿಸಿ ತಮ್ಮ ಜೀವನ ಸಾಗಿಸುತ್ತಾರೆ. ಎಂಬ ಅಂಧ ವಿಶ್ವಾಸವನ್ನು ಪೋಷಕರು ತಲೆಯೊಳಗಿಟ್ಟುಕೊಂಡಿದ್ದು ಶಿಕ್ಷಣದ ಹಿನ್ನೆಡೆಗೆ ದೊಡ್ಡ ಕಾರಣವೆಂದೆ ಹೇಳಬಹುದು. ಇದರ ಜೊತೆಗೆ ಇನ್ನೊಂದು ಮುಖ್ಯ ವಿಚಾರವೆಂದರೆ ಇವರದು ಅವಿಭಕ್ತ ಕುಟುಂಬ ಪದ್ಧತಿ. ಇದು ಬಹುದೊಡ್ಡ ಸಮಸ್ಯೆಯಾಗಿ ಎಲ್ಲಾ ಸಮಸ್ಯೆಗಳಿಗೆ ಕಾರಣವಾಗಿದೆ. ಹೆಣ್ಣು ಮಕ್ಕಳು ಹೆಚ್ಚಿನ ಸಂಖ್ಯೆಯಲ್ಲಿರುವುದು ಇವರ ಮದುವೆಯಂತಹ ಖರ್ಚು ವೆಚ್ಚಗಳು ಮಾಡುವುಷ್ಟರ ವೇಳೆಗೆ ಈ ಸಮುದಾಯ ತನ್ನೆಲ್ಲಾ ಶ್ರಮದ ದುಡಿಮೆಯನ್ನು ಇಲ್ಲಿ ವ್ಯಯಿಸುತ್ತಾರೆ. ಶಿಕ್ಷಣದ ವಿಚಾರದಲ್ಲಿ ಹೆಣ್ಣುಮಕ್ಕಳಿಗೆ ಬಹಳ ಕೆಳಸ್ಥಾನ ನೀಡಿರುವುದು ಅವರ ಶಿಕ್ಷಣವನ್ನು ಅರ್ಧಕ್ಕೆ ಮುಟುಕುಗೊಳಿಸಿ ಬಹಳ ಚಿಕ್ಕ ವಯಸ್ಸಿಗೆ ವಿವಾಹಜೀವನಕ್ಕೆ ಕಳಿಸಿಬಿಡುತ್ತಾರೆ. ಹೀಗೆ ಹೆಣ್ಣುಮಕ್ಕಳದು ಶಿಕ್ಷಣ ಸ್ಥಾನ ಬಹಳ ಕಡಿಮೆ ಸ್ಥಾನವಿದೆ.

ಮದಾರಿಗಳ ಜನಾಂಗದಲ್ಲಿ ಪುರುಷರು ಶಿಕ್ಷಣವನ್ನು ಪಡೆದಿರುವುದಿಲ್ಲ. ಅನಕ್ಷರಸ್ಥರಾಗಿರುವರು. ತಮ್ಮ ಪೂರ್ವಜರಿಂದಲೂ ಮೂಲವೃತ್ತಿಯನ್ನೇ ನಂಬಿಕೊಂಡು ಅದನ್ನೇ ಮಾಡುತ್ತಾ ಬಂದಿದ್ದಾರೆ. ಮಹಿಳೆಯರು ಕೂಡ ಯಾವುದೇ ರೀತಿಯ ಶಿಕ್ಷಣವನ್ನು ಪಡೆದಿರುವುದಿಲ್ಲ. ಅನಕ್ಷರಸ್ಥರಾಗಿರುವರು. ಕೇವಲ ಗಂಡನ ಊಟೋಪಚಾರ, ಮಕ್ಕಳ ಪಾಲನೆ ಪೋಷಣೆ, ಪ್ರಾಣಿ ಪೋಷಣೆಯೇ ಇವಳ ಸುತ್ತ ಇರುವ ಬಹುದೊಡ್ಡ ಕಾರ್ಯಗಳು ಇವುಗಳ ನಡುವೆ ಇವಳಿಗೆ ಹೊರಗಿನ ಜ್ಞಾನ ಇರುವುದಿಲ್ಲ ಹೀಗೆ ಪುರುಷರಿಗಿಂತ ಮಹಿಳೆಯರು ಶಿಕ್ಷಣದಲ್ಲಿ ತುಂಬಾ ಕೆಳಸ್ಥಾನವನ್ನು ಹೊಂದಿರುವರು.

ಮದಾರಿ ಮಕ್ಕಳ ಶೈಕ್ಷಣಿಕ ಸಂಖ್ಯಾವಾರು ಪ್ರಮಾಣವನ್ನು ಈ ರೀತಿಯಾಗಿ ನೋಡಬಹುದಾಗಿದೆ. ಹಂಪಿನಕಟ್ಟೆ ಗ್ರಾಮದಲ್ಲಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಓದುತ್ತಿರುವವರು ಗಂಡು-೬೯ ಹೆಣ್ಣು-೫೬ ಒಟ್ಟು ಸಂಖ್ಯೆ ೧೨೫ ಪ್ರೌಢಶಾಲಾ ವಿಭಾಗದಲ್ಲಿ ಗಂಡು-೧೫, ಹೆಣ್ಣು -೦೬ ಓದುತ್ತಿರುವವರು ಒಟ್ಟು ಸಂಖ್ಯೆ೨೧

ಪಿ.ಯು.ಸಿ.ಯಲ್ಲಿ ಗಂಡು ೩ ಜನ ಹುಡುಗರು ಮಾತ್ರ ಓದುತ್ತಿರುವರು. ಒಟ್ಟುಸಂಖ್ಯೆ ೦೩.ಒಬ್ಬ ಹುಡುಗನು Diploma in Mechanic ನಲ್ಲಿ ಕೋರ್ಸ್‌ನ್ನು ಓದುತ್ತಿದ್ದಾನೆ.

ಮಂಗಳಾಪುರದಲ್ಲಿ

ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಗಂಡು ೧೨ ಹೆಣ್ಣು ೬ ಮಂದಿ, ಓದುತ್ತಿರುವರು ಒಟ್ಟು ೧೮ ಪ್ರೌಢಶಾಲಾ ವಿಭಾಗದಲ್ಲಿ ಓದುತ್ತಿರುವವರು ಗಂಡು ೦೩ ಹೆಣ್ಣು ೦೧ಜನ ಮಾತ್ರ ಓದುತ್ತಿದ್ದಾರೆ. ಒಟ್ಟು ೪ ಪದವಿಪೂರ್ವ ಕಾಲೇಜಿ(P.U.C.)ನಲ್ಲಿ ಗಂಡು ೦೦ಹೆಣ್ಣು ೦೧ ಹೆಣ್ಣು ಹುಡುಗಿ ಒಬ್ಬಳು ಮಾತ್ರ ಓದುತ್ತಿರುವಳು. ಒಟ್ಟು ೦೧

ಉರ್ದು ಶಾಲೆಯೊಳಗೆ ಕೂಡ ಇವರ ಮಕ್ಕಳು ಓದುತ್ತಿರುವರು. ೧ ರಿಂದ ೭ನೇ ತರಗತಿಯವರೆಗೆ ಉರ್ಧುಶಾಲೆಯ ಶಿಕ್ಷಣವನ್ನು ಪಡೆಯುತ್ತಿರುವರು ಈ ಶಾಲೆಯೊಳಗೆ ಗಂಡು-೦೧, ಹೆಣ್ಣು-೦೭ ಜನ ಓದುತ್ತಿರುವರು ಒಟ್ಟು ೮ ಜನ

ಹುಲಿಹೈದರ್

ಹಿರಿಯ ಪ್ರಾಥಮಿಕ ಶಾಲೆಯೊಳಗೆ ಗಂಡು-೬೯, ಹೆಣ್ಣು-೬೩ ರಷ್ಟು ಸಂಖ್ಯೆಯಲ್ಲಿ ಓದುತ್ತಿರುವರು. ಒಟ್ಟು ೧೩೨, ೧ ರಿಂದ ೩ ನೇ ತರಗತಿಯವರೆಗೆ ಉರ್ದು ಶಾಲೆಯಿದೆ. ಇಲ್ಲಿ ಓದುತ್ತಿರುವವರು ಗಂಡು-೨೬, ಹೆಣ್ಣು-೩೫ಒಟ್ಟು ೬೧ ಪೌಢಶಾಲೆಯೊಳಗೆ ಗಂಡು ೩, ಹೆಣ್ಣು ೩ ರಷ್ಟು ಜನ ಮಾತ್ರ ಓದುತ್ತಿರುವರು ಒಟ್ಟು ಸಂಖ್ಯೆ ೫ ಉನ್ನತ ಶಿಕ್ಷಣದಲ್ಲಿ ಯಾರು ಓದುತ್ತಿಲ್ಲ ಒಟ್ಟು ೦೦

ಆರ್ಥಿಕ ಸ್ಥಿತಿಗತಿ

ಪ್ರತಿಯೊಂದು ಸಮಾಜದಲ್ಲಿಯೂ ಜನರ ಅವಶ್ಯಕತೆಗಳನ್ನು ಪೂರೈಸಲು ಆರ್ಥಿಕ ರಚನೆಯಿರುತ್ತದೆ. ಆರ್ಥಿಕ ಚಟುವಟಿಕೆಗಳು, ಮಾವನ ಬಯಕೆಗಳು ಮತ್ತು ಅವುಗಳ ತೃಪ್ತಿಗಾಗಿ ನಡೆಸುವ ಪ್ರಯತ್ನದೊಡನೆ ನಿಟಕ ಸಂಬಂಧವನ್ನು ಹೊಂದಿವೆ. ಆರ್ಥಿಕ ರಚನೆಯು ಸಮುದಾಯದ ಜನರು ತಮ್ಮ ಜೀವನೋಪಾಯವನ್ನು ಕಂಡುಕೊಳ್ಳುವ ರೀತಿ ನೀತಿಗಳನ್ನೊಳಗೊಂಡ ಸಂಘಟಿತ ವಿಧಾನವಾಗಿದೆ. ಹಾಗೆಯೇ ವೃತ್ತಿಗಳ ರಚನೆ ಉತ್ಪಾದನೆ, ವಿಚಾರಣೆ, ಸಾಕಾಣಿಕೆ ಅನುಭೋಗ ವಿನಿಮಯ ಇತ್ಯಾದಿಗಳನ್ನೊಳಗೊಂಡಿರುತ್ತದೆ.

ಮಾನವ ಜೀವಿಸಲು, ಬಟ್ಟೆ ವಸತಿ ಅತ್ಯವಶ್ಯಕವಾಗಿದೆ. ಬಯಕೆಗಳು ಸರ್ವೇಸಾಮಾನ್ಯವಾಗಿದೆ. ಇಂತಹ ಬಯಕೆಗಳನ್ನು ಈಡೇರಿಸಿಕೊಳ್ಳುವ ಮಾರ್ಗಗಳು ಆಯಾ ಜನಸಾಮುದಾಯದಲ್ಲಿ ವೈವಿದ್ಯಮಯವಾಗಿವೆ. ಏಕೆಂದರೆ ನಾವು ಬಯಸಿದ ವಸ್ತುಗಳೆಲ್ಲಾ ಪುಕ್ಕಟೆಯಾಗಿ ದೊರೆಯಲಾರವು. ಆದ್ದರಿಂದ ವೃತ್ತಿ ಕೈಗೊಂಡು ತಮ್ಮ ಬಯಕೆಗಳನ್ನು ಈಡೇರಿಸಿಕೊಂಡು ಪ್ರಗತಿ ಹೊಂದಲು ಸಾಧ್ಯವಾಗುತ್ತದೆ. ೨೧ನೇ ಶತಮಾನಕ್ಕೆ ನಾವು ಕಾಲಿಟ್ಟು ತಂತ್ರಜ್ಞಾನದ ಬಗೆಗೆ ಯೋಚನೆ ಮಾಡುತ್ತಿದ್ದೇವೆ. ಆದರೆ ಅಲೆಮಾರಿಗಳು ತಮ್ಮ ಮೂಲ ಪಾರಂಪರಿಕ

ವೃತ್ತಿಯನ್ನು ಹಿಂದಿನಿಂದ ನಂಬಿಕೊಂಡು ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶದಕ್ಕೆ ಚಾಲನೆಯಲ್ಲಿದ್ದಾರೆ. ಮೂಲ ವೃತ್ತಿಯನ್ನು ಬಿಡದೆ ಇಂದಿನ ಜಾಗತೀಕರಣಕ್ಕೆ ಹೊಂದಿಕೊಳ್ಳದೆ ಜೀವನದಲ್ಲಿ ಸುಖವನ್ನು ಕಾಣದೆ, ಭಿಕ್ಷೆ ಬೇಡುವುದು. ಪ್ರಾಣಿ ಪ್ರದರ್ಶಿಸುವ ವೃತ್ತಿ ಮಾಲೀಕರ ಹತ್ತಿರ ಜೀತಪದ್ಧತಿಯಲ್ಲಿ ದುಡಿಯುವುದು. ಇಂತಹವುಗಳೇ ಜೀವನದ ಬಹು ದೊಡ್ಡ ಸಾಧನೆ ಇವರದಾಗಿದೆ.

ಶತಮಾನಗಳಿಂದಲೂ ಮೂಲ ವೃತ್ತಿ (ಕರಡಿಯಾಟ)ಗೆ ಅಂಟಿಕೊಂಡಿರುವ ಮದಾರಿಗಳು, ಜೀವನದಲ್ಲಿ ಭವಿಷ್ಯತ್ತಿನ ಬಗೆಗೆ ಬೇಕಾಗುವ ಆಸ್ತಿ, ಹಣ, ಒಡವೆ ಮನೆಗಳಂತಹ ಐಷಾರಾಮಿ ಜೀವನ ನಡೆಸುವ ಬಗೆಗೆ ಕಿಂಚಿತ್ತು. ಯೋಚಿಸುವ ಶಕ್ತಿ ಕೂಡಾ ಇವರು ಇಟ್ಟುಕೊಂಡಿಲ್ಲ. ಶ್ರೀಮಂತ ವರ್ಗದಂತ ಶ್ರೀಮಂತಿಕೆಯನ್ನು ತೋರಿಸದೆ ಮಾಧ್ಯಮ ವರ್ಗದವರಂತೆ ಮದ್ಯಸ್ಥಾನದಲ್ಲಿಯೂ ಇರದೆ. ತಮ್ಮ ಮುಂದಿನ ಜೀವನದ ಬಗ್ಗೆ ಮಕ್ಕಳ ಮುಂದಿನಭವಿಷ್ಯದ ಬಗೆಗೆ ಯೋಚಿಸುವ ಸಮಯ ಕೂಡ ಇವರಲ್ಲಿ ಇಲ್ಲವಾಗಿದೆ. ಕಿತ್ತು ತಿನ್ನುವ ಬಡತನ ಮನೆಯಲ್ಲಿ ವಾಸ ಮಾಡುವವರ ಸಂಖ್ಯೆ ಹೆಚ್ಚಾಗಿರುವುದು (ಅವಿಭಕ್ತ ಕುಟುಂಬ) ಹೆಣ್ಣು ಮಕ್ಕಳ ಸಂಖ್ಯೆ ಹೆಚ್ಚಾಗಿರುತ್ತದೆ. ಅವರ ಮದುವೆ ಮಾಡಿಕೊಡುವುದು. ಈ ಎಲ್ಲಾ ಸಮಸ್ಯೆಗಳ ಗೂಡಿನಲ್ಲಿ ಜೀವನ ನಡೆಸುವ ಮದಾರಿಗಳಿಗೆ ಒಂದು ಸಮಾದಾನ ಹಾಗೂ ಚಿಂತೆ ಇರದಂತೆ ಮಾಡಿರುವುದೆಂದರೆ ಕರಡಿ ಕೈಯಲ್ಲಿದೆಯೆಲ್ಲಾ "ಇನ್ನೇನು ಚಿಂತೆಯಿಲ್ಲ" ಎಂಬ ಸಂಗತಿ ಎಂದರೇ ಆರ್ಥಿಕತೆಯೆ ಮುಖ್ಯ ಉತ್ಪಾದನಾ ಕೇಂದ್ರವೆ ಈ "ಕರಡಿ ಪ್ರದರ್ಶನ" ಈ ಪ್ರದರ್ಶನದ ಉತ್ಪಾದನೆಯೇ ಜೀವನದ ಸಮಸ್ತ ಸ್ಥಿತಿಗತಿಗಳನ್ನು ನಿಯಂತ್ರಿಸುವ ನಿಯಂತ್ರಕ ಸಾಧನವಾಗಿದೆ.

೧. **ಸಾಂಪ್ರಾದಾಯಿಕ ವೃತ್ತಿ :** ಅಲೆಮಾರಿಗಳಾದ ಮದಾರಿಗಳು ಅನೇಕ ಶತಮಾನಗಳಿಂದ ಮೂಲ ವೃತ್ತಿ ಹಾಗೂ ಸಾಂಪ್ರಾದಾಯಿಕ ವೃತ್ತಿ ಕರಡಿಯಾಡಿಸಿಯೇ ಹೊಟ್ಟೆ ತುಂಬಿಸಿಕೊಳ್ಳುತ್ತಾ ಬಂದಿದ್ದಾರೆ. ಕರಡಿಯೇ ಇವರ ಅನ್ನದಾತ ದೇವರು ರಕ್ಷಕನಾಗಿರುವುದು ಚರಿತ್ರೆಯ ಕಾಲದಿಂದಲೇ ಇವರ ವೃತ್ತಿ ಮನ್ನಣೆ ಪಡೆದು ಅರಸರನ್ನು ರಂಜಿಸಲು ಇರುವಂತಹ ಸಮುದಾಯವಾಗಿದೆ. ಇವರ ಈ ಪ್ರದರ್ಶನ ಮೆಚ್ಚಿ ಅರಸರು ಕಂಚಿನ ಪತ್ರವನ್ನು ಹಾಗೂ ಭೂಮಿಯನ್ನು ಜಹಗೀರಾಗಿ ಕೊಟ್ಟಿರುವುದನ್ನು ಚರಿತ್ರೆಯಿಂದ ತಿಳಿದುಕೊಳ್ಳುತ್ತೇವೆ. ತಲ ತಲಾಂತರದಿಂದ ಬಂದ ವಂಶವೃತ್ತಿಯೊಂದು ಬಿಟ್ಟು ಬೇರಾವ ವೃತ್ತಿಯ ಪರಿಚಯ ಇವರಿಗಿಲ್ಲ ಮಧ್ಯಕಾಲದ ಆರ್ಥಿಕ ವ್ಯವಸ್ಥೆಯೇ ಇವರನ್ನು ತಮ್ಮ ಮೂಲ ವೃತ್ತಿಯಲ್ಲೇ ಮುಂದುವರಿಯುವಂತೆ ಪ್ರೇರೇಪಿಸಿದಂತಿದೆ. ಭೂಮಿ ಸಿಕ್ಕರೂ ಇವರು ಕೃಷಿಕರಾಗಿಲ್ಲ ತಮ್ಮ ಹಿರಿಯರಿಗೆ ಭೂಮಿ ಇನಾಮಾಗಿ ದೊರೆತರು ಅವುಗಳು ಇಂದು ತಮಗೆ ದೊರಕಿಲ್ಲ. ತಮ್ಮ ಹಿರಿಯರು ಅದನ್ನೆಲ್ಲಾ ಮಾರಿಕೊಂಡಿದ್ದಾರೆ ಇನ್ನು ಕೆಲವು ಜಮೀನುಗಳು ಇವರಲ್ಲಿ ಕೆಲವರಿಗೆ ಸಿಕ್ಕರು ಒಕ್ಕಲುತನ ಮಾಡುವ ವೃತ್ತಿಗೊತ್ತಿಲ್ಲದ ಕಾರಣ ಅದನ್ನು ಮಾರಿ ಅಲೆಮಾರಿಗಳಾಗಿ ಸಂಚರಿಸುತ್ತಿದ್ದೇವೆ. ಎಂಬುದನ್ನು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ತಿಳಿಯಲಾಯಿತು.

ಕೃಷಿಲ್ಲಿ ಕೂಲಿ ಮಾಡಿ ಜೀವನ ಸಾಗಿಸಲು ಉಳ್ಳದವರು ಉಳ್ಳವರ ಬಳಿ ದಿನವೊಂದಕ್ಕೆ ನಿಗದಿಪಡಿಸಿದ ಸಂಭಾವನೆಗಾಗಿ ಕೆಲಸ ಮಾಡುವುದೇ ಕೂಲಿ ನಿರಂತರವಾಗಿ ಅಲೆಮಾರಿ ಜೀವನ ನಡೆಸುತ್ತಿದ್ದ ಮದಾರಿಗಳು

ಇತ್ತೀಚಿನ ದಿನಗಳಲ್ಲಿ ಹಲವಾರು ಗ್ರಾಮಗಳಲ್ಲಿ ನೆಲೆಸಿದ್ದಾರೆ. ತಾವು ನಲೆಸಿರುವ ಗ್ರಾಮಗಳಲ್ಲಿ ಕೃಷಿಕೂಲಿಗಳಾಗಿ ಉಳ್ಳವರು ಹೊಲಗದ್ದೆಗಳಲ್ಲಿ ಕೃಷಿ ಕೂಲಿಗಳಾಗಿ, ದುಡಿದು ತಮ್ಮ ಹೊಟ್ಟೆಯನ್ನು ತುಂಬಿಸಿಕೊಳ್ಳುವುದರೊಂದಿಗೆ ಜೀವನ ನಡೆಸುತ್ತಿರುವರು. ಈ ಕೃಷಿ ಕೂಲಿಗೆ ಹೆಚ್ಚಾಗಿ ಹೋಗುವವರು ಮಹಿಳೆಯರು ಆಗಿದ್ದಾರೆ. ದಿನಕ್ಕೆ ಒಬ್ಬರಿಗೆ ೪೦ ರೂ ಕೊಡುತ್ತಾರೆ ಈ ರೀತಿಯಾಗಿ ದಿನ ನಿತ್ಯ ಕೃಷಿ ಕೂಲಿಗೆ ಸಣ್ಣಮಕ್ಕಳನ್ನು ಮನೆಯಲ್ಲಿ ಬಿಟ್ಟು ಹೋಗುತ್ತಾರೆ.

೨.ಆಟೋ ನಡೆಸುವುದು : ಕರಡಿ ವೃತ್ತಿ ನಿಷೇದದಿಂದಾಗಿ ಮದಾರಿಗಳಿಗೆ ದಿಕ್ಕು ತೋಚದಂತಾದಾಗ ವೈಲ್ಡ್‌ಲೈಫ್ ಸಂಸ್ಥೆ (ಪ್ರಾಣಿ ದಯಾಸಂಘ)ವು ಕರಡಿ ಒಪ್ಪಿಸಿದ ಕೆಲ ಸದಸ್ಯರಿಗೆ ೫೦,೦೦೦ ಪರಿಹಾರ ಕೊಡಲಾಗಿದೆ. ಈ ಪರಿಹಾರದಲ್ಲಿ ಇಬ್ಬರು ಆಟೋವನ್ನು ಖರೀದಿಸಿದ್ದಾರೆ. ಮರಿಯಮ್ಮನ ಹಳ್ಳಿಯಿಂದ ಹಂಪಿನಕಟ್ಟೆಗೆ ದಿನನಿತ್ಯ ಆಟೋ ಓಡಿಸಿ ಅದರಿಂದ ಬಂದುದರಲ್ಲಿ ಉಳಿಸಿ ಜೀವನ ನಡೆಸುತ್ತಿದ್ದಾರೆ. ಈ ವೃತ್ತಿಯು ಕೂಡಾ ಇಂದು ಇವರಿಗೆ ತುಂಬಾ ಹೊರೆಯೆನಿಸಿದೆ ಪೆಟ್ರೋಲ್ ಡೀಸಲ್‌ನ ಏರಿಕೆ ಹಾಗೂ ಆಟೋಗಳ ಪೈಪೋಟಿಯಿಂದಾಗಿ ಜೀವನ ನಡೆಸುವುದು ದುಸ್ತರವಾಗಿದೆ. ಸರ್ಕಾರದವರು ಏನಾದರೂ ದಾರಿ ತೋರಿಸಬೇಕು ಸಾರ್ ಎಂಬ ಮಾತನ್ನು ಹಸೇನ್ ಕರಡಿ ಸಂಶೋಧನೆಯ ಸಂದರ್ಭದಲ್ಲಿ ತಿಳಿಸಿದರು.

೫. ಕಾರ್ಖಾನೆಗಳಿಗೆ ಹೋಗುವುದು :

ಮೂಲವೃತ್ತಿ ನಿಂತ ಮೇಲೆ ಹೊಟ್ಟೆಯನ್ನು ತುಂಬಿಸಿಕೊಳ್ಳುವುದಕ್ಕಾಗಿ ಏನಾದರೊಂದು ಕೆಲಸ ಮಾಡಲೆಬೇಕಲ್ಲ. ಹೊಟ್ಟೆ ತುಂಬಿಸುವುದಕ್ಕಾಗಿ ಗಣಿಯಂತಹ ಅಪಾಯಕಾರಿ ಕೆಲಸಗಳಲ್ಲಿ ಹಗಲು ರಾತ್ರಿಯೆನ್ನದೆ ಕೆಂಪು ಧೂಳಿನ ನಡುವೆ ಇಂದು ಕೆಲಸವನ್ನು ಮಾಡುತ್ತಿದ್ದಾರೆ. ಗಣಿಗಳು ಸರ್ಕಾರದ ಆದೇಶವನ್ನು ಉಲ್ಲಂಘಿಸಿ ನಿಗದಿಗಿಂತ ಹೆಚ್ಚಿನ ಜನರನ್ನು ದುಡಿಸಿಕೊಂಡು ಕಡಿಮೆ ವೇತನ ನೀಡಿ ಹೆಚ್ಚು ಕೆಲಸವನ್ನು ಇಂತಹ ಸಮುದಾಯದವರಿಂದ ದುಡಿಸಿಕೊಳ್ಳುತ್ತಿದ್ದಾರೆ. ಇದಕ್ಕೆ ಮಹಿಳೆಯರು, ಯುವಕರು ಬಲಿಯಾಗಿದ್ದಾರೆ.

ಕಾಶೀಂ ಎಂಬ ೨೦ ವರ್ಷದ ಹುಡುಗನು ಹೇಳುವಂತೆ ಈ ಕಾರ್ಖಾನೆಯೊಳಗೆ ತಾನು ಲಾರಿಯ ಕ್ಲೀನರ್ ಆಗಿ ದುಡಿಯುತ್ತಿದ್ದು ತನ್ನ ತಂದೆ ಓದಿಸಲಿಲ್ಲ. ಕರಡಿ ವೃತ್ತಿ ಮಾತ್ರ ಕಲಿಸಿದರು ಆ ವೃತ್ತಿಯಲ್ಲಿ ತಾನೂ ಚೆನ್ನಾಗಿ ಸಂಸಾರ ನಡೆಸುತ್ತಿದ್ದು ಮನೆಯಲ್ಲಿ ತಂಗಿಯರು ತಾಯಿಯನ್ನು ನೋಡಿಕೊಳ್ಳುತ್ತಿದ್ದೆ ಹೊಟ್ಟೆ ಬಟ್ಟೆಗೆ ಕೊರತೆಯಿರಲಿಲ್ಲ. ಆದರೆ ಕರಡಿ ಹೋದ ಮೇಲೆ ನನ್ನ ಜೀವನ ಬಹಳ ಕಷ್ಟವೆನಿಸಿದೆ. ಕೇವಲ ೨೦೦೦-೩೦೦೦ ಸಾವಿರ ಸಂಬಳದಲ್ಲಿ ಕುಟುಂಬದವರನ್ನು ಸಾಕಬೇಕು. ವಾಸಕ್ಕೆ ಸ್ವಂತ ಮನೆ ಇಲ್ಲ. ಉದ್ಯೋಗವಿಲ್ಲ. ಏನು ಮಾಡುವುದೆಂದು ದಿಕ್ಕು ತೋಚದಂತಾಗಿದೆ. ತನ್ನಂತೆ ಬಹಳಷ್ಟು ಕರಡಿ ಕುಟುಂಬದ ಹುಡುಗರು ಇದೇ ಕೆಲಸವನ್ನು ಮಾಡುತ್ತಿದ್ದೇವೆ.

ತಮಗೆ ಈ ಕೆಲಸ ಇಷ್ಟವಿಲ್ಲ ಆದರೂ ಅನಿವಾರ್ಯವಾಗಿ ಹೊಟ್ಟೆ ಪಾಡಿಗಾಗಿ ಮಾಡುತ್ತಿದ್ದೇವೆ. ಸರ್ಕಾರದಿಂದ ಮುಂದೇನಾದರೂ ತಮ್ಮಂತ ನೂರಾರು ಯುವಕರಿಗೆ ಸೌಲಭ್ಯ ಸಿಗಬಹುದೇನೂ ಎಂಬ ಆಶಾಭಾವನೆ ಇಟ್ಟುಕೊಂಡಿದ್ದೇವೆ ಎಂದು ಕಾಶೀಂ ಎಂಬ ಯುವಕ ಕ್ಷೇತ್ರಕಾರ್ಯದ ಸಂದರ್ಭದಲ್ಲಿ ತಿಳಿಸಿದರು.

೩. ಬೀಡಿ ಅಂಗಡಿ : ಕರಡಿ ಹೋದ ಮೇಲೆ ಅಲೆಮಾರಿಗಳಾದ ಮದಾರಿಗಳು ಬೇರೆ ಕೆಲಸವನ್ನು ಮಾಡುವ ಜ್ಞಾನವಿಲ್ಲದ ಕಾರಣ ಕೆಲವರು ಹೊರಗಡೆ ಕಲ್ಲು ಮಣ್ಣಿನ ಕೆಲಸಕ್ಕೆ ಕಾರ್ಖಾನೆಯ ಕೆಲಸಕ್ಕೆ, ಹೋಗಿ ದುಡಿಯುತ್ತಿದ್ದಾರೆ. ಇದೇ ರೀತಿಯಾಗಿ ಹಂಪಿನಕಟ್ಟೆಯಲ್ಲಿ ಇಬ್ಬರು ಬೀಡಿ ಅಂಗಡಿಯಿಟ್ಟುಕೊಂಡಿದ್ದಾರೆ. ಮಂಗಳಾಪುರದ ಕಾಲೇಸಾಬ್ ಎನ್ನುವರು. ಹಾಗೂ ಹುಲಿಹೈದರ್‌ನ ಕಾಶೀಂಭಿ ಎನ್ನುವ ಮಹಿಳೆಯು ಸಣ್ಣ ಬೀಡಿ ಅಂಗಡಿಯಿಟ್ಟು ಜೀವನ ನಡೆಸುತ್ತಿರುವವರು. ಈ ಅಂಗಡಿಯಿಂದ ಲಾಭವಿಲ್ಲದಿದ್ದರೂ ಕೂಡ ಬರುವ ಅಲ್ಪ ಆದಾಯದಲ್ಲಿ ಹೊಟ್ಟೆ ತುಂಬಿಹೋಗುತ್ತದೆ ಎನ್ನುವುದು ಇವರ ನಂಬಿಕೆಯಾಗಿದೆ.

ಬೀಡಿ ಅಂಗಡಿಯ ರಾಜಾಭಿ ನಾನು ಕ್ಷೇತ್ರಕಾರ್ಯ ಹೋದ ಸಂದರ್ಭದಲ್ಲಿ ಭೇಟಿಯಾದಾಗ ಈ ರೀತಿ ಹೇಳಿದರು. ಅದುವರೆಗೆ ಕರಡಿ ಇದ್ದಾಗ ತಮ್ಮ ಸಂಸಾರ ಚೆನ್ನಾಗಿದ್ದು ಮಕ್ಕಳ ಊಟ ಬಟ್ಟೆ ಶಿಕ್ಷಣಕ್ಕೆ ಕೊರತೆಯಿರಲಿಲ್ಲ. ತಮ್ಮ ಪತಿಯು ಹೊರಗೆ ಹೋಗಿ ಕರಡಿಯಿಂದ ತುಂಬಾ ಹಣ ಸಂಪಾದನೆ ಮಾಡಿ ತಂದುಕೊಡುತ್ತಿದ್ದರು. ಹೆಣ್ಣು ಮಕ್ಕಳ ಮದುವೆ ಕೂಡಾ ಅದೇ ಹಣದಲ್ಲಿ ಮಾಡುತ್ತಿದ್ದು ಯಾವುದೇ ರೀತಿಯ ತೊಂದರೆಗಳು ತಮಗೆ ಬರಲಿಲ್ಲ. ಕರಡಿ ಹೋದ ಮೇಲೆ ಮನೆಯಲ್ಲಿ ಪರಸ್ಪರ ಗಂಡ ಹೆಂಡಿರ ನಡುವೆ ಕಲಹ, ಮನಸ್ತಾಪಗಳು ಆಗುತ್ತಿವೆ. ಅಂಗಡಿಯಿಡಲು ೫ ಸಾವಿರದಿಂದ ೧೦ ಸಾವಿರ ಬೇಕಾಗಿದೆ. ಅಷ್ಟು ದುಡ್ಡನ್ನು ಬಡ್ಡಿ ರೂಪದಲ್ಲಿ ಹಣ ತಂದು ಬರಿಬಡ್ಡಿ ತೀರಿಸಬೇಕಾಗಿದೆ. ಸರ್ಕಾರ ತಮ್ಮ ಕಡೆ ನಿಗಾವಹಿಸುತ್ತಿಲ್ಲ ಎಂದು ತಮ್ಮ ಅಳಲನ್ನು ತೋಡಿಕೊಂಡರು. ಮಂಗಳಾಪುರದಲ್ಲಿ ಕಾಲೇಸಾಬ್‌ರು ಸಣ್ಣ ಬೀಡಿ ಅಂಗಡಿಯಿಟ್ಟುಕೊಂಡು ತಮ್ಮ ದೊಡ್ಡ ಕುಟುಂಬವನ್ನು ಸಾಕುತ್ತಿದ್ದಾರೆ. ೬ ಜನ ಹೆಣ್ಣು ಮಕ್ಕಳು ೩ ಜನ ಗಂಡುಮಕ್ಕಳಿರುವ ದೊಡ್ಡ ಕುಟುಂಬವಾಗಿದೆ. ಕರಡಿಯಿದ್ದಾಗ ಈ ಕುಟುಂಬದ ಸಮಸ್ಯೆಗಳು ಕಣ್ಣಿಗೆ ಕಾಣುತ್ತಿರಲಿಲ್ಲ. ಆದರೆ ಇಂದು ಸಮಸ್ಯೆಗಳ ಸರಮಾಲೆಯೇ ತನ್ನನ್ನು ಸುತ್ತುಕೊಂಡಿದೆ ಮಾಡಲು ಉದ್ಯೋಗವಿಲ್ಲ ಬೇರೆ ಉದ್ಯೋಗ ಬರುವುದಿಲ್ಲ. ಊರಲ್ಲಿ ಬೇರೆಯವರ ಇಟ್ಟಿಗೆ ಗಾರೆಯ ಕೆಲಸದಲ್ಲಿ ತಾನೂ ಅವರ ಜತೆ ಸೇರಿಕೆಲಸ ಮಾಡುತ್ತಿದ್ದೇನೆ ಎನ್ನುತ್ತಾರೆ. ತಿಳಿಸಿದರು.

೪. ಮನೆಕಟ್ಟುವ ಕೆಲಸಕ್ಕೆ ಹೋಗುವುದು : ಮೂಲ ವೃತ್ತಿ ನಿಷೇದದಿಂದಾಗಿ ಇಂದು ಬೇರೆ ಬೇರೆ ಕೆಲಸಗಳನ್ನು ಮಾಡಲು ಬರದಿದ್ದರೂ ಹೊಟ್ಟೆ ತುಂಬಿಸಿಕೊಳ್ಳುವ ಸಲುವಾಗಿ ಮಾಡಲೇಬೇಕಾದ ಅನಿವಾರ್ಯ ಪರಿಸ್ಥಿತಿ ಇವರದು ಸರಕಾರದ ಯಾವ ಯೋಜನೆಗಳಲ್ಲಿಯೂ ಇವರ ಭಾಗವಹಿಸುವಿಕೆಯಿಲ್ಲ. ಸರಕಾರದ ಪ್ರಚಾರದ ಕೊರತೆ, ಮೀಸಲಾತಿ ಇಲ್ಲದಿರುವುದರ ಪರಿಣಾಮವಾಗಿ ಹಲವಾರು ಕಠಿಣ ಕೆಲಸಗಳಲ್ಲಿ ಈ ಸಮುದಾಯ ತೊಡಗಿದೆ. ಮನೆಕಟ್ಟುವ ಮೇಸ್ತ್ರಿ ಅಥವಾ ಬೇಲ್ದಾರರ ಹತ್ತಿರ ಹೋಗಿ ಕಲ್ಲುಕೊಡುವ ಇಟ್ಟಿಗೆ ಹೋರುವ, ಸಿಮೆಂಟ್ ಕಲಸುವ ಕೆಲಸಗಳನ್ನು ಮಾಡುತ್ತಿದ್ದಾರೆ. ಇವರ ಆರೋಗ್ಯದ ಬಗೆಗೆ ವಿಚಾರಿಸಲು ಯಾವ ಅಧಿಕಾರಿಗಳು ಆರೋಗ್ಯಕೇಂದ್ರದಿಂದ ಸಹಾಯಕರಾಗಲಿ ಗ್ರಾಮದಲ್ಲಿ ಇಲ್ಲದೇ ಇರುವುದು ದುರಂತವೇ ಸರಿ. ಸರಿಯಾದ ಆರೋಗ್ಯ ಕೇಂದ್ರವು ಈ ಗ್ರಾಮದಲ್ಲಿಲ್ಲ ಖಾಯಿಲೆ ರೋಗ-ರುಜಿನಗಳು ಬಂದರೆ ಖಾಸಗಿ ವೈದ್ಯರ ಬಳಿ ಬರಬೇಕು. ದುಬಾರಿ ಹಣವನ್ನು ಕೊಡಬೇಕು.

೫. ಬಳೆ ಅಂಗಡಿ : ಬಳೆಯು ಸ್ತ್ರೀಯರ ಸೌಂದರ್ಯದ ಸಂಕೇತವೆನಿಸಿದೆ ಬಹಳ ಪ್ರಾಚೀನ ಕಾಲದಿಂದಲೂ ಈ ಬಳೆಗೆ ಮಹತ್ವ ಸ್ಥಾನವನ್ನು ನಮ್ಮ ಜನಪದರಲ್ಲಿ ನೀಡಲಾಗಿದೆ. ಬಳೆಗಾರ ಬಾಗಿಲ ಬಳಿ ಬಂದನೆಂದರೆ ಸಾಕು ಹೆಣ್ಣು ಮಕ್ಕಳು ಸಂತೋಷಪಡುತ್ತಾರೆ. ಇಂತಹ ಬಳೆಯ ಅಂಗಡಿಯನ್ನಿಟ್ಟುಕೊಂಡು ಕಾಶಿಂಬಿ ಎಂಬುವವರು ವಯಸ್ಸಾದ ೬೦ ವರ್ಷದ ವೃದ್ಧೆ ತನ್ನ ಮಗ ಸೊಸೆಯನ್ನು ಸಾಕುತ್ತಿದ್ದಾಳೆ. ಕರಡಿ ಹೋದ ಮೇಲೆ ಈ ಅಂಗಡಿಯಿಟ್ಟುರುವುದಾಗಿ ತಿಳಿಸುತ್ತಾರೆ. ತನ್ನ ಮಗನಿಗೆ ಬೇರೆ ಉದ್ಯೋಗ ಗೊತ್ತಿಲ್ಲ, ಸೊಸೆ ಹಾಗೂ ಮೊಮ್ಮಕ್ಕಳು ಉಪವಾಸ ವಿರಬಾರದೆಂದು ಹೊರಗಡೆ ಬಡ್ಡಿಯಂತೆ ಹಣ ತಂದು ಈ ಅಂಗಡಿಯಲ್ಲಿಟ್ಟುರುವುದಾಗಿ ಎಂದು ಬಹಳ ದುಃಖದಿಂದ ಕ್ಷೇತ್ರಕಾರ್ಯದ ಸಂದರ್ಭದಲ್ಲಿ ದುಃಖ ತೋಡಿಕೊಂಡರು.

ಗುಜರಿ ಕೆಲಸ ಮಾಡುವುದು

ಮೂಲ ವೃತ್ತಿಯನ್ನು ಸರ್ಕಾರದವರು ನಿಷೇದಿಸಿದ ಮೇಲೆ ಇಡೀ ಜನಾಂಗದ ಸದಸ್ಯರು ಬೇರೆ ಬೇರೆ ಕಡೆ ಕೆಲಸ ಹುಡುಕಿಕೊಂಡು ಚದುರಿ ಹೋಗಿರುವರು. ಪರ್ಯಾಯ ವೃತ್ತಿ ಮಾಡಲು ಬರದಿದ್ದರು ಅನಿವಾರ್ಯವಾಗಿ ಉದರ ನಿಮಿತ್ಯದ ಸಲುವಾಗಿ ಮಾಡಲೇಬೇಕಾಗಿದೆ. ಅದರೊಳಗೆ ಈ ಗುಜರಿ ಕೆಲಸಕ್ಕೆ ಕೆಲವರು ಹೋಗುತ್ತಿರುವುದು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಗೊತ್ತಾಯಿತು. ಸೈಕಲ್‌ನ್ನು ತುಳಿದು ಸುತ್ತಲಿನ ಹಳ್ಳಿಗಳಿಗೆ ಹೋಗಿ ಪ್ಲಾಸ್ಟಿಕ್ ಹಳೇ ಕಬ್ಬಿಣದ ತುಂಡು ವಸ್ತುಗಳನ್ನೆಲ್ಲಾ ಸಂಗ್ರಹಿಸಿ ಗುಜರಿ ಅಂಗಡಿಗೆ ಕೊಡುತ್ತಾರೆ. ಅವರು ಕೊಟ್ಟ ಹಣದಿಂದ ಇಡೀ ಕುಟುಂಬ ನಡೆಯಬೇಕು. ಲಾಲ್‌ಸಾಬ್ ಎಂಬ ೨೧ ವರ್ಷದ ಯುವಕನು ಈ ಕೆಲಸವನ್ನು ಮಾಡುತ್ತಿರುವನು ಈತನು ಹೇಳುವ ಪ್ರಕಾರ ತನಗೆ ಈ ವೃತ್ತಿ ಮನಸ್ಸಿಗೆ ಸಂತೋಷ ಕೊಡುವುದಿಲ್ಲ ತಾನೊಬ್ಬ ವಿವಾಹಿತ ಹಾಗೂ ಮಕ್ಕಳು ಇರುವರು ಇವರ ಸಲಹಲು ಈ ಹಣ ಸಾಲುವುದಿಲ್ಲ ಅನಿವಾರ್ಯವಾಗಿ ಮಾಡುತ್ತಿದ್ದೇನೆ. ಕರಡಿಯಿದ್ದಾಗ ಸಂಸಾರ ತುಂಬಾ ಚೆನ್ನಾಗಿ ನಡೆಯುತ್ತಿತ್ತು. ಸರ್ಕಾರವು ಕರಡಿ ಕಿತ್ತುಕೊಂಡು ತಮ್ಮನ್ನು ಬೀದಿಗೆ ತಂದುಬಿಟ್ಟದೆ ಸರಕಾರಿ ಜಮೀನಿದ್ದರು ನಿವೇಶನ ಕೊಟ್ಟಿಲ್ಲ ನಮಗೆ ಉದ್ಯೋಗ ವಸತಿ, ಹೊಲದಂತಹ ಸೌಲಭ್ಯಗಳನ್ನು ಮಾಡಿಕೊಟ್ಟರೆ ತುಂಬಾ ಒಳ್ಳೆಯದಾಗುತ್ತದೆ ಎನ್ನುತ್ತಾನೆ.

ಮದಾರಿ ಮಹಿಳೆಯರ ಆರ್ಥಿಕ ಜೀವನ :

ಮೂಲವೃತ್ತಿ ಅಥವಾ ವಂಶವೃತ್ತಿ ನಿಷೇದದಿಂದಾಗಿ ಮದಾರಿಯ ಜನಾಂಗದ ಪುರುಷರಿಗಿಂತ ಮಹಿಳೆಯರ ಮೇಲೆ ಗಂಭೀರ ಪರಿಣಾಮ ಬೀರಿದೆ ಎನ್ನಬಹುದು. ಮನೆಯ ಕುಟುಂಬದ ಆಗು ಹೋಗುಗಳು ಅಂದರೆ ಮಕ್ಕಳ ಊಟ, ಬಟ್ಟೆ ಶಿಕ್ಷಣ, ಆರೋಗ್ಯದಂತಹ ವಿಷಯಗಳಿಗೆ ಅತಿ ಹೆಚ್ಚು ನಿಪುಣತೆ, ಚಾಕ ಚಕ್ಯತೆಯಿರುವುದು ಕುಟುಂಬದ ಮಹಿಳೆಗೆ ಮಾತ್ರ, ಒಟ್ಟಾರೆಯಾಗಿ ಕುಟುಂಬದ ನಿಯಂತ್ರಕವಾಗಿ ಮಹಿಳೆ ಕಾರ್ಯನಿರ್ವಹಿಸುತ್ತಾಳೆ. ಪುರುಷನಿಗೆ ಹೊರಗಿನ ಜ್ಞಾನವಷ್ಟೇಗೊತ್ತು ಕುಟುಂಬಕ್ಕೆ ಬೇಕಾಗುವ ವಸ್ತುಗಳನ್ನು ತಂದುಕೊಡುವುದಷ್ಟೇ ಕೆಲಸ ಅದರಾಚೆಗೆ ಏನೂ ಗೊತ್ತಾಗುವುದಿಲ್ಲ. ಮಹಿಳೆ ಎಲ್ಲಾ ರೀತಿಯ ಕೆಲಸಗಳನ್ನು ನಿರ್ವಹಿಸುತ್ತಾಳೆ ಮತ್ತು ಸೂಕ್ಷ್ಮ ಜ್ಞಾನವನ್ನು ಹೊಂದಿರುವವಳು.

ಕರಡಿ ಮನೆಯಲ್ಲಿ ಇದ್ದಾಗ ಅದರ ಆರೋಗ್ಯ ಸ್ಥಿತಿ, ಸರಿಯಾದ ವೇಳೆಗೆ ಆಹಾರದ ಪೂರೈಕೆ, ಅದು ಮಲಗುವ ಜಾಗ ಹೊಲಸಾದರೆ ಸ್ವಚ್ಛಗೊಳಿಸುವುದು ಕಾಯಿಲೆ ರೋಗಗಳು ಬಂದ ಸಂದರ್ಭದಲ್ಲಿ ತಕ್ಕ ಔಷದವನ್ನು ಈ ಮಹಿಳೆಯೇ ಮಾಡಿಕೊಡಬೇಕು ಇಂತಹ ಬಹುಕಠಿಣ ಕೆಲಸಗಳ ಜೊತೆಗೆ ಕುಟುಂಬವನ್ನು ನೋಡಿಕೊಳ್ಳುವುದು ಹೀಗೆ ಬಹಳ ಶ್ರಮಯುತವಾದ ಕಾರ್ಯಗಳನ್ನು ಎಷ್ಟೇ ಕಷ್ಟವಿದ್ದರೂ ನಿಭಾಯಿಸಿಕೊಂಡು ಹೋಗುತ್ತಿದ್ದಳು.

ಆದರೆ ಈ ಮೇಲಿನ ಎಲ್ಲಾ ಅಂಶಗಳು ಇಂದು ಮದಾರಿ ಮಹಿಳೆಗೆ ತುಂಬಾ ಸಹಕಾರಿಯಾಗಿದ್ದವು ವ್ಯವಸ್ಥಿತಿ ಹಾಗೂ ಕ್ರಮಬದ್ಧವಾದ ಜೀವನ ನಡೆಸಲು ನೆರವಾಗಿದ್ದವು ಮನೆಯಲ್ಲಿ ಕುಟುಂಬವರ ಜೊತೆಗೆ ಸಂತೋಷವನ್ನು ಹಂಚಿಕೊಂಡು ಯಾವುದೇ ಸಮಸ್ಯೆ ಬರದಂತೆ ನೋಡಿಕೊಳ್ಳುತ್ತಿರುವುದರಲ್ಲಿ ಅವಳಿಗೂ ಒಂದು ರೀತಿಯಲ್ಲಿ ಪುರುಷನಷ್ಟೆ ಸಮಾನಳಾಗಿರುವಳೆಂಬ ಭಾವನೆ ಅವಳಲ್ಲಿತ್ತು.

ಕರಡಿ ಹೋದ ಮೇಲೆ ಮನೆಯಲ್ಲಿ ಮಹಿಳೆಯರ ಮೇಲೆ ಆರ್ಥಿಕತೆಯ ಪರಿಣಾಮ ಬಹಳ ಗಂಭೀರವಾದ ರೀತಿಯಲ್ಲಿ ಪ್ರಭಾವ ಬೀರಿದೆ. ಮನೆಯಲ್ಲಿ ಮಕ್ಕಳ ಆರೋಗ್ಯ ಶಿಕ್ಷಣ ಊಟ, ಬಟ್ಟೆಗಳ ಬಗೆಗೆ ನೋಡಿಕೊಳ್ಳುವ ಬದಲು ಮೈನ್ಸ್‌ನಂತಹ ಅಪಾಯಕಾರಿ ಕೆಲಸಗಳಿಗೆ ಹೋಗುತ್ತಿರುವುದು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ತಿಳಿಯಿತು ಕೃಷಿಕೂಲಿಯಂತಹ ಕೆಲಸಗಳಿಗೆ ಹೋಗುತ್ತಿರುವುದು ಬೀಡಿ ಅಂಗಡಿಯನ್ನಿಟ್ಟು ಜೀವನ ಸಾಗಿಸುತ್ತಿರುವುದು ಬಳೆ ಅಂಗಡಿಯಿಟ್ಟುಕೊಂಡಿರುವುದನ್ನು ಕ್ಷೇತ್ರಕಾರ್ಯದ ವೇಳೆಯಲ್ಲಿ ಖುದ್ದಾಗಿ ಅವರನ್ನು ಸಂದರ್ಶಿಸಿ ಅವರ ತುಡಿತ ಮಿಡಿತಗಳನ್ನು ಕೇಳಿ ಒಂದು ಕ್ಷಣ ಮನಸ್ಸಿಗೆ ವಿಷಾದವೆನಿಸಿತು.

ಮನೆಯಲ್ಲಿ ಹೆತ್ತ ಕಂದಮ್ಮಗಳನ್ನು ಬಿಟ್ಟು ದೊಡ್ಡ ಮಕ್ಕಳನ್ನು ಶಾಲೆಗೆ ಹೋಗುವುದನ್ನು ಬಿಡಿಸಿ ಕಂದಮ್ಮಗಳ ನೋಡಿಕೊಳ್ಳಲು ಹೇಳಿಹೋಗುತ್ತಾರೆ. ಬೆಳಿಗ್ಗೆ ೭ ಗಂಟೆಗೆ ಹೋಗಿ ಪುನಃ ಸಾಯಂಕಾಲ ೬ ಗಂಟೆಗೆ ಮನೆಗೆ ತೆರಳುತ್ತಾರೆ. ವಾರದಲ್ಲಿ ಒಂದು ದಿನ ಸೋಮವಾರ ಮಾತ್ರ ಸಂತೆ ಮಾಡಲು ಕೆಲಸಕ್ಕೆ ಹೋಗುವುದನ್ನು ಬಿಡುತ್ತಾರೆ. ಪುನಃ ಮರುದಿನದಿಂದ ದಿನನಿತ್ಯ ಹೋಗುತ್ತಾರೆ. ಇದೇ ಇವರ ಜೀವನವಾಗಿಬಿಟ್ಟಿದೆ. ಒಂದು ವೇಳೆ ಹೋಗದಿದ್ದರೆ ಮನೆಯ ಆರ್ಥಿಕ ಸ್ಥಿತಿಯೇ ನಿಂತುಬಿಡುತ್ತದೆ. ಪುರುಷರು ಕುಡಿತದ ಅಭ್ಯಾಸವಿಟ್ಟುಕೊಂಡಿದ್ದರಿಂದ ದುಡಿದ ಹಣವನ್ನು ಮನೆಯಲ್ಲಿ ಕೊಡುವುದಿಲ್ಲ. ಒಂದು ವೇಳೆ ಹೆಂಡತಿಯಾದವಳು ಕೇಳಿದರೆ ಕುಡಿದ ಅಮಲಿನಲ್ಲಿ ಜಗಳಗಳು ನಡೆದು ಪರಸ್ಪರ ಕಲಹ ಮನಸ್ತಾಪಗಳಾಗಿರುತ್ತವೆ. ಹೀಗೆ ಮಹಿಳೆಯು ಇತ್ತ ಗಂಡನ ಮನಸ್ಸನ್ನು ತೃಪ್ತಿ ಪಡಿಸಬೇಕು. ಹಾಗೂ ಮಕ್ಕಳ ಊಟ ಬಟ್ಟೆಯ ಖರ್ಚನ್ನು ನೋಡಿಕೊಳ್ಳಬೇಕು. ಇದಕ್ಕಾಗಿಯೇ ಇಂದು ಮಹಿಳೆಯರು ಹಲವಾರು ಕೆಲಸಕ್ಕೆ ಹೋಗುತ್ತಿರುವರು.

ರಾಜಾಬಿ ಎಂಬ ಮಹಿಳೆ ಸಣ್ಣ ಬಿಡಿ ಅಂಗಡಿಯಿಟ್ಟುಕೊಂಡು ಅದರಿಂದ ಬರುವ ಅಲ್ಪ ಆದಾಯದಿಂದ ಮಕ್ಕಳನ್ನು ಸಾಕುತ್ತಿದ್ದಾರೆ. ಸ್ತ್ರೀ ಶಕ್ತಿ ಸಂಘವು ಇವರ ಆಪತ್‌ಕಾಲಕ್ಕೆ ನೆರವಾಗಿದೆ. ತಾವು ದುಡಿದ ಹಣದಲ್ಲಿ ಸ್ವಲ್ಪ ಹಣವನ್ನು ಕೊಡಿಸಿ ಸಂಘಕ್ಕೆ ಎಲ್ಲಾ ಮಹಿಳೆಯರು ಕಟ್ಟುತ್ತಿರುವುದು ಕ್ಷೇತ್ರಕಾರ್ಯದ ವೇಳೆಯಲ್ಲಿ

ತಿಳಿಯಿತು. ಹೆಣ್ಣು ಮಕ್ಕಳ ಮದುವೆ ಸಮಯ ಬಂದಾಗ ಸಂಘದಿಂದ ಹಣವನ್ನು ಪಡೆದು ನಂತರ ಕಟ್ಟುತ್ತಾ ಹೋಗುವರು. ರಾಜಾಭಿ ಮಹಿಳೆಯು ತನ್ನ ಮಗ ಪಿ.ಯು.ಸಿ. ಮುಗಿಸಿ ಈಗ ಡಿಪ್ಲೊಮಾ ಪದವಿ ಮಾಡಲು ಹಣಬೇಕು. ಯಾರು ಕೊಡುವುದಿಲ್ಲ ಸರ್ಕಾರವು ತಮ್ಮ ನೆರವಿಗೆ ಬಂದಿಲ್ಲ ಇನ್ನೇನು ಮಾಡಬೇಕು ತಾವೇ ದುಡಿದ ಹಣದಿಂದ ಓದಿಸುತ್ತಿದ್ದೇವೆ ಎಂದು ನಾನು ಕ್ಷೇತ್ರಕಾರ್ಯಕ್ಕೆ ಹೋದಾಗ ಹೇಳಿದರು.

ಈ ರೀತಿಯಾದ ಬಹಳ ಕೆಳಮಟ್ಟದ ನಿಕೃಷ್ಟ ಜೀವನವನ್ನು ಮಹಿಳೆಯರು ಅನುಭವಿಸುತ್ತಿದ್ದಾರೆ. ಮಹಿಳೆಯರ ಪರವಾಗಿರುವ ಸಂಘಟನೆ ಮಹಿಳಾವಾದಿಗಳು ಎಲ್ಲಿ ಹೋಗಿವೆ ಎಂಬುದು ಗೊತ್ತಾಗುತ್ತಿಲ್ಲ. ಉಳ್ಳವರಿಗಾಗಿಯೇ ಮಹಿಳಾ ಸಂಘಟನೆಗಳಿವೆಯೇ ಹೊರತು ಇಂತಹ ಮಹಿಳೆಯರ ಪರವಾಗಿ ಏನನ್ನು ಮಾತನಾಡದಿರುವುದು ದುರಂತವೇ ಸರಿ ಎನ್ನಬಹುದಾಗಿದೆ.

ರಾಜಕೀಯ ಸ್ಥಿತಿಗತಿ :

ರಾಜಕೀಯವಾಗಿ ಮದಾರಿಸಮುದಾಯ ಅತ್ಯಂತ ಹಿಂದುಳಿದಿದೆ. ಹಿಂದುಳಿದಿರುವಿಕೆಯಿಂದಾಗಿ ಆರ್ಥಿಕ ಮತ್ತು ಶೈಕ್ಷಣಿಕ ಪ್ರಗತಿ ಸಾಧ್ಯವಾಗಿಲ್ಲ ಎಂಬುದು ಸತ್ಯವಾದ ಮಾತು. ತುಂಬಾ ವರ್ಷಗಳಿಂದಲೂ ಈ ಜನಾಂಗವು ಯಾವುದೇ ರಾಜಕೀಯ ಪ್ರತಿನಿಧಿಗಳನ್ನು ರಾಷ್ಟ್ರಮಟ್ಟದಲ್ಲಿಯಾಗಲಿ ರಾಜ್ಯಮಟ್ಟದಲ್ಲಿಯಾಗಲಿ ಹೊಂದಿಲ್ಲವಾಗಿದೆ. ಸಂಘಟನೆಯ ಕೊರತೆ ಹಾಗೂ ಮೀಸಲಾತಿಯ ಕೊರತೆಯಿಂದಾಗಿ ಶೋಷಿತಕ್ಕೊಳಗಾಗಿ ತಿರಸ್ಕೃತಗೊಂಡ ಜನಾಂಗವೆನಿಸಿದೆ. ಬಹುಮುಖ್ಯವಾಗಿ ಸಮಾಜದ ಯಾವುದೇ ರಂಗಕ್ಕೆ ಪ್ರವೇಶಪಡೆಯಬೇಕಾದರೆ ಶಿಕ್ಷಣ ಅತ್ಯವಶ್ಯಕ, ಇಂತಹ ಶಿಕ್ಷಣ ಮದಾರಿಗಳು ಪಡೆದಿಲ್ಲ ಶೈಕ್ಷಣಿಕ ಕೊರತೆಯಿಂದಾಗಿ ಸಂಘಟನೆಯ ಕೌಶಲ್ಯವಿಲ್ಲವಾಗಿದೆ. ತಮ್ಮ ಜನಾಂಗದ ಸ್ಥಿತಿಗತಿಯನ್ನು ಸರಕಾರದ ಗಮನಕ್ಕೆ ತರಲು ಶಿಕ್ಷಣ ಪಡೆದ ಯಾವೊಬ್ಬ ವಿದ್ಯಾವಂತನಾಗಲಿ ಇಲ್ಲ ಎಲ್ಲರು ಅನಕ್ಷರಸ್ಥರೇ ಆಗಿರುವುದು ರಾಜಕೀಯ ಪ್ರವೇಶಕ್ಕೆ ಹಿನ್ನಡೆಯುಂಟಾಗಿದೆ. ತಮ್ಮ ಜೀವಮಾನವಿಡಿ ಪಾರಂಪರಿಕ ವೃತ್ತಿ (ಕರಡಿಯಾಡಿಸುವುದು) ಜೀವನದ ಕಷ್ಟನಷ್ಟ ಸುಖದುಃಖಗಳನ್ನು ಅನುಭವಿಸಿ ಅದೆ ತನ್ನ ದೊಡ್ಡ ಪ್ರಪಂಚ ಬೇರೆ ಯಾವುದರ ಅಗತ್ಯವಿಲ್ಲ ಎಂಬ ಭ್ರಮಾತೀತ ಕಲ್ಪನೆಯೊಳಗೆ ಮುಳುಗಿದ ಇವರಿಗೆ ಸರಕಾರ ಒಮ್ಮೆಲೆ ಪ್ರಾಣಿನಿಷೇದ ಕಾಯ್ದೆ ಜಾರಿಯಿಂದ ಬೀದಿಗೆ ಬಂದ ಈ ಕುಟುಂಬಗಳು ತಮ್ಮ ಮುಂದಿನ ಭವಿಷ್ಯದ ಕುರಿತು ಯೋಚಿಸುವ ಸಂದರ್ಭದಲ್ಲಿ ತನ್ನ ಹಕ್ಕುಗಳನ್ನು ಪಡೆಯುವ ಎಚ್ಚರ ಜಾಗೃತಿ ಈಗ ಬಂದಿದೆಯಾದರೂ ಈಗಾಗಲೇ ಹಲವಾರು ಸಮಸ್ಯೆಗಳನ್ನು ಸೃಷ್ಟಿಸಿಕೊಂಡು ಬಂದಿರುವುದನ್ನು ಕಾಣಬಹುದು. ಬಡತನ, ಶಿಕ್ಷಣ, ವಸತಿ, ಮೀಸಲಾತಿ ಉದ್ಯೋಗ ದಂತಹ ಇನ್ನಿತರ ಸಮಸ್ಯೆಗಳಿಗೆ ಪರಿಹಾರ ಹುಡುಕಲು ಈ ಜನಾಂಗ ತನ್ನ ಸಂಘಟನೆ ಹೋರಾಟಗಳ ಪ್ರಯತ್ನ ಮಾಡುತ್ತಿದೆ. ತಮ್ಮ ಜನಾಂಗದ ಸಮಗ್ರ ಉನ್ನತಿ ಅಥವಾ ಅಭಿವೃದ್ಧಿಗೆ ಶ್ರಮಿಸಲು ರಾಜಕೀಯ ನಾಯಕರು, ಪ್ರತಿನಿಧಿಗಳ ಕೊರತೆಯಿದೆ. ತಮಗೆ ಮೀಸಲಾತಿಯು ಮೊದಲೇ ಸಿಗಬೇಕಾಗಿತ್ತು. ಅನಕ್ಷರತೆ, ಅಜ್ಞಾನ, ಮೌಢ್ಯತೆಗಳ ತಮಗೆ ಮಾರಕವಾಗಿವೆ. ತಮ್ಮಂತೆ ಇತರ ಪ್ರಾಣಿಪ್ರದರ್ಶಿಸಿದ ಜನಾಂಗಗಳಿಗೆ ಸರಕಾರವು ಶಿಕ್ಷಣ, ಮೀಸಲಾತಿ ಯಂತಹ ಸೌಲಭ್ಯಗಳನ್ನು ಕಲ್ಪಿಸಿ ರಾಜಕೀಯ ರಂಗಕ್ಕೆ ನೇರವಾಗಿ ಸೌಲಭ್ಯ ಕಲ್ಪಿಸಿ

ಆಯಾ ಜನಾಂಗಕ್ಕೆ ಪ್ರತಿನಿಧಿಗಳನ್ನು ಆರಿಸಿದೆ. ತಮಗೇಕೆ ಮೀಸಲಾತಿ ಕಲ್ಪಿಸದೆ ತಾರತಮ್ಯ ಮಾಡಿರುವುದು ಗೊತ್ತಾಗುತ್ತಿಲ್ಲ ಎಂದು ಸರಕಾರಕ್ಕೆ ಪ್ರಶ್ನಿಸುವಿಕೆಯನ್ನು ನನ್ನ ಕ್ಷೇತ್ರಕಾರ್ಯದ ಸಂದರ್ಭದಲ್ಲಿ ತಿಳಿಯಿತು.

ರಾಜಕೀಯ ಪ್ರಜ್ಞೆ ಮತ್ತು ರಾಜಕೀಯ ಉನ್ನತಿ ಸಾಧಿಸದ ಹೊರತು ಯಾವುದೇ ಜನಾಂಗ ಆರ್ಥಿಕವಾಗಿ ಮತ್ತು ಶೈಕ್ಷಣಿಕವಾಗಿ ಪ್ರಗತಿಯಾಗುವುದು ಕಷ್ಟ. ಒಂದು ವೇಳೆ ಈ ಉನ್ನತಿ ಸಾಧಿಸಬೇಕಾದರೆ ಮೀಸಲಾತಿಯಿರಬೇಕು. ಆದರೆ ತಮ್ಮ ಜನಾಂಗ ಹಿಂದುಳಿದ ವರ್ಗದ ಅಡಿಯಲ್ಲಿ ಬರುತ್ತಿದ್ದು ರಾಜಕೀಯ ರಂಗ ಪ್ರವೇಶ ಮಾಡುವುದು ದೂರದ ಮಾತು ಎಂಬುದು ಇವರ ಅಸಹಾಯಕತೆಯಿಂದ ತಿಳಿಯಿತು.

ರಾಜಕೀಯ ರಂಗಕ್ಕೆ ಮದಾರಿಗಳ ಪ್ರವೇಶ ಬಹಳ ಕಡಿಮೆಯೇ ಎಂದು ಹೇಳಬಹುದು. ರಾಜಕೀಯ ಪ್ರವೇಶ ಮಾಡುವುದು ತುಂಬಾ ಕಷ್ಟದ ವಿಷಯ. ಹಣಬಲ, ಜನಬಲ ರಾಜಕೀಯ ನಾಯಕರ ಮನವೊಲಿಸುವುದು ಹಾಗೂ ಸರಕಾರದ ನಿಯಮದಂತೆ ಮೀಸಲಾತಿಯನ್ನು ಹೊಂದಿರಬೇಕು. ಈ ಎಲ್ಲಾ ಅಂಶಗಳು ಮದಾರಿಗಳಲ್ಲಿ ಇಲ್ಲವಾದ್ದರಿಂದ ರಾಜಕೀಯ ಪ್ರವೇಶ ಕನಸಾಗಿಬಿಟ್ಟಿದೆ. ಹಂಪಿನಕಟ್ಟೆಯ ದಾದಾಪೀರ್ ಎಂಬುವವರು ೪ ವರ್ಷದ ಹಿಂದೆ ಗ್ರಾಮ ಪಂಚಾಯಿತಿ ಸದಸ್ಯರಾಗಿದ್ದದು ಬಿಟ್ಟರೆ ಇಂದಿನವರೆಗೆ ಯಾರು ರಾಜಕೀಯ ಪ್ರವೇಶಿಸಿಲ್ಲ. ಇಡೀ ಜನಾಂಗದ ಕುರಿತು ನೋಡಿದಾಗ ರಾಜಕೀಯಕ್ಕೆ ಇಳಿದಿದ್ದು ದಾದಾಪೀರ್ ಒಬ್ಬರೆ ಎಂಬುದು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ತಿಳಿಯಿತು.

ಅಡಿಟಿಪ್ಪಣಿ

೧. ಕರ್ನಾಟಕದಗೊಲ್ಲ ಸಮುದಾಯ .... ಡಾ. ಎಂ.ಗುರುಲಿಂಗಯ್ಯ, ಪು. ೧೦೧.೧೦೨

೨. ಕರ್ನಾಟಕದ ಗೊಲ್ಲಸಮುದಾಯ...... ಡಾ.ಎಂ.ಗುರುಲಿಂಗಯ್ಯ, ಪು. ೪೭

೩. ಗುಲ್ಬರ್ಗಾ ಜಿಲ್ಲೆಯ ಬೈಲುಪತ್ತಾರರ ಸಮಾಜಶಾಸ್ತ್ರೀಯ ಅಧ್ಯಯನ, ಬಸವರಾಜ್ ಎಂ.ಫಿಲ್ ಅಪ್ರಕಟಿತ ನಿಬಂಧ

ಅಧ್ಯಾಯ ನಾಲ್ಕು

ಪ್ರದರ್ಶನ ಕಲೆಯಾಗಿ ಕರಡಿ

ಪ್ರದರ್ಶನ ಕಲೆಯಾಗಿ ಕರಡಿ
ಕರಡಿ ಸಾಕುವುದು, ಪಳಗಿಸುವುದು, ಕರಡಿ ಕಲೆ ಮತ್ತು ಪ್ರದರ್ಶನ
ಕರಡಿ ಜೀವನಾವರ್ತನದ ಆಚರಣೆಗಳು
ಕರಡಿ ಬಗೆಗಿನ ಜನಪದ ನಂಬಿಕೆ ಮತ್ತು ವೇಷಭೂಷಣಗಳು

ಅಧ್ಯಾಯ ನಾಲ್ಕು

ಪ್ರದರ್ಶನ ಕಲೆಯಾಗಿ ಕರಡಿ

"ಆರ್ಟ್ ಈಜ್ ಲಾಂಗ್; ಲೈಪ್ ಈಜ್ ಶಾರ್ಟ್" ಎಂಬ ಇಂಗ್ಲೀಷ್‌ನಲ್ಲಿರುವ ಗಾದೆಯಂತೆ ಜೀವನಕ್ಕಿಂತ ವಿಸ್ತಾರವಾದದ್ದು ಕಲೆ, ಕಲೆಯು ಕಲಿತಷ್ಟು ಕಲೆಯಿರುತ್ತದೆ. ಅದು ಮುಗಿದಷ್ಟು ಬೆಳೆಯುತ್ತಿರುತ್ತದೆ. ಈ ರೀತಿಯಾಗಿ ವೈಶಾಲ್ಯತೆಯನ್ನು ಬೆಳಸಿಕೊಂಡ ಕಲೆಯಿಂದ ಅನೇಕ ಸಮುದಾಯಗಳು ತಮ್ಮ ಬದುಕಿನ ರಥವನ್ನು ಎಳೆಯುತ್ತಿದ್ದಾರೆ. ಆರ್ಥಿಕ ಮೂಲವಿಲ್ಲದ ಅಲೆಮಾರಿಗಳು ಪಂಪರಾಗತ ಕಾಲದಿಂದಲೂ ಕಾಪಾಡಿಕೊಂಡು ಬಂದ ಕಲೆಯಿಂದ ಅನ್ನ ದೊರಕಿಸಿಕೊಳ್ಳುತ್ತಿದ್ದಾರೆ.

"ಕಲೆಗಳನ್ನು ಸೌಂದರ್ಯದಿಂದ ಆನಂದಿಸಿದರೆ ಮತ್ತೆ ಕೆಲವು ಕಲೆಗಳನ್ನು ನೋಡಿ ಕೇಳಿ ಅನುಭವಿಸಬೇಕಾಗುತ್ತದೆ. ಹೀಗೆ ಆನಂದ ನೀಡುವ ಹಾಗೂ ಕಣ್ಣಿಗೆ ಸೌಂದರ್ಯ ನೀಡುವ ಕಲೆಗಳೆಲ್ಲವು ಪ್ರದರ್ಶನ ಕಲೆಗಳಾಗಿವೆ. ಕಲೆಗಳು ಎಂದು ಯಾರಿಂದ ಯಾವ ಸ್ಥಳದಲ್ಲಿ ಜನ್ಮ ತಾಳಿದವು ಎಂದು ಚರಿತ್ರೆಯ ಪುಟದಲ್ಲಿ ನಿಖರವಾಗಿ ಕಂಡುಬರುವುದಿಲ್ಲ ಇಂತಹ ಕಲೆಗಳ ಬಗ್ಗೆ ಸಾಮಾನ್ಯ ಮಾಹಿತಿ ಸಿಗಬಹುದೆ ವಿನಹಃ ಎಲ್ಲಿಯೂ ಕಲೆಯ ಉಗಮದ ನಿಖರತೆ ಕಾಣಲು ಸಾಧ್ಯವಿಲ್ಲ. ಪ್ರಾಚೀನ ಕಾಲದಿಂದಲೂ ಅಲೆಮಾರಿಗಳು ಪ್ರದರ್ಶನ ಕಲೆಗಳು ರೂಢಿಸಿಕೊಂಡು ಬಂದಿರುವುದನ್ನು ಚರಿತ್ರೆಯಲ್ಲಿ ನೋಡಬಹುದಾಗಿದೆ" ಪ್ರದರ್ಶನ ಕಲೆ ಸಮುದಾಯದ ರಂಜನೆಗೆ ಮೀಸಲಾಗಿಲ್ಲ ಬದಲಾಗಿ ಆಳುವ ಅರಸರ ವರ್ಗ ನೆಲೆನಿಂತವರ ರಂಜನೆಗಾಗಿ ತಮ್ಮನ್ನು ತಾವು ಅರ್ಪಿಸಿಕೊಂಡಿದ್ದಾರೆ. ಇಲ್ಲಿ ಕರಡಿಯಾಡಿಸುವ ಘುದಾರಿಗಳು ಅಂದಿನ ಚರಿತ್ರೆಯ ಕಾಲಕ್ಕೆ ಮೊಗಲರ ಅರಸರ ಕಾಲದಲ್ಲಿಯೇ ಕರಡಿ ಪ್ರದರ್ಶನವನ್ನು ನೀಡುತ್ತಿದ್ದುದು ಚರಿತ್ರೆಯ ಪುಟಗಳಲ್ಲಿದೆ. ಇತ್ತ ಕರ್ನಾಟಕದಲ್ಲಿ ಮೈಸೂರು ಅರಸರು. ಕರಡಿಯಾಟವನ್ನು ಮೆಚ್ಚಿ ಗೌರವವದಿಂದ ಇವರಿಗೆ ಕಂಚಿನ ಪದಕ ನೀಡಿದುದು ನಮಗೆ ಗೊತ್ತಿರುವ ಸಂಗತಿ ಅಂದು ಅರಸರು ನೀಡಿದ ಕಂಚಿನ ಪದಕ ಇಂದಿಗೂ ಈ ಜನಾಂಗದವರ ಹತ್ತಿರವಿದೆ, ಮತ್ತು ಕರಡಿಯಾಡಿಸುವುದನ್ನು ಜನಪದ ಕ್ರೀಡೆಯಾಗಿಸಿ ಪ್ರತಿವರ್ಷ ಹಬ್ಬ ಉತ್ಸವಗಳಲ್ಲಿ ಕರಡಿಯಾಡಿಸುವರನ್ನು ಕರೆಸುತ್ತಿದ್ದು ಅದರಿಂದ ಮನರಂಜನೆ ಪಡೆಯುತ್ತಿದ್ದುದು ಇತಿಹಾಸದಿಂದ ತಿಳಿಯುತ್ತದೆ. ಇಂತಹ ಕಲೆಯನ್ನು ಪೂಜ್ಯಭಾವನೆಯಿಂದ ಕಾಪಾಡಿಕೊಂಡು ಬಂದಿದ್ದಾರೆ. ಇವರ ಪ್ರದರ್ಶನ ಬೇರೆಯವರ ದೃಷ್ಟಿಯಲ್ಲಿ ರಂಜನೆಯಾಗಿರಬಹುದು. ಆದರೆ ಅದು ಇವರ ದೃಷ್ಟಿಯಲ್ಲಿ ಹಸಿವನ್ನು ನೀಗಿಸುವ ಹಾಗೂ ಜೀವನೋಪಾಯದ ಮಾರ್ಗವಾಗಿದೆ. ಇಂತಹ ಕಲೆಯು ಇಂದು ಸರಕಾರದ ದೃಷ್ಟಿಯಲ್ಲಿ ಅಪರಾಧವೆನಿಸಿ ಈ ಕಲೆಯನ್ನುನಂಬಿ ಕುಳಿತ ಸಮುದಾಯಕ್ಕೆ ಇಂದು ಅಪರಾಧಿಪಟ್ಟವನ್ನು ಕಟ್ಟಲಾಗಿದೆ. ಈ ಕಲೆಯಿಂದ

ಆರ್ಥಿಕ ಭದ್ರತೆಯಿಲ್ಲ. ಸಮಾಜಸೇವಾ ಸಂಸ್ಥೆಗಳು ಇವರ ಕಷ್ಟವನ್ನು ಪರಿಹರಿಸುವುದಿಲ್ಲ ಆದರೂ ಇವರ ವೃತ್ತಿ ಆರಾಧ್ಯ ದೈವವಾಗಿದೆ. ಇವರ ಜನಾಂಗದ ಒಬ್ಬ ಹಿರಿಯರು ಹೇಳುವಂತೆ ಕರಡಿಯು ತಮಗೆ ಅನ್ನದಾತನಿದ್ದಂತೆ ಮನೆಯ ಮಗನಿದ್ದಂತೆ ಮಗನೇ ನಮ್ಮನ್ನು ಸಾಕುತ್ತಿದ್ದಾನೆ. ಆತನಿಗೆ ನಾವು ಚೆನ್ನಾಗಿ ನೋಡಿಕೊಳ್ಳುತ್ತೇವೆ. ಹೊರಸ್ಥಳಗಳಿಗೆ ಹೋದಾಗಲೆಲ್ಲಾ ಅದು ನಮಗೆ ಹಣ ಸಂಪಾದಿಸಿಕೊಡುತ್ತದೆ. ನಾವು ಅದಕ್ಕೆ ಏನು ಕಡಿಮೆ ಮಾಡುವುದಿಲ್ಲ ಎನ್ನುತ್ತಾರೆ. ''ಮಾಬುಸಾಬ್ ಕರಡಿ''ಯವರು ಜನ ಕೊಟ್ಟಷ್ಟು ಹಣ ಪಡೆಯುತ್ತೇವೆ ಆದರೆ ಕಲೆಯನ್ನು ಬಿಡುವುದಿಲ್ಲ. ತಾವೂ ಪ್ರದರ್ಶಿಸುವ ಕರಡಿ ಪ್ರದರ್ಶನದಲ್ಲಿ ನೈತಿಕತೆಯ ಅಂಶ, ಕುಟುಂಬದಲ್ಲಿಯ ಸದಸ್ಯರ ಸಂಬಂಧಗಳು, ಮೌಲ್ಯಗಳು, ಹೋರಾಟ, ಸಂಧಾನದ ಬಗೆಗಿನ ಅಂಶಗಳು ಒಳಗೊಂಡಿವೆ.

''ಇವರು ಪ್ರದರ್ಶಿಸುವ ಕರಡಿಯಾಟಕ್ಕೆ ಇಂತಹದೆ ಸ್ಥಳ ಆಗಬೇಕೆಂದಿಲ್ಲ, ರಂಗಮಂದಿರ, ಧ್ವನಿವರ್ಧಕಗಳು ಪೀಠೋಪಕರಣಗಳು, ವಿದ್ಯುತ್ ದೀಪಗಳು ಇಂತಹ ಪರಿಕರಗಳ ಅವಶ್ಯಕತೆಯಿಲ್ಲ ಶಾಲಾ ಮೈದಾನ, ರೈಲ್ವೆ ನಿಲ್ದಾಣ ಬಸ್ಸ್ ನಿಲ್ದಾಣ, ಬಯಲು ಬೀದಿ, ಕೃಷಿ ಮಾರುಕಟ್ಟೆ ಸ್ಥಳ ಹಾಗೂ ಪ್ರತಿಮನೆಯ ಮುಂದಿನ ಅಂಗಳದಲ್ಲಿ ಪ್ರದರ್ಶಿಸುತ್ತಾರೆ'' ಕರಡಿ ಹಿಡಿದು ಬೀದಿಗೆ ಪ್ರವೇಶವಾದರೆ ಸಾಕು ನಾಯಿಗಳಾಗಲೇ ಬೊಗಳುತ್ತಿರುತ್ತವೆ. ನಾಯಿ ಸದ್ದಿಗೆ ಮನೆಯ ಒಳಗಿನ ಸದಸ್ಯರು ಹೊರಬಂದು ಕರಡಿಯಾಟವನ್ನು ನೋಡುವರು, ಇದು ಅಪರೂಪದ ಸನ್ನಿವೇಶವಾಗಿರುತ್ತದೆ. ನೋಡುಗರಿಗೆ,

ಕರಡಿಯಾಡಿಸುವ ಮದಾರಿಗಳು ಪ್ರದರ್ಶನವನ್ನು ಮುಖ್ಯವಾಗಿ ನೋಡುವ ವಿಧಾನ

೧. ಬೀದಿಯಲ್ಲಿ

೨. ಗ್ರಾಮೀಣ ಪ್ರದೇಶದ ಮನೆಯ ಮುಂದೆ

೩. ತಾಯತದ ಮಾರಾಟ

೧. ಬೀದಿಯಲ್ಲಿ ಪ್ರದರ್ಶನ : ಬೀದಿಗಳ ಮಧ್ಯದಲ್ಲಿ ಕರಡಿಯಾಟ ಪ್ರದರ್ಶಿಸಿದಾಗ ಬಹಳಜನ ಸೇರುತ್ತಾರೆ. ಕರಡಿಗೆ ಎಲ್ಲರಿಗೂ ಸಲಾಂಮಾಡು, ಮಕ್ಕಳು, ಮರಿ, ದೊಡ್ಡವರಿಗೆ ಕರಡಿಯು ಸಲಾಂನ್ನು ಕಾಲು ಎತ್ತಿ ಮಾಡಿದಾಗ ಎಲ್ಲರಿಗೂ ಅದು ನೋಡುವುದೇ ಒಂದು ಸಂಭ್ರಮವಾಗಿರುತ್ತದೆ. ಆಟವನ್ನು ವೀಕ್ಷಿಸಿ ಪ್ರದರ್ಶನ ಮುಗಿದ ಮೇಲೆ ಜನರು ತಮಗೆ ತಿಳಿದಷ್ಟು ಹಣ ಕೊಡುತ್ತಾರೆ.

೨. ಗ್ರಾಮೀಣ ಪ್ರದೇಶದ : ಮನೆಯ ಮುಂದೆ ಮದಾರಿಗಳ ಕರಡಿಯಾಟವನ್ನು ಗ್ರಾಮದ ಪ್ರತಿ ಮನೆಮುಂದೆ ಹೋಗಿ ಒಳಗಡೆಯಿರುವ ಸದಸ್ಯರನ್ನು ಕರೆದು ಮಕ್ಕಳಿಗೇನಾದರೂ ಬಾಲಗ್ರಹ, ಕೆಟ್ಟಕನಸು, ವಾಂತಿಬೇದಿ, ಭಯಭೀತಿಯಿದ್ದರೆ ಕರಡಿಯ ಮೇಲೆ ಕೂರಿಸಲು ಹೇಳುವರು ಇದರಿಂದ ಮಕ್ಕಳಿಗೆ ಯಾವುದೇ ರೋಗಗಳು ಕಾಡುವುದಿಲ್ಲ. ಎಂಬ ನಂಬಿಕೆ ಇಂದಿಗೂ ಜನಪರದಲ್ಲಿದೆ. ಹೀಗೆ ಮನೆಯವರು ನೀಡಿದ ದವಸ, ಧಾನ್ಯ, ಹಣ ಕೊಟ್ಟದ್ದನ್ನು ತೆಗೆದುಕೊಳ್ಳುತ್ತಾರೆ.

೩. ತಾಯತದ ಮಾರಾಟ : ಅಲೆಮಾರಿಗಳಾದ ಮದಾರಿಗಳು ಕರಡಿಯಾಟವನ್ನು ಕೇವಲ ಕರ್ನಾಟಕದಲ್ಲಿ ಮಾತ್ರ ಆಡಿಸದೆ ಆಂಧ್ರಪ್ರದೇಶ, ಮಹಾರಾಷ್ಟ್ರ, ತಮಿಳುನಾಡುಗಳಿಗೆಲ್ಲಾ ಹೋಗಿ ಅಲ್ಲಲ್ಲಿ ತಿಂಗಳು, ವಾರದಂತೆ ಇದ್ದು ತಾಯತವನ್ನು ಮಾರಿ ಬಂದ ಹಣವನ್ನು ಸಂಪಾದಿಸಿಕೊಂಡು ಪುನಃ ತಮ್ಮೂರಿಗೆ ಬರುವ ಹೊತ್ತಿಗೆ ಒಂದು ವರ್ಷವಾಗಬಹುದು ಎನ್ನುತ್ತಾರೆ. ಇವರ ಜನಾಂಗದ ಸದಸ್ಯರೊಬ್ಬರು ಅಲ್ಲಿಯ ಭಾಷೆಯನ್ನು ಬಹುಬೇಗ ಕಲಿತುಬಿಡುತ್ತಾರೆ.

ಸಮ್ಮೇಳನಗಳಲ್ಲಿ ಪ್ರದರ್ಶನ

ಮದಾರಿಗಳು ಕೇವಲ ನಗರ ಗ್ರಾಮೀಣ ಪ್ರದೇಶಗಳಲ್ಲಿ ಮಾತ್ರ ಕರಡಿಯಾಡಿಸದೆ ಸರ್ಕಾರಿ ಕಾರ್ಯಕ್ರಮಗಳಾದ ವನಮಹೋತ್ಸವ ಹಂಪಿ ಉತ್ಸವ, ಹೀಗೆ ಇನ್ನು ಮುಂತಾದ ಉತ್ಸವಗಳಲ್ಲಿ ಕಾರ್ಯಕ್ರಮಗಳನ್ನು ಕೊಟ್ಟು ಬಂದಿರುವರು. ಅಧಿಕಾರಿಗಳ ಮೆಚ್ಚುಗೆ ಪಡೆದಿದ್ದಾರೆ.

ಕರಡಿಯಾಟದಲ್ಲಿ ಸಾಮಾಜಿಕ ಮೌಲ್ಯಗಳು

ಮದಾರಿಗಳ ಕರಡಿಯಾಟ ಮಾನಸಿಕ, ದೈಹಿಕ ಶ್ರಮದಿಂದ ಕೂಡಿದ ತೊಳಲಾಟದ್ದಾಗಿದೆ. ಇಂತಹ ಕಲೆ ನಮಗೆ ರಂಜನೆ ಎನಿಸಿದರೂ ಅವರಿಗೆ ನೋವು ಕೊಟ್ಟಿದೆ ಅದನ್ನು ಅನುಭವಿಸಿ ಇತರರಿಗೆ ಮನರಂಜನೆ ನೀಡುತ್ತಿದ್ದಾರೆ. ಇವರ ಮನರಂಜನೆಯು ಕೇವಲ ಕ್ಷಣಿಕ ಸಂತೋಷ ನೀಡದೆ ಇಂದು ನಮ್ಮಲ್ಲಿ ಮರೆಯಾಗಿ ಹೋದ ತಂದೆ-ತಾಯಿ, ತಾಯಿ-ಮಗ, ಅತ್ತೆ-ಸೊಸೆ, ಮಾವ-ಸೊಸೆ, ಗೌಡ-ಶ್ಯಾನುಭೋಗರ ಗಮ್ಮತ್ತು ರಾಜನ ಗಾಂಭೀರ್ಯತೆ, ತವರು ಮನೆಯ ಸನ್ನಿವೇಶ, ಗಂಡನ ಮನೆಯ ಸನ್ನಿವೇಶ, ಗೌಡರು ಬೀಗರ ಮನೆಗೆ ಹೋಗುವ ನಡಿಗೆ ಇಂತಹ ಸನ್ನಿವೇಶಗಳನ್ನು ಕರಡಿಯು ಕೈಯಲ್ಲಿ ಪರಿಕರವಿಟ್ಟುಕೊಂಡು ತುಂಬಾ ಸೊಗಸಾಗಿ ಮಾನವರಂತೆಯೇ ತೋರಿಸಿಕೊಡುವ ಸನ್ನಿವೇಷ ತುಂಬಾ ಸುಂದರವಾಗಿರುತ್ತದೆ. ಜನಪದರು ಇಂದಿಗೂ ಈ ಕರಡಿಯ ಇಂತಹ ಸನ್ನಿವೇಶ ನೋಡಲು ಮುಗಿಬೀಳುತ್ತಾರೆ.

ಬಹುಭಾಷಿಕರು

ಮದಾರಿಗಳು ಕರಡಿಯಾಟದಿಂದ ಇಡೀ ಅರ್ಧದೇಶ ಸುತ್ತಿ ಬಂದವರಾಗಿದ್ದರಿಂದ ಬಹುಭಾಷೆಯ ಜ್ಞಾನವು ಇವರಲ್ಲಿದೆ. ವಿವಿಧ ಭಾಷೆಗಳಲ್ಲಿ ಮಾತನಾಡುತ್ತಾರೆ. ವ್ಯವಹಾರಕ್ಕಾಗಿ ಮಾತ್ರ ಆಯಾ ಭಾಷೆ ಬಳಸುವರು ಮನೆಯಲ್ಲಿ ಉರ್ದು ಮಾತನಾಡುವರು ಇವರು ಬಲ್ಲ ಭಾಷೆಗಳೆಂದರೆ, ತೆಲುಗು, ತಮಿಳು, ಮರಾಠಿ, ಹಿಂದಿ, ಕನ್ನಡ ಭಾಷೆಗಳನ್ನು ಬಲ್ಲವರಾಗಿದ್ದಾರೆ.

ಕರಡಿ ಮತ್ತು ಜನಪದರು (ನಂಬಿಕೆ)

''ಪ್ರಾಣಿಗಳು ದೇವತೆಗಳಿಗೆ ವಾಹನವಾಗುವುದು ಒಂದು ಹಂತವಾದರೆ ಪ್ರಾಣಿಗಳೇ ದೈವತ್ವಕ್ಕೆ ಏರಿರುವುದು ಇನ್ನೊಂದು ಹಂತ. ದೈವತ್ವಕ್ಕೆ ಏರಿದ ಪ್ರಾಣಿಗಳು ಮನುಷ್ಯರಿಂದ ಆರಾಧಿಸಲ್ಪಟ್ಟಿವೆ. ಅತ್ಯುಪಯುಕ್ತ ಪ್ರಾಣಿಗಳು

ದೇವತೆಗಳಾಗಿದ್ದು ಒಂದು ಬಗೆಯಾದರೆ "ಭಯೋತ್ಪಾದಕ ಪ್ರಾಣಿಗಳು" ದೇವತೆಗಳಾಗಿ ನಿಂತದ್ದೂ ಇನ್ನೊಂದು ಬಗೆ ಒಂದೊಂದು ಪ್ರಾಣಿಯನ್ನು ಒಂದೊಂದು ದೇವತೆಯ ಹೆಸರಿನಲ್ಲಿ ಗುರುತಿಸಲಾಗುತ್ತದೆ.

ಹಾವು - ನಾಗಪ್ಪ, ನಾಗದೇವರು

ಆಕಳು - ಗೋಪಮ್ಮ ಗೋಮಾತೆ

ಕರಡಿ - ಜಾಂಬವಂತ, ಜಂಭೂನಾಥೇಶ್ವರ

ಮಂಗ-ಹನುಮಂತ

ಹಂದಿ, ಕಾಡು ಹಂದಿ-ಲಕ್ಷ್ಮಿ (ಉತ್ತರ ಕರ್ನಾಟಕ ಭಾಗದಲ್ಲಿ)

ಕರಡಿ, ಹಾವು, ಹುಲಿ, ಹಂದಿ ಇವು ಭಯವನ್ನು ಹುಟ್ಟಿಸುವ ಪ್ರಾಣಿಗಳಾಗಿದ್ದು ಭಯದಿಂದ ಭಕ್ತಿಗೆ ತಿರುಗಿದೆ. ಈಗಲೂ ಜನಪದರು ಈ ಮೇಲಿನ ಪ್ರಾಣಿಗಳ ಮೇಲೆ ಅಪಾರವಾದ ನಂಬಿಕೆ, ಭಕ್ತಿ ಶ್ರದ್ಧೆಯನ್ನಿಟ್ಟಿರುವುದು ತಿಳಿದುಬರುತ್ತದೆ."[೮]

ಮಾನವನ ಹುಟ್ಟಿನ ಬಗೆಗೆ ಪುರಾಣ ಐತಿಹ್ಯಗಳು ಹೇಗೆ ಸಹಾಯಕವಾಗಿವೆಯೋ ಹಾಗೆಯೇ ಪ್ರತಿಯೊಂದು ಪ್ರಾಣಿಯ ಹುಟ್ಟಿನ ಬಗೆಗೆ ಪುರಾಣಗಳು ತಿಳಿಸುತ್ತವೆ. ಹೀಗೆ ಪ್ರಾಣಿಯಾದ ಕರಡಿ ಹುಟ್ಟಿನ ಬಗೆಗೆ ತಿಳಿಯಲು ನಮ್ಮ ಜನಪದರಿಗೆ ಪುರಾಣಗಳೂ ಪೂರಕವಾಗಿವೆ. ಹಾಗೂ ಕರಡಿಗೆ ಒಂದು ಪೂಜ್ಯನೀಯವಾದ ಸ್ಥಾನವನ್ನು ಇಂದು ಜನಪದರು ಕೊಟ್ಟಿದ್ದಾರೆ. ಅದು ಮುಂದುವರೆದು ಜನಪದ ನಂಬಿಕೆಯಾಗಿದೆ. ಇಂತಹ ನಂಬಿಕೆಗಳು ಪುರಾಣದ ಕಥೆಗಳನ್ನು ಹೊಂದಿವೆ. ನಂಬಿಕೆಯ ಬಗೆಗೆ ತಿಳಿಯುವುದು ನಮಗೆ ಅತ್ಯವಶ್ಯಕವೆನಿಸಿದೆ.

ಮಾನವನ ಬದುಕಿನಲ್ಲಿ ನಂಬಿಕೆಗಳು ಬಹುಮುಖ್ಯ ಸ್ಥಾನ ಪಡೆದುಕೊಂಡಿದೆ. ನಂಬಿಕೆಗಳು ಮಾನವರ ಬದುಕನ್ನು ನಿಯಂತ್ರಿಸುವ ಹಾಗೂ ನಿರ್ದೇಶಿಸುವ ಪ್ರಮುಖ ಶಕ್ತಿಯಾಗಿ ಜೀವನಾಡಿಯಾಗಿ ಸಂಸ್ಕೃತಿಯ ಭಾಗವಾಗಿದೆ. ವ್ಯಕ್ತಿ ಮತ್ತು ಸಮಾಜದ ಮೇಲೆ ಪ್ರಭಾವ ಬೀರುವ ನಂಬಿಕೆಗಳು ಒಂದುದೃಷ್ಟಿಯಲ್ಲಿ ಸಮಾಜದಲ್ಲಿ ಕಂಡುಬರುವ ಧ್ಯೇಯ ದೋರಣೆಗಳ ಅವಿಭಾಜ್ಯ ಅಂಗವಾಗಿವೆ. ವ್ಯಕ್ತಿಯಲ್ಲಿ ಅಂತರ್ಗತವಾಗಿರುವ ಅಗತ್ಯ ಆಶಯಗಳು ಹಾಗೂ ನಂಬುವ ಇಚ್ಛೆ ಪ್ರಬಲವಾಗಿದ್ದರೆ ನಂಬಿಕೆಗಳ ಬೆಳವಣಿಗೆಗೆ ಕಾರಣವಾಗುತ್ತದೆ. ಮಾನವನ ಬದುಕಿನಲ್ಲಿ ಹಾಸುಹೊಕ್ಕಾಗಿರುವ ನಂಬಿಕೆಗಳು ಒಂದಲ್ಲ ಒಂದು ವಿಧದಲ್ಲಿ ಅಭಿವ್ಯಕ್ತಗೊಳ್ಳುತ್ತವೆ. ಈ ನಂಬಿಕೆಗಳು ಗ್ರಾಮೀಣ ಜನರಿಗೆ ಮಾತ್ರ ಸೀಮಿತವಾಗಿರದೆ ನಗರವಾಸಿಗಳಲ್ಲಿಯೂ ಕಂಡುಬರುತ್ತದೆ. ಅಂದರೆ ನಂಬಿಕೆಗಳಿಲ್ಲದ ದೇಶವಾಗಲಿ ಜನರಾಗಲಿ ಇಲ್ಲ ಬಾಳಿಗೊಂದು ನಂಬಿಕೆ ಅಗತ್ಯ.

ಕರಡಿಯಾಡಿಸುವವರು ಗ್ರಾಮೀಣ ಜನಪದರು, ಸಾಮಾನ್ಯಜನರು ಈ ಮೂರು ವರ್ಗದವರು ಕರಡಿಯ ಬಗೆಗೆ, ನಂಬಿಕೆ, ಪುರಾಣ ಕಥೆಗಳನ್ನು ಈಗಲೂ ಹೇಳಿ ಸ್ಮರಿಸಿಕೊಳ್ಳುತ್ತಾರೆ. ಕರಡಿ ಕಣ್ಣಿಗೆ ಕಾಣಿಸಿಕೊಂಡಾಗ ಪೌರಾಣಿಕ ಅಂಶಗಳು ನೆನಪಿಗೆ ಬರುತ್ತವೆ. ಅಂತಹ ಕೆಲವು ಪೌರಾಣಿಕ ಕಥಾಭಾಗಗಳು ಈ ಕೆಳಗಿನಂತೆ ಉಲ್ಲೇಖಿತಗೊಂಡಿದೆ.

ಜಾಂಬವಂತ (ಪೌರಾಣಿಕ ಪುರುಷ)

"ರಾವಣ ಅನೇಕ ಕ್ರೂರ ವರ್ತನೆಗಳನ್ನು ತಾಳಲಾರದೇ ಭೂದೇವಿಯ ಮತ್ತು ಇತರ ದೇವತೆಗಳು ಬ್ರಹ್ಮನ ಬಳಿಗೆ ಹೋಗಿ ತಮ್ಮ ತೊಂದರೆಗಳನ್ನು ಹೇಳಿ ಇದಕ್ಕೆ ಪರಿಹಾರ ಸೂಚಿಸಬೇಕಂದು ಕೇಳಿಕೊಂಡರು ಬ್ರಹ್ಮನು ಅವರನ್ನು ಕ್ಷೀರಾಬ್ದಿಯಲ್ಲಿಯ ವಿಷ್ಣುವಿನಲ್ಲಿಗೆ ಕರೆದುಕೊಂಡು ಹೋದನು. ಮಹಾವಿಷ್ಣುವು ಎಲ್ಲವನ್ನು ಕೇಳಿ ತಾನೂ ದಶರಥನ ಮಗನಾಗಿ ಹುಟ್ಟಿ ರಾವಣನನ್ನು ಕೊಲ್ಲುತ್ತೇನೆಂದು ಹೇಳಿದನು ಆ ಸಂದರ್ಭಕ್ಕೆ ತನ್ನ ಸಹಾಯಕ್ಕಾಗಿ ಕಪಿಗಳನ್ನು ಸೃಷ್ಟಿಸುವಂತೆ ಬ್ರಹ್ಮನಿಗೆ ತಿಳಿಸಿದನು. ಇದರ ಪ್ರಕಾರವಾಗಿ ಬ್ರಹ್ಮನು ಜಾಂಬಮಂತ (ಕರಡಿ) (ಇಲ್ಲಿ ಜಾಂಬವಂತನೆಂದರೆ ಹಿಂದೆ ಪೌರಾಣಿಕ ಪುರುಷ) (ಇಂದು ಕರಡಿ ರೂಪ) ಮತ್ತಿತರ ಕಪಿಗಳನ್ನು ಸೃಷ್ಟಿಸಿದನು."[2]

ಜಾಂಬವಂತ ಹುಟ್ಟಿನ ಬಗೆಗೆ ಪುರಾಣದಲ್ಲಿ ಎರಡು ಕಥೆಗಳಿವೆ. ಬ್ರಹ್ಮ ಬಹಳ ಕಾಲದವರೆಗೆ ಕಪಿಗಳನ್ನು ಸೃಷ್ಟಿಸುವುದರ ಬಗೆಗೆ ಯೋಚಿಸುತ್ತಾ ಕುಳಿತನು. ಆ ವೇಳೆಗೆ ಬ್ರಹ್ಮನಿಗೆ ಆಕಳಿಕೆ ಬಂತು ಹಾಗೆ ಆಕಳಿಸಲು ತೆರೆದ ಬಾಯಿಂದ ನಾನು ಶ್ರೇಷ್ಟನಾದ "ಕರಡಿ ರೂಪದ ಜಾಂಬವಂತನನ್ನು ಈಗಾಗಲೇ ಸೃಷ್ಟಿಸಿದ್ದೇನೆ" ಎಂದು ಹೇಳಿಕೊಂಡನೆಂದು ವಾಲ್ಮೀಕಿ ರಾಮಾಯಣದ ಬಾಲಕಾಂಡದಲ್ಲಿ ಕಂಡುಬರುತ್ತದೆ.

ಇನ್ನೊಂದು ಕಥೆಯ ಪ್ರಕಾರ ಜಂಬೂದ್ವೀಪಕ್ಕೆ ಮೊದಲು ಈತನೇ ಪ್ರವೇಶಿಸಿದ್ದರಿಂದ ಈತನನ್ನು ಜಾಂಬವಂತ ಎಂದು ಕರೆಯಲಾಯಿತು. ಈತ ಹುಟ್ಟಿದಾಗ ಈ ಜಗತ್ತಾಗಲಿ ಸಮಯವಾಗಲಿ ಇಲ್ಲದಿದ್ದುದರಿಂದ ಈತನ ವಯಸ್ಸಾನ್ನಾಗಲಿ ಹುಟ್ಟಿದ ದಿನವನ್ನಾಗಲಿ ನಿಶ್ಚಯಿಸಲಾಗುವುದಿಲ್ಲ ರಾಮನ ಕಾಲಕ್ಕೆ ಜಾಂಬವಂತ ಆರು ಮನ್ವಂತರಗಳಷ್ಟು ವಯಸ್ಸಿನವನಾಗಿದ್ದನು. ಜಾಂಬವಂತನು ಮತ್ಸ್ಯಾವತಾರದಿಂದ ಹಿಡಿದು ರಾಮಾವತಾರದ ವರೆಗಿನ ಎಲ್ಲ ಅವತಾರಗಳನ್ನು ಪ್ರತ್ಯಕ್ಷವಾಗಿ ಕಂಡಿದ್ದನೆಂದು ಅಂಬ ರಾಮಾಯಣದಲ್ಲಿ ಕಂಡುಬರುತ್ತದೆ.

ಕೃಷ್ಣಾವತಾರದಲ್ಲಿಯ ಜಾಂಬವಂತನ ವರ್ಣನೆ

ಮಹಾವಿಷ್ಣುವಿನ ಹತ್ತು ಅವತಾರಗಳಲ್ಲಿ ಒಂಭತ್ತು ಅವತಾರಗಳನ್ನು ಕಣ್ಣಾರೆ ಕಂಡಂಥ ದೀರ್ಘಾಯುಷಿಯಾದ ಜಾಂಬವಂತನು ಕೃಷ್ಣಾವತಾರದ ಕಾಲದಲ್ಲಿ ಅಮೂಲ್ಯವಾದ ಶ್ರೀಮಂತಿಕೆ ಮಣಿಯ ಕಥೆಗೆ ಸಂಬಂಧಪಟ್ಟಂತೆ ಮತ್ತೆ ಕಾಣಿಸಿಕೊಳ್ಳುವನು ಸತ್ರಾಜಿತ ರಾಜನಿಗೆ ಸೂರ್ಯ ದೇವನು ಶಮಂತಕ ಮಣಿಯನ್ನು ಕೊಟ್ಟಿದ್ದನು. ಸತ್ರಾಜಿತನ ಕಿರಿಯ ಸೋದರನಾದ ಪ್ರಸೇನನು ಈ ಮಣಿಯನ್ನು ಧರಿಸಿಬೇಟೆಗೆ ಹೋದನು. ಕಾಡಿನಲ್ಲಿ ಸಿಂಹವೊಂದು ಪ್ರಸೇನನ್ನು ಕೊಂದು ಮಣಿಯನ್ನು ಬಾಯಲ್ಲಿ ಕಟ್ಟಿಕೊಂಡು ಕಾಡಿನಲ್ಲಿ ಹೋಗುತ್ತಿರುವಾಗ ಜಾಂಬವಂತನು ಆ ಸಿಂಹವನ್ನು ಕೊಂದು ಮಣಿಯನ್ನು ತಾನು ವಶಪಡಿಸಿಕೊಂಡನು. ಕೃಷ್ಣನೇ ಪ್ರಸೇನನ್ನು ಕೊಂದು ಮಣಿಯನ್ನು ಅಪಹರಿಸಿದನೆಂದು ಸುದ್ದಿಹಬ್ಬಿತು. ಆಗ ಕೃಷ್ಣನೇ ಕಾಡಿಗೆ ಹೋಗಿ ಜಾಂಬವಂತನನ್ನು ಸೋಲಿಸಿ ಆ ಮಣಿಯನ್ನು ಸತ್ರಾಜಿತನಿಗೆ ಹಿಂದಿರುಗಿಸಿದನು. ಅಲ್ಲದೆ ಕೃಷ್ಣನು ಜಾಂಬವಂತನ ಮಗಳಾದ ಜಾಂಬವತಿಯನ್ನು ವಿವಾಹವಾದನು.

ವಾಲ್ಮೀಕಿ ರಾಮಾಯಣದ ಕತೆಯ ಪ್ರಕಾರ

ವಾಮನಾವತಾರದಲ್ಲಿಯ ಜಾಂಬವಂತನ ವರ್ಣನೆ ಹೀಗಿದೆ. ಮಹಾಬಲಿಯ ಶಕ್ತಿಯನ್ನು ಅಡಗಿಸುವುದಕ್ಕಾಗಿ ಜಾಂಬವಂತನು ವಾಮನನಾಗಿ ಹುಟ್ಟಿದ ಮಹಾವಿಷ್ಣುವಿಗೆ ಪ್ರದಕ್ಷಿಣೆಮಾಡಿದನು. ಆ ವೇಳೆಗೆ ಜಾಂಬವಂತನು ಅತ್ಯಂತ ಬಲಾಢ್ಯನಾಗಿದ್ದನು. ಆದರೆ ರಾಮಾವತಾರದ ಕಾಲಕ್ಕೆ ಜಾಂಬವಂತನ ಶಕ್ತಿ ಪೂರ್ಣವಾಗಿ ಇಳಿದುಹೋಗಿತ್ತು ಸೀತೆಯನ್ನು ಹುಡುಕಿಕೊಂಡು ಹೊರಟು ಸಮುದ್ರತೀರದ ಬಳಿ ಸೇರಿದ್ದ ಕಪಿಗಳನ್ನು ಕುರಿತು ಹಿಂದಿನ ಕಾಲದಲ್ಲಿ ನನ್ನ ಸಾಮರ್ಥ್ಯವು ಈಗ ನೀವು ನೋಡುವಂತಿರಲಿಲ್ಲ ಅನಂತನಾದ ವಿಷ್ಣುವು ಮಹಾಬಲಿಯ ಯಜ್ಞದ ಸಂದರ್ಭದಲ್ಲಿ ಮೂರು ಹೆಜ್ಜೆಗಳನ್ನು ಅಳೆಯುವಾಗ ನಾನು ವಿಷ್ಣುವಿನ ಪ್ರದಕ್ಷಿಣೆ ಮಾಡಿದೆ. ಆದರೆ ಈಗ ನಾನು ವೃದ್ಧನಾಗಿರುವುದರಿಂದ ಸಮುದ್ರವನ್ನು ಹಾರಲು ಅಶಕ್ತನಾಗಿರುವೆ ಎಂದು ಹೇಳಿದನೆಂದು ವಾಲ್ಮೀಕಿ ರಾಮಾಯಣದಲ್ಲಿದೆ.

ಕರಡಿ ವೇಷ ಹಾಕಿಕೊಳ್ಳುವುದು

ಹನುಮಂತನ ವೇಷದ ಹಾಗೆ ಹಂಪಿಯಲ್ಲಿ ಕರಡಿವೇಷಗಳು ಜನಪ್ರಿಯ ಮಾತಂಗ ಪರ್ವತದಲ್ಲಿ ಜಾಂಬವ ಇದ್ದ ಎಂಬ ನಂಬಿಕೆ ಇರುವುದರಿಂದ ಕರಡಿ ವೇಷವನ್ನು ಹರಕೆ ರೂಪದಲ್ಲಿ ಹೇಳುತ್ತಾರೆ. ಈ ವೇಷ ಹಾಕಿದರೆ ಮೈಯಲ್ಲಿ ಹೇಳುತ್ತಾರೆ. ಈ ವೇಷ ಹಾಕಿದರೆ ಮೈಯಲ್ಲಿರುವ ರೋಗಗಳೆಲ್ಲ ವಾಸಿಯಾಗುತ್ತವೆ. ಎಂಬ ನಂಬಿಕೆ ಇದೆ.

ಸಾಮಾನ್ಯವಾಗಿ ಹನುಮಂತನ ವೇಷವನ್ನು ತರುಣರು ಕರಡಿ ವೇಷವನ್ನು ಮುದುಕರು ಹಾಕುತ್ತಾರೆ.

ಜನಪದರು ಕೆಲವು ನಂಬಿಕೆಗಳನ್ನು ಈಗಲೂ ಆಚರಿಸಿಕೊಂಡು ಬರುತ್ತಿರುವರು ಅಂತಹ ನಂಬಿಕೆಗಳು ಈ ಕೆಳಗಿನಂತೆ ನೋಡಬಹುದಾಗಿದೆ.

೧. ಯುಗಾದಿ ಹಬ್ಬದ ಸಂದರ್ಭದಲ್ಲಿ ಅಥವಾ ಹೊಸಮನೆ ಕಟ್ಟಿಸಿದಾಗ ಅದರ ಗೃಹಪ್ರವೇಶದ ವೇಳೆಯಲ್ಲಿ ಕರಡಿಗೊಲ್ಲರು, ಬ್ರಾಹ್ಮಣರು, ಆದಿಜಾಂಬವ ಇತರ ಸಮುದಾಯಗಳು ಶಾಸ್ತ್ರೋಕ್ತವಾಗಿ ಕಾಯಿ, ಕುಂಕುಮ, ಎಲೆ, ಅಡಿಕೆಯಂತಹ ವಸ್ತುಗಳಿಂದ ಪೂಜೆಮಾಡಿ ಕರಡಿಯನ್ನು ಬಾಗಿಲಿನಲ್ಲಿ ನಿಲ್ಲಿಸಿ ಅದಕ್ಕೆ ಹಣತೆ ಎತ್ತಿ ಹಣೆಗೆ ಕುಂಕುಮವಿಟ್ಟು ಒಳಗಡೆ ಪ್ರವೇಶ ಮಾಡಿಸುವರು ಇದರಿಂದ ಮನೆಯಲ್ಲಿ ಸುಖ ಶಾಂತಿ, ಸಂಪತ್ತು ಲಭಿಸುತ್ತದೆಂಬ ನಂಬಿಕೆ ಈಗಲೂ ಜನಪದರು ಹೊಂದಿದ್ದಾರೆ ಈ ಪದ್ಧತಿ ಬೆಂಗಳೂರು, ಮೈಸೂರು ಭಾಗಗಳಲ್ಲಿ ಹೆಚ್ಚು ಪ್ರಚಲಿತದಲ್ಲಿದೆ.

೨. ಹೆದರಿಕೆ ಭೀತಿ ಪುಕ್ಕಲು ಸ್ವಭಾವವುಳ್ಳ ಮಕ್ಕಳನ್ನು ಕರಡಿಯ ಮೇಲೆ ಕೂರಿಸಿದರೆ ಧೈರ್ಯವಂತರಾಗುತ್ತಾರೆಂಬ ನಂಬಿಕೆ ಜನಪದರಲ್ಲಿದೆ ಅದಕ್ಕಾಗಿ ಬೀದಿಯಲ್ಲಿ ಅಥವಾ ಮನೆಯ ಅಂಗಳಕ್ಕೆ ಕರಡಿಯಾಡಿಸುವವರು ಬಂದಾಗ ಮಕ್ಕಳನ್ನು ಕರಡಿಯ ಮೇಲೆ ಕೂರಿಸುವ ಪದ್ಧತಿ ಇಂದಿಗೂ ಇದೆ.

ಜನಪದ ಕ್ರೀಡೆಯಾಗಿ ಕರಡಿ

ಕರಡಿ ಆಡಿಸುವ ವೃತ್ತಿ ಇಂದು ನಿನ್ನೆಯದಲ್ಲ ತುಂಬಾ ವರ್ಷಗಳಿಂದ ತಲೆ ತಲಾಂತರಗಳಿಂದ ನಡೆದುಕೊಂಡು ಬಂದಿದೆ. ಅಂದಿನ ಮೈಸೂರು ಒಡೆಯರ ಕಾಲದಲ್ಲಿ ಕರಡಿಯಾಡಿಸುವುದನ್ನು ಅರಸರು ಜನಪದ ಕ್ರೀಡೆಗೆ ಹೋಲಿಸಿ ಕಂಚಿನ ಪತ್ರವನ್ನು ಮದಾರಿಗಳಿಗೆ ನೀಡಿ ಈ ಕಲೆ ಅಥವಾ ಕ್ರೀಡೆಯನ್ನು ಪ್ರೋತ್ಸಾಹಿಸುತ್ತಿದ್ದರು. ಈ ಕ್ರೀಡೆಯನ್ನು ಗ್ರಾಮೀಣ ಕ್ರೀಡೆ ಎಂತಲೂ ಜನಪದಕ್ರೀಡೆ ಎಂತಲೂ ಗುರುತಿಸುತ್ತಾ ಬಂದಿದ್ದಾರೆ. ಹಾಗೂ ಈ ಮದಾರಿಗಳು ಅಂದು ಕರಡಿಯಾಡಿಸಬೇಕೆಂದರೆ ಆಗಿನ ಕಾಲದಲ್ಲಿ ಪ್ರತಿಯೊಂದು ಪ್ರಾಂತ ಅಥವಾ ಸಂಸ್ಥಾನಕ್ಕೆ ಒಬ್ಬ ಉತ್ತರಾಧಿಕಾರಿ ಅಥವಾ ಪಾಳೇಗಾರರಿರುತ್ತಿದ್ದರು. ಅವರ ಅನುಮತಿ ಪಡೆದು ಸಂಸ್ಥಾನದೊಳಗೆ ಪ್ರವೇಶ ಪಡೆಯುತ್ತಿದ್ದರು. ಗೌಡರು ಶ್ಯಾನುಭೋಗರು ಪಟೇಲರು ಕೂಡ ಪ್ರಮುಖ ಪಾತ್ರ ವಹಿಸುತ್ತಿದ್ದರು. ಇವರೆಲ್ಲರ ಅನುಮತಿಯನ್ನು ಮದಾರಿಗಳು ಪಡೆಯಬೇಕಾಗಿತ್ತು. ಅನುಮತಿ ಪಡೆದ ಈ ಮದಾರಿಗಳು ಆ ಪ್ರದೇಶದೊಳಗೆ ಕರಡಿ ಆಡಿಸುತ್ತಿದ್ದರು. ಅಲ್ಲಿಯೇ ೨-೩ ದಿನ ವಾಸ್ತವ್ಯ ಹೂಡುತ್ತಿದ್ದರು. ಲಾಗಹಾಕುವುದು, ಮನುಷ್ಯನೊಡನೆ ಕುಸ್ತಿಯಾಡಿಸುವುದು ಸಲಾಂ ಮಾಡಿಸುವುದು, ಇತ್ಯಾದಿ ಕಲೆಗಳನ್ನು ಕರಡಿಯಿಂದ ಮಾಡಿಸುತ್ತಿದ್ದರು. ಜನರನ್ನು ಮನರಂಜಿಸುತ್ತಿದ್ದರು. ಪ್ರದರ್ಶಿಸಿದ ನಂತರ ಅಂದು ಜನರು ತಾಮ್ರದ ಬಿಲ್ಲೆ ಅಥವಾ ಮನೆಯಲ್ಲಿರುತ್ತಿದ್ದ ದವಸಧಾನ್ಯವನ್ನು ಕೊಡುತ್ತಿದ್ದರು. ಒಂದು ವೇಳೆ ಏನು ಕೊಡದಿದ್ದಾಗ ಕರಡಿಯ ಮಲವನ್ನು ಮನೆಯ ಮುಂದೆ ಮಾಡಿಸುತ್ತೇವೆ ಎಂದು ಬೆದರಿಸುತ್ತಿದ್ದದ್ದು ಉಂಟು. ಹೀಗೆ ಈ ರೀತಿ ಮಾಡುವುದರ ಮೂಲಕ ತಮ್ಮ ಹೊಟ್ಟೆ ತುಂಬಿಸಿಕೊಳ್ಳುತ್ತಿದ್ದರು.

ಕರಡಿ ಸಾಕುವುದು

ಪ್ರಾಣಿಗಳಿಗೂ ಮನುಷ್ಯನಿಗೂ ನಿಕಟ ಸಂಬಂಧವಿದೆ. ಇದಕ್ಕೆ ಕೇವಲ ಮಾನವೀಯತೆಯೇ ಕಾರಣದಲ್ಲಿ ಆತನ ವೈಯಕ್ತಿಕ ಮತ್ತು ಸಾಮೂಹಿಕ ಹಿತಾಶಕ್ತಿಗಳೂ ಕಾರಣವಾಗಿವೆ. ಹೀಗಾಗಿ ಮನುಷ್ಯ ಪ್ರಾಣಿಗಳನ್ನು ಪಳಗಿಸಿಕೊಂಡಿದ್ದು ಪ್ರಾಣಿಗಳೂ ಮನುಷ್ಯನನ್ನು ಅವಲಂಬಿಸಿದ್ದು ಫರಸ್ಪರ ಪೂರಕವಾಗಿರುವುದು ಮೇಲು ನೋಟಕ್ಕೆ ಕಂಡುಬರುತ್ತದೆ. ಆದರೆ ಸೂಕ್ಷ್ಮವಾಗಿ ಗಮನಿಸಿದಾಗ ಮನುಷ್ಯರು ಪ್ರಾಣಿಗಳ ಮೇಲೆ ಅವಲಂಬಿಸಿದ್ದಾರೆಯೋ ಅಥವಾ ಪ್ರಾಣಿಗಳು ಮನುಷ್ಯರ ಮೇಲೆ ಅವಲಂಬಿಸಿವೆಯೋ ಎಂಬುದನ್ನು ನಿರ್ಧರಿಸಲಿಕ್ಕಾಗದಂತೆ ಸಂಕೀರ್ಣವಾಗಿ ಹೋಗಿದೆ. ಇದಕ್ಕೆ ಕಾರಣ ಸಂಪ್ರದಾಯ ಮತ್ತು ವೃತ್ತಿಗಳು.

''ಪ್ರಾಣಿಗಳ ಸಹಜೀವನದೊಡನೆ ಜನಪದ ಬದುಕು ಸಾಗುತ್ತದೆ. ಅವರ ಜೀವನ ಸಂಗಾತಿಗಳಾಗಿ ಪ್ರಾಣಿಗಳು ಎಲ್ಲಾ ಕಾರ್ಯವನ್ನು ಪೂರೈಸುತ್ತಿವೆ. ಪ್ರಾಣಿಗಳಿಗೂ ತಮ್ಮದೆ ಆದ ಭಾಷೆ ಸಂಕೇತಗಳಿವೆ ಎಂದು ಹಳ್ಳಿಗರು ಅರ್ಥೈಸಿ ಕೊಂಡಿದ್ದಾರೆ. ಮಾನವ ಜನಾಂಗವಿರುವ ಎಲ್ಲಾ ಕಡೆಯಲ್ಲಿಯೂ ಪ್ರಾಣಿಗಳು ಕಂಡುಬರುತ್ತವೆ. ಪ್ರಾಣಿಗಳು ಎಲ್ಲಾ ಜನಾಂಗದ ಸಂಸ್ಕೃತಿಯಲ್ಲಿಯೂ ಹುದುಗಿದ್ದು ಅದರ ಪ್ರತಿನಿಧಿಯಂತಿವೆ. ಅವುಗಳ ಸಹಕಾರವಿರದಿದ್ದರೆ ಮಾನವನ ಬದುಕು ಅಪೂರ್ಣವಾಗುತ್ತಿತ್ತು ಎಂದೆನಿಸುತ್ತದೆ''

''ಆದಿವಾಸಿಗಳ ಕಾಲದಿಂದಲೇ ಪ್ರಾಣಿಗಳ ಒಡನಾಟ ಬೆಳೆದುಕೊಂಡು ಬಂದಂತಿದೆ . ಆದಿವಾಸಿಯ ಜೀವನದ ಮೇಲೆ ಪ್ರಭಾವ ಬೀರಿದ ಅತ್ಯಂತ ದೊಡ್ಡ ಶಕ್ತಿಗಳಲ್ಲಿ ಪ್ರಕೃತಿಪ್ರಧಾನವಾದುದರಿಂದ ಇಂತಹ ಪ್ರತಿಕ್ರಿಯೆ ಪ್ರತೀಕಗಳಾಗಿ ಪ್ರಾಣಿಕಡೆಗಳು ಸೃಷ್ಟಿಯಾಗಿರಬೇಕು. ಹಸು, ಕುದುರೆ, ನರಿ, ಕರಡಿ, ತೋಳ ಮೊಲ, ಸಿಂಹ ಚಿರತೆ ಹುಲಿ ಮುಂತಾದ ಪ್ರಾಣಿಗಳು ಕಥೆಗಳಲ್ಲಿ ಪಾತ್ರವಹಿಸುತ್ತವೆ. ದುಷ್ಟ ಪ್ರಾಣಿಗಳು ಸಾತ್ವಿಕ ನಡತೆಗೆ ತಲೆಬಾಗಿ ತಮ್ಮ ಹಿಂಸಾಚಾರಬಿಟ್ಟು ಸಾಧುಪ್ರಾಣಿಗಳಾಗಿ ಪರಿವರ್ತನೆ ಹೊಂದುತ್ತವೆ. ಕಥಾನಾಯಕನಿಗೆ ಇಲ್ಲಿನ ಎಲ್ಲ ಪ್ರಾಣಿಗಳು ಸರ್ವವಿಧದಲ್ಲೂ ಸಹಕಾರ ನೀಡಿ ಅವನನ್ನು ಬದುಕಿಸುತ್ತವೆ. ಆಪತ್ಕಾಲದಲ್ಲೂ ಅವನನ್ನು ತಮ್ಮ ಆಶ್ರಯದಲ್ಲಿಟ್ಟು ಬೆಳೆಸುತ್ತವೆ. ಒಂದುಪ್ರಾಣಿ ಇನ್ನೊಂದು ಪ್ರಾಣಿಯಲ್ಲಿ ಬಂದು ಪ್ರೇಮ ಹಾಗೂ ವಾತ್ಸಲ್ಯ ಭಾವ ತೋರುತ್ತದೆ. ಮಾನವನ ಸಾಂಸ್ಕೃತಿಕ ವಿಕಾಸಕ್ಕೆ ಪ್ರಾಣಿಗಳ ಸಾಂಕೇತಿಕ ಬಳಕೆ ಇಲ್ಲಿ ಫಲಕಾರಿಯಾಗಿದೆ. ಪ್ರಾಣಿಗಳ ನಡೆತೆಯಿಂದಾದರೂ ನಮ್ಮ ದುರ್ಗುಣ ಕಳೆದು ಸದ್ಗುಣಗಳು ಬೆಳೆಯಲಿ ಎನ್ನುವ ಸದುದ್ದೇಶವೂ ಇವುಗಳ ಸಂಕೇತಕ್ಕೆ ಕಾರಣವಾದಂತಿದೆ.''

ಮದಾರಿಗಳು ಕರಡಿ ಸಾಕುವಿಕೆಯಲ್ಲಿ ಬಹಳ ನಿಪುಣರಾಗಿದ್ದಾರೆ. ತಮ್ಮ ಹಿರಿಯರಿಂದ ಕಲಿತ ಪಾಠವನ್ನು ಕರಡಿಗೆ ಕಲಿಸಿಕೊಂಡು ಬಂದಿದ್ದಾರೆ. ಕರಡಿಯನ್ನು ಸಾಕುವುದೆಂದರೆ ನಾಯಿ ಬೆಕ್ಕು ಸಾಕುವಂತೆ ಅಲ್ಲ ಇಂತಹ ದೊಡ್ಡಗಾತ್ರದ ಪ್ರಾಣಿ ಮಾನವನ ಕೈಗೆ ಸುಲಭವಾಗಿ ನಿಯಂತ್ರಣಕ್ಕೆ ಬರಲಾರದು. ಇಂತಹ ಪ್ರಾಣಿಯನ್ನು ಮದಾರಿಗಳು ಮರಿಯಿದ್ದಾಗಲೇ ಹಿಡಿದುತರುತ್ತಾರೆ. ಇಂತಹ ಮರಿಯನ್ನು ತಾಯಿ ಕರಡಿಯ ಕಣ್ಣುತಪ್ಪಿಸಿ ಹಿಡಿದು ತರುವುದು ಬಹಳ ಕಷ್ಟದ ಕೆಲಸ ಅದು ವಾಸಿಸುವ ಜಾಗವನ್ನು ಮೊದಲು ಪತ್ತೆಹಚ್ಚುತ್ತಾರೆ. ನಂತರ ಕೆಲವು ದಿನಗಳಾದ ನಂತರ ಅದು ಮರಿಹಾಕುವ ಸಮಯವನ್ನು ಖಾತರಿಪಡಿಸಿಕೊಂಡು ಮರಿ ಹಾಕಿದ ಕೆಲವು ದಿನಗಳಾದ ನಂತರ ಹೋಗಿ ಕರಡಿ ಇಲ್ಲದ ಸಮಯದಲ್ಲಿ ಹೋಗಿ ಕೈಗೆ ಸಿಕ್ಕಷ್ಟು ಮರಿಗಳನ್ನು ಹಿಡಿದು ಕರಡಿಗೆ ಗೊತ್ತಾಗದಂತೆ ತರುತ್ತಾರೆ. ಕರಡಿಯು ಸೂಕ್ಷ್ಮವಾದ ವಾಸನೆಯನ್ನು ಬೇಗ ಗ್ರಹಿಸುವ ಪ್ರಾಣಿ ಹೀಗಾಗಿ ಕರಡಿ ಹೋದ ದಿಕ್ಕನ್ನು ಬಿಟ್ಟು ವಿರುದ್ಧ ದಿಕ್ಕಿನಿಂದ ಇವರು ಹೋಗುತ್ತಾರೆ. ತಾಯಿಯಿಂದ ಬೇರ್ಪಟ್ಟ ಮರಿಯನ್ನು ಮನೆಗೆ ತಂದು ಅದಕ್ಕೆ ಬೇಕಾದ ಆಹಾರ ಎಂದರೆ ಹಾಲನ್ನು (ಮಗುವಿಗೆ ಕೊಡುವ ನಿಪ್ಪಲ್) ನಿಪ್ಪಲಿನಿಂದ ಹಾಲು ಕುಡಿಸುತ್ತಾರೆ ಹೀಗೆ ೫ ವರ್ಷದ ವರೆಗೆ ಹಾಲನ್ನು ಕುಡಿಸಿ ರೂಢಿಮಾಡುತ್ತಾರೆ. ನಂತರ ೫ ವರ್ಷವಾದ ಮೇಲೆ ಕರಡಿಗೆ ಪ್ರತಿದಿನ ೩ ಲೀಟರ್ ಹಾಲು, ಕೆ.ಜಿ.ಗಟ್ಟಲೆ ಹಣ್ಣು, ಗಂಜಿ, ಕಾಳುಕಡಿ, ಪುಡಿ, ಕೊಡಬೇಕು. ಇಷ್ಟು ಮಾಡಿ ಕೊಡಲು ದಿನಕ್ಕೆ ೬೦-೭೦ ರೂಪಾಯಿ ಖರ್ಚು ಮಾಡುತ್ತಾರೆ. ಹೀಗೆ ಮಕ್ಕಳಂತೆ ಬೆಳೆಸುವರು ತಮ್ಮ ಮಕ್ಕಳು ಹೇಗೂ ಹಾಗೆ ಕರಡಿಯನ್ನು ಮಗನಂತೆ ನೋಡುತ್ತಾರೆ. ಜೊತೆಗೆ ಇಂತಹ ಮಗನು ದೇವರ ಸಮಾನ ಎಂಬ ಭಾವನೆಯನ್ನು ಹೊಂದಿರುವರು ದಿನಕ್ಕೆ ಒಂದು ಬಾರಿ ಈ ದೇವರನ್ನು ಮನದಲ್ಲಿಯೇ ನೆನಸಿಕೊಳ್ಳುತ್ತಾರೆ. ಈ ಕರಡಿಯನ್ನು ನಂಬಿಕೊಂಡು ೩-೪ ಕುಟುಂಬಗಳು ಜೀವನಸಾಗಿಸುತ್ತವೆ. ಕರಡಿಯ ಬೇಕು ಬೇಡಿಕೆಗಳನ್ನು ಇವರು ತಿಳಿದಿರುತ್ತಾರೆ. ಆಯಾ ಕಾಲ, ಸಂದರ್ಭಗಳಲ್ಲಿ ಅದರ ಕೆಲವು ಸೂಕ್ಷ್ಮತೆಗಳನ್ನು ಬೇಗನೆ ತಿಳಿಯುವರು. ಕೆಲವು ಸಂದರ್ಭದಲ್ಲಿ ರೋಗವೇನಾದರೂ ಬಂದಾಗ ಆ ರೋಗಕ್ಕೆ ತಮ್ಮ ಹತ್ತಿರದಲ್ಲಿರುವ ಗಿಡ ಸಸ್ಯಗಳಿಂದ ತಯಾರಾದ ಗಿಡಮೂಲಿಕೆ ಔಷಧಿಯನ್ನು ಕೊಟ್ಟು ರೋಗಗುಣ ಪಡಿಸುತ್ತಾರೆ.

ರಾತ್ರಿ ಮಲಗುವ ವೇಳೆ ಮದಾರಿಗಳು ತಾವು ಹಾಸಿಕೊಳ್ಳುವ ಹಾಸಿಗೆಯ ಮೇಲೆ ಕರಡಿಯನ್ನು ಮಲಗಿಸುತ್ತಾರೆ. ಕಾರಣ ರಾತ್ರಿ ವೇಳೆ ನಾಯಿ ಮತ್ತಿತರ ಪ್ರಾಣಿಗಳು ಕರಡಿಯ ಬಳಿಗೆ ಬಾರದಿರಲೆಂದು ತಮ್ಮ ಹತ್ತಿರ ಕರಡಿಯ ಸುತ್ತ ಮಲಗುತ್ತಾರೆ. ಕರಡಿ ಮಲಮೂತ್ರ ಮಾಡಿದಾಗ ಆ ಹಾಸಿಗೆಯನ್ನು ಸ್ವಚ್ಛಗೊಳಿಸುತ್ತಾರೆ. ಹೀಗೆ ಕರಡಿಯನ್ನು ಬಹಳ ಸೂಕ್ಷ್ಮವಾದ ರೀತಿಯಿಂದ ಪೋಷಣೆ ಮಾಡುತ್ತಾರೆ.

ಕರಡಿಯ ಆರೋಗ್ಯದಲ್ಲಿ ಏರು ಪೇರಾದಾಗ ಇಂದಿನ ಪಶುವೈದ್ಯರ ಹತ್ತಿರ ತಾವು ಹೋಗುವುದಿಲ್ಲ. ಅವರ ಸೂಜಿ, ಗುಳಿಗೆಗಳು ಪರಿಣಾಮ ಬೀರುವುದಿಲ್ಲ ಇಂದಿನ ವೈದ್ಯರ ಔಷಧಿಯಿಂದ ಕರಡಿಗೆ ಮತ್ತಷ್ಟು ಖಾಯಿಲೆಗಳು ಉಲ್ಬಣಗೊಳ್ಳುತ್ತವೆ ಎಂದು ಪ್ರತಿಕ್ರಿಯಿಸಿದರು.

ವೈಲ್ಡ್ ಲೈಪ್ ರವರು ಹಿಡಿದ ಕರಡಿಗಳು ಇಂದು ಸುಖವಾಗಿಲ್ಲ ಅವುಗಳನ್ನು ಸೆರಮನೆಯಲ್ಲಿಟ್ಟಂತಾಗಿದೆ ಸರಿಯಾದ ವೇಳೆಗೆ ಸರಿಯಾದ ಆಹಾರ ಪೋಷಣೆ ಸಿಗುತ್ತಿಲ್ಲ ಅಲ್ಲಿ ಕೆಲಸ ಮಾಡುವವರು ಸರಿಯಾದ ಸಂಬಳ ತೆಗೆದುಕೊಳ್ಳುತ್ತಾರೆ ಆದರೆ ಕರಡಿಗೆ ಮಾತ್ರ ಸರಿಯಾಗಿ ನೋಡಿಕೊಳ್ಳುತ್ತಿಲ್ಲ ಅವರು ಕೊಡುವ ಬ್ರೆಡ್ಡು ಬಿಸ್ಕತ್ ಬಾಳೆಹಣ್ಣನ್ನು ಹಾಲಿನೊಳಗೆ ತಿನ್ನಿಸುತ್ತಾರೆ. ಅದು ಕರಡಿಯ ಒಳ್ಳೆಯ ಆಹಾರವಲ್ಲ ಅದನ್ನು ತಿಂದ ಕರಡಿಯು ಖಾಯಿಲೆ ರೋಗಕ್ಕೀಡಾಗುವುದು ನಮ್ಮ ಹತ್ತಿರವಿರುವ ಕರಡಿ ಹಾಗೂ ವನ್ಯಧಾಮದಲ್ಲಿಯ ಕರಡಿಯನ್ನು ಪರೀಕ್ಷಿಸಿ ನೋಡಿ ತೂಕದಲ್ಲಿ ಬದಲಾವಣೆ ತಿಳಿಯುವುದು. ನಮ್ಮ ಕೈಯಲ್ಲಿಯ ಕರಡಿಯು ೪೦ ರಿಂದ ೪೫ ವರ್ಷಗಳವರೆಗೆ ಬದುಕಿರುತ್ತದೆ. ಆದರೆ ವನ್ಯಧಾಮದ ಕರಡಿ ಬೇಗನೆ ಸಾಯುತ್ತವೆ. ಎಂದು ಮಾಬುಸಾಬ್ ಕರಡಿ ಹೇಳುತ್ತಾರೆ. ತಾವೂ ಕರಡಿಗೆ ಪ್ರಿಯವಾದ ಆಹಾರವಾದ ಹುತ್ತದೊಳಗಿನ ಗೆದ್ದಲು, ಇರುವೆ, ಜೇನು ತುಪ್ಪ, ದಂತಹ ಇನ್ನಿತರಗಳನ್ನು ತಿನ್ನಿಸುತ್ತೇವೆ ಸಂಸ್ಥೆಯವರು ತಿನ್ನಿಸುವುದಿಲ್ಲ ಹೀಗೆ ಅವರ ಕೈಯಲ್ಲಿ ಕರಡಿ ಬಹಳ ದಿನ ಬದುಕಲಾರವು ಎಂದು ಬಹಳ ವಿಷಾದದಿಂದ ದುಃಖ ತೋಡಿಕೊಂಡರು. ಕರಡಿಯ ಎಲ್ಲಾ ಸ್ವಾತಂತ್ರವನ್ನು ಕಳೆದುಕೊಂಡು ಸೊರಗಿ ಹೋಗಿದೆ ಎಂದು ದುಃಖಿಸುತ್ತಾರೆ.

ಕರಡಿಗೆ ಕಾಯಿಲೆ ಬಂದಾಗ ಕೊಡುವ ಗಿಡಮೂಲಿಕೆ ಔಷದ

ಹುಚ್ಚುನಾಯಿ ಕಡಿದಾಗ

ಕರಡಿಗೆ ಹುಚ್ಚುನಾಯಿ ಕಡಿದಂತಹ ಸಂದರ್ಭದಲ್ಲಿ ತೊಗರಿಗಿಡದ ಮೇಲೆ ಕುಳಿತ ಒಂದು ಜಾತಿ ಹುಳು ಗಿಡದ ಎಲೆ ಮೇಲೆ ಮಾಡಿದ ಮಲವನ್ನು ತಂದು ಬೆಲ್ಲದಲ್ಲಿ ಬೆರೆಸಿ ಅದನ್ನು ರಸ ಮಾಡಿ ಕುಡಿಸಿದಾಗ ಖಾಯಿಲೆ ವಾಸಿಯಾಗುತ್ತದೆ.

ಜ್ವರ ಬಂದಾಗ

ಜ್ವರ ಬಂದಂತ ಸಂದರ್ಭದಲ್ಲಿ ಕಾಲಿಗಿಡದ ಬೇರು, ಹಣ್ಣಿಗಿಡದ ಬೇರು, ತುಳಸಿ ಬೇರು, ಮೆಣಸು, ಬಳ್ಳುಳ್ಳಿ, ಕೆಂಪು ಜೋಳದ ಕಾಳುನ್ನೆಲ್ಲಾ ಅರೆದು ರಸ ಮಾಡಿ ಆ ರಸವನ್ನು ಕರಡಿ ಮೂಗಿನೊಳಗೆ ಹಿಂಡುತ್ತಾರೆ. ಹೀಗೆ ಮಾಡಿದಾಗ ಜ್ವರವು ವಾಸಿಯಾಗುತ್ತದೆ.

ಕೆಮ್ಮು ಬಂದಾಗ

ಕೆಮ್ಮುಬಂದಾಗ ಬೆಣಚುಕಲ್ಲನ್ನು ತಂದು ಸುಡುವ ಬಲೆಯೊಳಗೆ ಹಾಕಿ ಕೆಂಪುಬಣ್ಣಕ್ಕೆ ಕಲ್ಲು ತಿರುಗಿದ ಮೇಲೆ ಅದನ್ನು ಸುಡುವ ೧ಲೀಡರ್ ಹಾಲಿನೊಳಗೆ ೩ ದಿನ ಹಾಕಿ ಇಡುತ್ತಾರೆ. ನಂತರ ಆ ರಸವನ್ನು ಕರಡಿಗೆ ಕುಡಿಸಿದರೆ ಕೆಮ್ಮು ವಾಸಿಯಾಗುವುದು.

ಭೇದಿ ಆದಾಗ

ಕರಡಿಗೆ ಭೇದಿಯಾದಾಗ ಆಕಳಿನ ಮೂತ್ರವನ್ನು ತಂದು ಆ ಮೂತ್ರವನ್ನು ಕೈಯಲ್ಲಿ ಒಂದು ಇಡಿಯಷ್ಟು ಮೂತ್ರವನ್ನು ಅದರ ದೇಹದ ಭಾಗಕ್ಕೆಲ್ಲಾ ಒರೆಸಿದರೆ ಭೇದಿ ನಿಲ್ಲುತ್ತದೆ.

ಹಸಿವು ಆಗದಿದ್ದಾಗ

ಕರಡಿಗೆ ಹಸಿವೆ ಆಗದಿದ್ದಾಗ ಮದಾರಿಗಳಿಗೆ ಚಿಂತೆ ಬರುತ್ತದೆ. ಯಾಕೆ ತಿನ್ನುತ್ತಿಲ್ಲ ಎಂಬ ಚಿಂತೆ ಬಂದಾಗ ಆಗ ಅದಕ್ಕೆ ಹಸಿವು ಆಗಲು ೨ ಲೀಟರ್ ಹಾಲನ್ನು ತಂದು ಕೆಂಪು ಬಣ್ಣ ಬರುವಂತೆ ಕಾಯಿಸಿ ಅಕ್ಕಿಯ ನುಚ್ಚಿನಲ್ಲಿ ಹಾಲನ್ನು ಬೆರೆಸಿ ಸಣ್ಣ ಸಣ್ಣ ಉಂಡೆಗಳನ್ನಾಗಿ ಮಾಡಿ ಆ ಹುಂಡೆಯನ್ನು ತಿನ್ನಿಸುತ್ತಾರೆ.

ಕರಡಿಗೆ ಕಾಯಿಲೆಯು ಮುಖ್ಯವಾಗಿ ಬೇಸಿಗೆಯ ದಿನಗಳಲ್ಲಿ ಬರುವುದು. ಏಕೆಂದರೆ ಅದಕ್ಕೆ ಹೆಚ್ಚು ನೀರು ಬೇಕು. ಅದು ಹೆಚ್ಚು ಉಷ್ಣಾಂಶವುಳ್ಳ ಪ್ರಾಣಿಯಾದ್ದರಿಂದ ಹೀಗೆ ಇದಕ್ಕೆ ನೀರು ಹೆಚ್ಚು ಸಿಗದಿದ್ದಾಗ ಖಾಯಿಲೆ ಬರುತ್ತದೆ. ಬಿಸಿಲಿಗೆ ಹೆಚ್ಚು ಮೈಯನ್ನು ಕೊಡುವಂತಿಲ್ಲ ಎನ್ನುತ್ತಾರೆ ಈ ಜನಾಂಗದ ಸದಸ್ಯರು.

ಕರಡಿ ಪಳಗಿಸುವುದು

ಕರಡಿಯನ್ನು ಮರಿ ಇರುವಾಗಲೇ ಸಾಕಿಕೊಂಡು ಬರುತ್ತಾರೆ. ಅದರ ಜೊತೆ ಜೊತೆಗೆ ಅದಕ್ಕೆ ತಮ್ಮ ವೃತ್ತಿ ಭಾಷೆಯನ್ನು ಕಲಿಸುತ್ತಾರೆ. ಅದರ ಕೈಗೆ ಕೋಲನ್ನು ಕೊಟ್ಟು ಕೆಲವು ಪದಗಳನ್ನು ಬಳಸಿ ಆ ಪದಗಳಿಗೆ ತಕ್ಕಂತೆ ಕರಡಿಯನ್ನು ಕುಣಿಸುವುದು, ಲಾಗಹಾಕುವುದು, ಕೈ, ತಲೆ, ಹಣೆಯ ಮೂಲಕ ಮಾಡಬಹುದಾದ ಕಲೆಗಳನ್ನು ಬಿಡಿದು ತರಬೇತಿಗೊಳಿಸುತ್ತಾರೆ. ಮದಾರಿಗಳು ತಮ್ಮ ಮಕ್ಕಳಿಗೆ ಇನ್ನೂ ಚಿಕ್ಕವರಿದ್ದಾಗಿನಿಂದಲೇ ಈ ಕಲೆಯ ಪರಿಚಯ ಮಾಡಿಕೊಡುತ್ತಾರೆ. ತಾವು ಹೋದ ಕಡೆಯಲೆಲ್ಲಾ ಮಕ್ಕಳನ್ನು ಜೊತೆಗೆ ಕರೆದುಕೊಂಡು ಹೋಗುವರು. ಅನುಕರಣೆ, ಅನುಭವ ಎದ್ದು ಕಾಣುತ್ತದೆ. ಮೂಕ ಪ್ರಾಣಿಗಳಿಗೆ ತರಬೇತಿ ಕೊಡುವ ಕಾರ್ಯ ಎಲ್ಲರಿಂದಲೂ ಸಾಧ್ಯವಿಲ್ಲ. ಕರಡಿಯು ಇವರಲ್ಲಿ ಶಿಕ್ಷಣ ಹೊಂದುವುದಕ್ಕೆ ೧ ವರ್ಷವಾದರೂ ಬೇಕು. ಎಂದು ಇವರು ಹೇಳುತ್ತಾರೆ. ಆಗಾಗೆ ಸಂಜ್ಞೆಗಳನ್ನು ಬಡಿದು ಕಲಿಸುವರು.

''ಕರಡಿಯು ಮೂಕ ಪ್ರಾಣಿ, ಸಾಧು ಪ್ರಾಣಿ, ಸೂತ್ರಧಾರ ಆಡಿಸಿದಂತೆ ಕುಣಿಸಿದಂತೆ ಆಡುತ್ತದೆ. ಕುಣಿಯುತ್ತದೆ. ಅದಕ್ಕೆ ತಕ್ಕಂತೆ ತಾಳ ಹಾಕುತ್ತದೆ. ಹೀಗೆಯೇ ಮನುಷ್ಯನು ಕೂಡ ತಪ್ಪು ಮಾಡಿದಾಗ ಕರಡಿಕೈಗೆ ಕೊಡ್ತಿನಿ ಎನ್ನುವ ಮಾತುಗಳು ಕೂಡ ಕರಡಿಯಾಟದ ಚಿತ್ರವನ್ನು ಕಣ್ಮುಂದೆ ತಂದು ನಿಲ್ಲಿಸುತ್ತದೆ.

"ಮನುಷ್ಯ ಎಂದಿಂದೊ ಕವಲೆತ್ತು ಕೊಡಗೆ
ತನಗಾಗಿ ಕುಣಿಸುತ್ತ ನಡೆದಾನ
ಕರಡಿ ಕುಣಿತಕ್ಕಿಂತ ನರರ ಬುದ್ಧಿಯ ಕುಣಿತ
ಮಿಗಿಲ ಹುದು ಕವಿಕಂಡು ನುಡಿದಾನ"

ಎಂದು ಬೇಂದ್ರೆಯವರು ಕರಡಿ, ಕವಲೆತ್ತು ಮಂಗದಂತಹ ಪ್ರಾಣಿಗಳನ್ನು ಮಾನವ ತನ್ನ ಹೊಟ್ಟೆಯ ಪಾಡಿಗಾಗಿ ಪ್ರಾಚೀನ ಕಾಲದಿಂದಲೂ ಕುಣಿಸುತ್ತ ಬಂದಿದ್ದಾನೆಂದು ಹೇಳಿ ಮನುಷ್ಯನ ಬುದ್ಧಿಯ ಕುಣಿತವು ಈ ಮೂಲಕ ಪ್ರಾಣಿಗಳ ಕುಣಿತಕ್ಕೂ ಮಿಗಿಲಾದದ್ದು ಎಂದು ವರ್ಣಿಸಿದ್ದಾರೆ."

"ಮನೆಬಲ್ಲ ಮಾನವ ಕುಣಿದಾನ ಕುಣಿಸ್ಯಾನ
ಪ್ರಾಣದ ಈ ಪ್ರಾಣಿ ಹಿಂದಾನ".

ಎಂದಂತೆ ಕರಡಿ ಆಡಿಸುತ್ತ ಹೊಟ್ಟೆ ಹೊರೆದುಕೊಳ್ಳುವ ಮದಾರಿಗಳು ತಾವು ಮಾತುಗಾರಿಕೆಯಿಂದ ಜನರನ್ನು ಆಕರ್ಷಿಸಿ ಪ್ರಾಣಿಗಳನ್ನು ಸೊಗಸಾಗಿ ಕುಣಿಸುವ ಶ್ರೀಸಾಮಾನ್ಯ ಕಲಾವಂತರೆನಿಸಿದ್ದಾರೆ.

ಕರಡಿಗೆ ಕಲಿಸುವ ಕೆಲವು ಕೌಶಲ್ಯಗಳು

ಸಲಾಂ ಕೊಡುವುದು

ಸಾರ್ವಜನಿಕ ಜಾಗಗಳು ಅಂದರೆ ಬಸ್‌ಸ್ಟ್ಯಾಂಡ್, ಮಾರುಕಟ್ಟೆ, ಸಿನಿಮಾ ಮಂದಿರದಂತಹ ಸ್ಥಳದಲ್ಲಿ ಇವರು ಪ್ರದರ್ಶನ ಕೊಡುತ್ತಾರೆ. ಆಗ ಸುತ್ತವರೆದ ಜನಕ್ಕೆ ಕರಡಿಯಾಡಿಸುವವನು ಕರಡಿಗೆ ಸಾಪ್ಕಾರ್‌ಗೆ ಹೊಡಿಲೇ ರಾಮ್ಯ... ನಮಸ್ಕಾರ್ ಅಂದ್ರೆ ಎರಡು ಕೈ ಮೇಲೆತ್ತಿ ಬಾಯಿ ತೆಗೆದು ನಿಲ್ಲುತ್ತದೆ. ನಮಸ್ಕಾರ್ ಮಾಡು ಮಕ್ಕಳು, ಮರಿ, ಅಪ್ಪ, ಅಮ್ಮರಿರಗೆ, ನಮಸ್ಕಾರ್ ಮಾಡುತ್ತದೆ.

ಗೌಡರು-ಬೀಗರು

ಗೌಡರು ತಮ್ಮ ಮಗನಿಗೆ ವಧು ನೋಡಲು ಬೀಗರ ಮನೆಗೆ ಹೋಗುವ ದೃಶ್ಯವನ್ನು ಕರಡಿಯ ಕೈಯಲ್ಲಿ ಕೋಲು ಕೊಟ್ಟಾಗ ಅದು ಒಂದು ಕೈಲಿ ಕೋಲು ಹಿಡಿದು ನೇರವಾಗಿ ನಿಂತು ಹೋಗುವ ದೃಶ್ಯವನ್ನು ತೋರಿಸುತ್ತದೆ.

ತವರು ಮನೆಗೆ ಹೋಗುವುದು

ಹೆಣ್ಣಿನ ಬದುಕಿನ ಅವಳ ಅಂತರಂಗದ ತುಡಿತವನ್ನು ಕೂಡ ಈ ಮದಾರಿಗಳು ಕರಡಿಗೆ ಕಲಿಸಿರುವುದು ತುಂಬಾ ವೈಶಿಷ್ಟವೆನಿಸವೆ. ಇಂತಹ ಜನಪದರ ಸಂಬಂಧ ಸಂಪ್ರದಾಯಗಳು ಈ ಪ್ರಾಣಿಯಲ್ಲಿ ಹಿಡಿದಿಟ್ಟಿದ್ದಾರೆ. ಹೆಣ್ಣುಗಂಡನ ಮನೆಗೆ ಹೋಗುವಾಗ ಬಹಳ ನಿಧಾನವಾಗಿ ತಗ್ಗಿಸಿ ಹಣೆಯ ಮೇಲೆ ಕೆಯಿಟ್ಟು ಆಳುವ ದೃಶ್ಯ ಮಾಡಿತೋರಿಸುತ್ತದೆ. ನಂತರ ಅದೇ ಹೆಣ್ಣು ತನ್ನ ತವರು ಮನೆಗೆ ಹೋಗುವಾಗ ಕುಣಿದು ಹೋಗುವ ದೃಶ್ಯವನ್ನು ಜನರು ಸಂತೋಷಗೊಳ್ಳುವಂತೆ ಮಾಡಿ ತೋರಿಸುತ್ತದೆ.

ಅಳಿಯನು ಮಾವನ ಮನೆಗೆ ಹೋಗುವ ಸನ್ನಿವೇಶ

ಹೊಸದಾಗಿ ಮದುವೆಯಾದ ಅಳಿಯನು ತನ್ನ ಹೆಂಡತಿ ನೋಡಲು ಮಾವನ ಮನೆಗೆ ಹೋಗುವ ದೃಶ್ಯವನ್ನು ಕರಡಿಯು ಕಟ್ಟಿಗೆ (ಕೋಲು)ಯನ್ನು ತನ್ನ ಎರಡು ಕಾಲುಗಳ ಮಧ್ಯೆದಲ್ಲಿ ಇಟ್ಟು ಮೋಟಾರ್ ಬೈಕ್‌ನ ಮೇಲೆ ಮನುಷ್ಯ ಕುಳಿತ ಹಾಗೆ ಕೋಲಿನ ಮೇಲೆ ಕುಳಿತ ದೃಶ್ಯವನ್ನು ತುಂಬಾ ರಂಜನೀಯವಾಗಿ ತೋರಿಸುತ್ತದೆ.

ಮದಾರಿಗಳ ವೇಷಭೂಷಣ

ಮದಾರಿ ಖಲಂದರರ ವೇಷಭೂಷಣವು ಇತರೆ ಕಲಾ ಸಮುದಾಯಗಳಿಗಿಂತ ಭಿನ್ನವಾದ ರೀತಿಯನ್ನು ಹೊಂದಿದ್ದಾರೆ. ಹೆಣ್ಣುಮಕ್ಕಳು ಸಾಮಾನ್ಯವಾಗಿ ಎಲ್ಲಾ ಮಹಿಳೆಯರು ಧರಿಸುವ ಸೀರೆ, ಮತ್ತು ಕುಪ್ಪಸವನ್ನು ತೊಡುತ್ತಾರೆ. ಹುಡಗಿಯರು ಅಥವಾ ಹೆಣ್ಣುಮಕ್ಕಳು ಇತ್ತೀಚಿಗಿನ ಚೂಡಿದಾರನ್ನು, ಲಂಗ, ದಾವಣಿಯನ್ನು ಧರಿಸುತ್ತಾರೆ. ಗಂಡಸರು ಇತರೆ ಸಮುದಾಯದವರಿಗಿಂತ ಭಿನ್ನವಾಗಿದ್ದಾರೆ. ಇವರು ದಕ್ಷಿಣ ದೇಶದವರಂತೆ ಒಂದು ಧೋತರೆ ಅಂಗಿ ಕರಿಯ ಅಥವಾ ನೀಲಿ ಕೋಟು ತಲೆಯ ಮೇಲೆ ರೂಮಾಲು ಸುತ್ತಿರುತ್ತಾರೆ. ಈ ಹುಡುಗರು, ತರುಣರು ಇತ್ತೀಚಿನ ಆಧುನಿಕ, ಉಡುಪಗಳಾದ ಜೀನ್ಸ್ ಪ್ಯಾಂಟ್ ಟೀ ಶರ್ಟ್‌ಗಳನ್ನು ಧರಿಸುತ್ತಾರೆ. ಆದರೆ ಜನಾಂಗದ ಹಿರಿಯ ಸದಸ್ಯರು ಮಾತ್ರ ಸಂಪ್ರದಾಯದವರಂತೆ ಕಾಣುತ್ತಾರೆ. ಕರಡಿಯಾಡಿಸಲು ಹೋದಾಗ ಕೈಯಲ್ಲಿ ತಾಮ್ರ ಇಲ್ಲವೆ ಕಬ್ಬಿಣದ ಕಡಗವನ್ನು ಧರಿಸಿರುತ್ತಾರೆ. ತಮ್ಮ ಬಟ್ಟೆ ಬರೆಗಳಿಗಾಗಿ ಇವರು ಪೇಟೆಗೆ ಹೋಗುವುದಿಲ್ಲ. ಊರ ಜನರಿಂದ ಬೇಡಿ ತಂದವುಗಳನ್ನೆ ಮೈಗೆ ಹಳತೆ ಆಗುವಂತೆ ಸರಿಪಡಿಸಿಕೊಂಡು ತೊಟ್ಟುಕೊಳ್ಳುತ್ತಾರೆ. ಕೈಯಲ್ಲಿ ಯಾವಾಗಲೂ ಕೋಲುಇರುತ್ತದೆ. ಇದೊಂದು ಮದಾರಿಗಳ ವೃತ್ತಿಯ ಪ್ರಮುಖ ಸಾಧನ. ಈ ಕೋಲನ್ನು ಯಾವಾಗಲೂ ಕೈಯಲ್ಲಿಟ್ಟುಕೊಂಡಿರುತ್ತಾರೆ. ಈ ಕೋಲು ಕರಡಿ ಪಳಗಿಸುವುದುದಕ್ಕಾಗಿ ಜೊತೆಗೆ ಕೆಲವು ಆಟದ ವಿಧಾನಗಳನ್ನು ಹೇಳಿಕೊಡಲು ಅವಶ್ಯವಾಗಿ ಬೇಕೆ ಬೇಕು. ಇದೊಂದು ಆಟದ ಪ್ರಮುಖ ಸಾಧನ. ಕೈಯಲ್ಲಿಯ ಕಡಗ ಧರಿಸುವಿಕೆಯು ವಿಶೇಷವೆನಿಸಿದೆ. ಈ ಕಡಗ ಧರಿಸುವಿಕೆ ವಂಶಪರಂಪರೆಯ ವೃತ್ತಿ ಪ್ರತೀಕವೆನಿಸಿದೆ ತಮ್ಮ ಹಿರಿಯರಿಂದ ತಮಗೆ ಬಂದದ್ದು ಎನ್ನುತ್ತಾರೆ. ಜೊತೆಗೆ ಈ ಕಡಗ ಧರಿಸುವುದರ ಉದ್ದೇಶ ಕರಡಿಯಾಡಿಸುವಾಗ ಮನೆಯೊಳಗಿರುವ ಸದಸ್ಯರನ್ನು ಆ ಕಡಗದ ಸದ್ದಿನಿಂದ ಅವರ ಗಮನವನ್ನು ತಮ್ಮ ಕಡೆ ಸೆಳೆಯುವುದಕ್ಕಾಗಿ ಎಂದು ಈ ಜನಾಂಗದ ಸದಸ್ಯರೊಬ್ಬರು ಹೇಳುತ್ತಾರೆ.

ಕರಡಿ ಸತ್ತಾಗ ಮಾಡುವ ಆಚರಣೆ

ಮದಾರಿಗಳು ಕರಡಿಯನ್ನು ಜೀವಕ್ಕಂಟಿಸಿಕೊಂಡು ಬಂದವರು. ಅನ್ನವನ್ನು ನೀಡುವ ಅನ್ನದಾತನೆಂತಲೂ ಕುಟುಂಬವನ್ನು ಸಾಕುವ ದೇವರೆಂತಲೂ, ಎಂಬ ಗಾಢನಂಬಿಕೆಯನ್ನಿಟ್ಟುಕೊಂಡು ಬಂದವರಾಗಿದ್ದಾರೆ. ಮನುಷ್ಯರಿಗೆ ಕೊಡುವ ಅಥವಾ ಅವನ ಮೇಲೆ ಇಡುವ ವಿಶ್ವಾಸದ ಎರಡರಷ್ಟು ಭಾಗವನ್ನು ಈ ಕರಡಿಯ ಮೇಲಿಟ್ಟಿರುವರು ಮನೆಯೊಳಗಿನ ಮಕ್ಕಳಿಂದಿಡುದು ವಯಸ್ಸಾದ ವೃದ್ಧ ಕುಟುಂಬವನ್ನು ಅನ್ನ ಹಾಕಿದ ಒಡೆಯ

ಜೊತೆಗೆ ಮನೆಯೊಳಗಿನ ಹೆಣ್ಣುಮಕ್ಕಳ ಮದುವೆ ಮಾಡಲು ಬೇಕಾಗುವ ಖರ್ಚನ್ನು ನಿಭಾಯಿಸುವುದು. ಇದೇ ಕರಡಿ ಎಂಬುದು ನನ್ನ ಸಂಶೋಧನೆಯಿಂದ ತಿಳಿಯಿತು. ಹೇಗೆ ಅದರ ಅನ್ನವನ್ನು ಉಂಡಿರುವೆವೊ ಹಾಗೆಯೇ ಕರಡಿಸತ್ತಾಗ ಅದಕ್ಕೆ ಶಾಸ್ತ್ರೋಕ್ತವಾಗಿ ಮನುಷ್ಯರಿಗೆ ಮಾಡುವ ಹಾಗೆ ಶವಸಂಸ್ಕಾರ ಮಾಡುವೆವು ಎಂದು ಈ ಜನಾಂಗದ ಹಿರಿಯರೊಬ್ಬರು ಹೇಳುತ್ತಾರೆ.

ಕರಡಿ ಸತ್ತದಿನದಂದು ಮನೆಯಲ್ಲಿ ಎಲ್ಲರೂ ಶೋಕ ಆಚರಿಸುತ್ತಾರೆ. ಮನೆ ಮಂದಿಯೆಲ್ಲಾ ದುಃಖದಲ್ಲಿರುತ್ತಾರೆ. ತಮ್ಮನ್ನೆಲ್ಲಾ ಸಾಕುವ ಅಥವಾ ಹೊಟ್ಟೆ ತುಂಬಿಸುವ ಅನ್ನದಾತ ನಮ್ಮನ್ನು ಬಿಟ್ಟುಹೋಯಿತಲ್ಲ ಎಂಬ ಚಿಂತೆಯನ್ನು ಮಾಡುತ್ತಾರೆ. ಸತ್ತದಿನದಂದು ಕರಡಿಯ ಶವದ ಮುಂದೆ ಕುಟುಂಬದ ಸದಸ್ಯರು ಕುಳಿತು ದುಃಖಿಸುವರು. ನಂತರ ಕರಡಿ ಶವ ಹೊತ್ತು ಊರಿನ ಹೊರಭಾಗದಲ್ಲಿ ಬಯಲು ಪ್ರದೇಶದ ತೆರಳಿ ಅಲ್ಲಿ ಮೊದಲೇ ಎರಡರಿಂದ ಮೂರು ಅಡಿ ಆಳಕ್ಕೆ ತೆಗ್ಗು ತೋಡುತ್ತಾರೆ. ಕರಡಿಗೆ ಮನುಷ್ಯನ ದೇಹವನ್ನು ಶೃಂಗರಿಸುವಂತೆ ಹೂವಿನ ಹಾರ ಕೊರಳಿಗೆ ಹಾಕಿ ಹಣೆಯ ಮೇಲೆ ಕುಂಕುಮವಿಟ್ಟು ತೆಂಗಿನಕಾಯಿ ಒಡೆದು ಅದರ ಹಾಲನ್ನು ಎಲ್ಲಾ ದಿಕ್ಕಿಗೂ ಚಿಮುಕಿಸುವರು, ಗಂಧದ ಕಡ್ಡಿಯನ್ನು ಹಚ್ಚುವರು ಈ ಪೂಜೆಕಾರ್ಯವನ್ನು ಕುರುಬರ ವ್ಯಕ್ತಿ (ಪೂಜಾರಿ)ಯಿಂದ ನೆರವೇರಿಸುತ್ತಾರೆ. ಶವವನ್ನು ತೆಗ್ಗಿನೊಳಗಿಟ್ಟು ಅದಕ್ಕೆ ಮಣ್ಣನ್ನು ಹಾಕಿಮುಚ್ಚುವರು. ಇರುವಷ್ಟುದಿನ ತಮಗೆ ಅನ್ನ ನೀಡಿದ ಅನ್ನದಾತ (ಜಾಂಬವಂತ)ನಿಗೆ ಆ ದೇವರು ಒಳ್ಳೆಯದು ಮಾಡಲಿ ಎಂದು ಬೇಡಿಕೊಳ್ಳುವರು.

ಒಂದು ವೇಳೆ ಕರಡಿಯಾಡಿಸುವರು ಬೇರೆ ಊರಿಗೆ ಹೋದ ಸಂದರ್ಭದಲ್ಲಿ ಕರಡಿ ಸತ್ತರೆ ಆ ಊರಿನಲ್ಲಿನ ಆಂಜನೇಯ ದೇವಸ್ಥಾನದ ಪಕ್ಕದ ಜಾಗದಲ್ಲಿ ತೆಗ್ಗು ತೋಡಿ ಮಣ್ಣು ಮಾಡಿಬಿಡುತ್ತಾರೆ. ಏಕೆಂದರೆ ಕರಡಿ (ಜಾಂಬವಂತ) ಹಾಗೂ ಆಂಜನೇಯರಿಬ್ಬರು ಒಂದೇ ವಂಶಸ್ಥರು ಜೊತೆಗೆ ಜಾಂಬವಂತನು ಆಂಜನೇಯನಿಗಿಂತ ಹಿರಿಯನು ಎಂಬ ಅಂಶ ಪೌರಾಣಿಕ ಕಥೆಯಲ್ಲಿ ತಿಳಿದುಬರುತ್ತದೆ. ಕರಡಿ ರಾತ್ರಿ ಸತ್ತಾಗ ಭಜನೆಯನ್ನು ಈ ಸಮುದಾಯವು ಮಾಡುವ ಪದ್ಧತಿ ಉಂಟು.

ಪ್ರಾಣಿ ವೈದ್ಯರುಗಳಾಗಿ ಮದಾರಿಗಳು

ತಮ್ಮೊಳಗಿನ ರೋಗಗಳನ್ನು ಪತ್ತೆ ಹಚ್ಚಿ ಅವುಗಳಿಗೆ ನಿವಾರಣೆಗಳನ್ನು ಕಂಡುಕೊಂಡಂತೆ ತನ್ನೊಂದಿಗೆ ಸಹಜೀವನ ನಡೆಸುವ ತನ್ನ ಬದುಕಿಗೆ ಒಂದು ರೀತಿಯಲ್ಲಿ ಆಧಾರಸ್ತಂಭಗಳಂತಿರುವ ತನ್ನ ಸಾಕುಪ್ರಾಣಿಗಳ ಕುರಿತು ಮಾನವನಿಗೆ ಕಾಳಜಿ ಹೆಚ್ಚು ಮನುಷ್ಯನಿಗೆ ಮಾತನಾಡುವ ಶಕ್ತಿ ಇದೆ. ತನ್ನ ದೇಹದೊಳಗೆ ನಡೆಯುವ ವ್ಯತ್ಯಾಸಗಳನ್ನು (ರೋಗಗಳನ್ನು) ಕುರಿತು ಬಾಯಿಬಿಟ್ಟು ಹೇಳಬಲ್ಲ. ಆದರೆ ಆತನ ಒಡನಾಡಿ ಸಾಕುಪ್ರಾಣಿಗಳಿಗೆ ಮಾತನಾಡಲು ಬಾಯಿಯಿಲ್ಲ. ಅವುಗಳಿಗೆ ಬರುವ ರೋಗಗಳನ್ನು ವೈದ್ಯನು ಪ್ರಾಣಿಗಳ ಬಾಹ್ಯ ಚರ್ಯೆಗಳನ್ನು ಗಮನಿಸಿ ಅದಕ್ಕೆ ಬಂದ ರೋಗ ಎಂತಹದ್ದು ಎಂದು ಗುರುತಿಸಬೇಕಾಗುತ್ತದೆ. ಹೀಗಾಗಿ ಮನುಷ್ಯ ವೈದ್ಯನಿಗಿಂತ ಪ್ರಾಣಿವೈದ್ಯನು ಹೆಚ್ಚು ಸೂಕ್ಷ್ಮನೂ ಸಂವೇದನಶೀಲನು ಆಗಿರುತ್ತಾನೆ. ಪ್ರಾಣಿವೈದ್ಯನಿನ್ನೆ ಮೊನ್ನೆಯದಲ್ಲ ಅದಕ್ಕೆ ಅದರದೇ ಆದ ಸುಧೀರ್ಘ ಇತಿಹಾಸ ಮತ್ತು ಪರಂಪರೆ ಇದೆ. ಅಲ್ಲದೆ ಇತರ ಜಾನಪದ ರೂಪಗಳಂತೆ

ಪ್ರಾಣಿವೈದ್ಯದ ಉಗಮ-ವಿಕಾಸಗಳು, ಸ್ವರೂಪ, ಲಕ್ಷಣಗಳು ಮತ್ತು ತಂತ್ರ ವಿಧಾನಗಳು ಪ್ರಪಂಚದಾದ್ಯಂತ ಒಂದೇ ರೀತಿಯಾಗಿವೆ. ತಮ್ಮ ಮೊದಲ ''ಹಸಿವು'' ಎಂಬ ರೋಗ ನಿವಾರಿಸಿಕೊಳ್ಳಲು ಪ್ರಾಣಿಗಳು ತಮಗೆ ತಿಳಿದ ನೂರಾರು ಬಗೆಯ ಸೊಪ್ಪು ಹಣ್ಣುಹಂಪಲು ಗೆಡ್ಡೆ ಗೆಣಸು ಮಾಂಸಮಡ್ಡಿಗಳನ್ನು ತಿಂದಿರಿಬೇಕು (ಶಿವರಾಮ ವಿ.ಎನ್ ೧೯೮೯-೩೪) ಪ್ರಾಣಿಗಳ ಜೀವನ ವಿಧಾನ ಅವುಗಳ ಆಹಾರದ ಆಯ್ಕೆ ಮುಂತಾದವುಗಳನ್ನು ಗಮನಿಸುತ್ತಾ ಬಂದ ಮನುಷ್ಯನು ಅವುಗಳಿಗೆ ಬರುವ ರೋಗ ರೋಗಕ್ಕೆ ಕೊಡುವ ಚಿಕಿತ್ಸೆಗಳ ಕುರಿತು ನಿಸರ್ಗದಲ್ಲಿ ತನಗೆ ದೊರೆತ ಅನುಭವದ ಮೂಲಕ, ಗುರುತಿಸಿಕೊಂಡಿರಬೇಕೇನೊ, ಪ್ರಾಣಿವೈದ್ಯ, ವಾಸ್ತವವಾಗಿ ನಿಸರ್ಗದ ಸಹಜ ಪ್ರೇರಣೆಯಿಂದ ಅನಿವಾರ್ಯವಾಗಿ ರೂಪುಗೊಂಡುದಾಗಿದೆ. ಮನುಷ್ಯ ತನ್ನನ್ನು ರಕ್ಷಿಸಿಕೊಳ್ಳುವದರಜೊತೆಗೆ ತನ್ನ ಪರಿಸರವನ್ನು ಸಂರಕ್ಷಿಸಿಕೊಳ್ಳುವ ಪ್ರವೃತ್ತಿಯನ್ನು ಹೊಂದಿದ ಪರಿಣಾಮವಿದು.

ಈ ಮೇಲಿನ ಎಲ್ಲಾ ಅಂಶಗಳಿಗೆ ಮದಾರಿಗಳು ಹೊಂದಿಕೊಂಡಿರುವರು. ನೂರಾರು ವರ್ಷಗಳಿಂದ ಕರಡಿ ಆಡಿಸಿಕೊಂಡು ಬಂದಿರುವ ಇವರಿಗೆ ಪ್ರಾಣಿವೈದ್ಯಪದ್ಧತಿ ತಮ್ಮ ಹಿರಿಯರು, ಪೂರ್ವಜರುಗಳಿಂದ ಈ ವೈದ್ಯಪದ್ಧತಿ ಇವರಿಗೂ ಸಿದ್ಧಿಸಿದೆ ಎಂದರೆ ತಪ್ಪಾಗಲಾರದು. ಕೃಷಿಕರು ಸಾಕುವ ಹಾಗೆ ಇವರು ತಮ್ಮ ವೃತ್ತಿದಾತ ಪ್ರಾಣಿಯನ್ನು ಸಾಕಿಕೊಂಡು ಅದರ ಆರೋಗ್ಯ ಆಯುಷ್ಯ, ಸಾಕುವಿಕೆಯನ್ನು ಬಹಳ ಸೂಕ್ಷ್ಮವಾಗಿ ಗಮನಿಸುವುದುಂಟು

ಅಡಿಟಿಪ್ಪಣಿ

೧. ಅಲೆಮಾರಿಗಳ ಸ್ಥಿತಿಗತಿ ಎ.ಎಸ್. ಪ್ರಭಾಕರ ಕ.ವಿ.ಹಂದ ೨೦೦೫ ಪು. ೪೩-೪೪

೨. ಕರ್ನಾಟಕದ ಮದ್ದೆ ಕಂಬಾರರು ಡಾ.ಆರ್.ಬಿ.ಕುಮಾರ್, ಕ.ವಿ.ವಿ.ಹಂಪಿ, ಪುಟ-೬೨

(ಪಿಹೆಚ್.ಡಿ. ಪ್ರಕಟಿತ ನಿಂಬಧ ೨೦೦೦)

೩. ವಕ್ತೃ ಮಾಹಿತಿ ಹುಲಿಹೈದರ್, ಮಂಗಳಾಪುರದ ವಕ್ತೃಗಳು

೪. ಹೈದ್ರಾಬಾದ್ ಕರ್ನಾಟಕ ಜನಪದ ಸಾಹಿತ್ಯ, ಬಸವರಾಜ ಪೋಲಿಸ್ ಪಾಟೀಲ್

೫. ಸಂಶೋಧನಾ ಲೇಖನಗಳು ಎಂ.ಎಸ್.ಲಠೆ ಗು.ವಿ.ವಿ. ಪು ೩೧, ೧೦೩, ೧೦೫.

೬. ಪ್ರಜಾವಾಣಿ ನಿಯತಕಾಲಿಕೆ-"ಕರ್ನಾಟಕ ದರ್ಶನದಲ್ಲಿ ಬಂದಿದೆ"

೭. ಜಾನಪದ ವಿಶ್ವಕೋಶ, ಡಾ.ಚಂದ್ರಶೇಖರ ಕಂಬಾರ ಪು

೮. ಹೈದ್ರಾಬಾದ್ ಕರ್ನಾಟಕದ ಅಲೆಮಾರಿಗಳ ಸಮಾಜೊ-ಆರ್ಥಿಕ ಅಪ್ರಕಟಿತ, ಪಿಹೆಚ್.ಡಿ. ಸಮುದಾಯ ಅಧ್ಯಯನ ಪ್ರಬಂಧ ಅಜ್ಜಯ್ಯ ಪು

ಅಡಿ ಟಿಪ್ಪಣಿಗಳು

೧. ಹೈದ್ರಬಾದ್ ಕರ್ನಾಟಕದ ಅಲೆಮಾರಿಗಳ ಸಮಾಜೋ ಆರ್ಥಿಕ-ವ್ಯವಸ್ಥೆ ಪಿಹೆಚ್.ಡಿ ಅಪ್ರಕಟಿತ ಪ್ರಬಂಧ-೨೦೦೬., ಕ.ವಿ.ವಿ.ಹಂಪಿ ಪು. ೨೨೩, ೨೨೪, ೨೨೫

೨. ಅಲೆಮಾರಿಗಳ ಸ್ಥಿತಿಗತಿ, ಸಂ. ಸ.ಚಿ.ರಮೇಶ, ಕ.ವಿ.ವಿ. ಹಂಪಿ-೨೦೦೫, ಪು-೪೩, ೪೪

೩. ಕ್ಷೇತ್ರಕಾರ್ಯದಲ್ಲಿನ ವಕ್ತೃಮಾಹಿತಿ, ಹಂಪಿನಕಟ್ಟೆ ಕರಡಿ ಮಾಬುಸಾಬ್ ಕರಡಿ ಪಕ್ರುಸಾಬ್

೪. ಹೈದ್ರಾಬಾದ್ ಕರ್ನಾಟಕ ಜನಪದ ಸಾಹಿತ್ಯ ಬಸವರಾಜ್ ಪೋಲಿಸ್ ಪಾಟೀಲ್

೫. ಸಂಶೋಧನಾ ಲೇಖನಗಳು, ಸಂ. ಬಿ.ಎ.ಪೂಜಾರ್. ಗು.ವಿ.ವಿ. ಪು.೧೦೩, ೧೦೫

೬. ಪ್ರಜಾವಾಣಿ ದಿನಪತ್ರಿಕೆ, ಕರ್ನಾಟಕ ದರ್ಶನದಲ್ಲಿ ಬಂದ ಲೇಖನ, ೨೦೦೭.

೭. ಜಾನಪದ ವಿಶ್ವಕೋಷ, ಸಂ. ಚಂದ್ರಶೇಖರ ಕಂಬಾರ, ಸಂಪುಟ-೧, ಕ.ಸಾಹಿತ್ಯ ಪರಿಷತ್ ೧೯೮೫

೮. ಡಣಾಪುರ ಗ್ರಾಮ ಪಂಚಾಯತಿಯಿಂದ ಪಡೆದ ಮಾಹಿತಿ - ಗ್ರಾಮ ಪಂಚಾಯತಿ ಕಾರ್ಯಾಲಯ ಡಣಾಪುರ, ಮರಿಯಮ್ಮನ ಹಳ್ಳಿ (ಹೋಬಳಿ)

೯. ಕೋಳೂರು ಗ್ರಾಮ ಪಂಚಾಯತಿಯಿಂದ ಪಡೆದ ಮಾಹಿತಿ - ಗ್ರಾಮ ಪಂಚಾಯತಿ ಕಾರ್ಯಾಲಯ ಕೋಳೂರು, ಕೊಪ್ಪಳ (ತಾ) (ಜಿ),

೧೦. ಜಾನಪದ ಅಭಿಯಾನ, ಅರವಿಂದ ಮಾಲಗತ್ತಿ, ರಾಜ್ ಪ್ರಕಾಶನ, ಮೈಸೂರು, ೨೦೦೪, ಪು. ೧೧೫-೧೧೬

೧೧. ಅದೇ, ಪು. ೧೨೦-೧೨೧

ಅಧ್ಯಾಯ ಐದು

ಮದಾರಿಗಳು ಹಾಗೂ ಪ್ರಾಣಿದಯಾಸಂಘ

ಮದಾರಿಗಳು ಮತ್ತು ಪ್ರಾಣಿ ದಯಾ ಸಂಘ
ಮದಾರಿಗಳು ಮತ್ತು ಸರ್ಕಾರದೊಂದಿಗಿನ ಹೋರಾಟ

ಅಧ್ಯಾಯ ಐದು

ಮದಾರಿಗಳು ಹಾಗೂ ಪ್ರಾಣಿದಯಾಸಂಘ

ಮದಾರಿಗಳು

ಕರಡಿಯಾಡಿಸುವ ಖಲಂದರರು ಅಥವಾ ಮದಾರಿಗಳು ಮೂಲತಃ ಅಲೆಮಾರಿ ಬುಡಕಟ್ಟು ಜನಾಂಗಕ್ಕೆ ಸೇರಿದ್ದು ಈ ಜನಾಂಗ ಊರೂರು ಅಲೆದು ಕರಡಿಯಾಡಿಸಿ ಹೊಟ್ಟೆ ತುಂಬಿಸಿಕೊಳ್ಳುವವರು ಆಗಿದ್ದಾರೆ. ಒಂದು ಕರಡಿಯ ಹಿಂದೆ ನಾಲ್ಕೈದು ಕುಟುಂಬಗಳು ಜೀವನ ಸಾಗಿಸುತ್ತವೆ. ಇವರ ಮೂಲ ಸ್ಥಾನ ಉತ್ತರಭಾರತವಾಗಿದೆ. ಅತಿ ಹೆಚ್ಚಿನ ಸಂಖ್ಯೆಯಲ್ಲಿ ಮದಾರಿಗಳು ಅಲ್ಲಿ ಕಂಡುಬರುತ್ತಾರೆ. ಕರ್ನಾಟಕದಲ್ಲಿ ಕರಡಿಯಾಡಿಸುತ್ತ ಅಲೆಮಾರಿಗಳಾಗಿ ಬಂದು ವಾಸವಾಗಿರುವರು. ಇವರು ಬಹುಭಾಷಿಕರಾಗಿರುವರು.

ಶತಮಾನಗಳಿಂದಲೂ ಕರಡಿಯಾಡಿಸುವಿಕೆ ಮೂಲ ವೃತ್ತಿಯನ್ನು ಜೀವನಕ್ಕಂಟಿಸಿಕೊಂಡು ಬಂದಿರುವರು ಚರಿತ್ರೆಯ ಪುಟಗಳಲ್ಲಿ ಇವರ ಸ್ಥಾನ, ಶೋಷಿತ, ತಿರಸ್ಕೃತವರ್ಗ ಎಂದೇ ಹಣೆಪಟ್ಟಿಯನ್ನು ಹೊಂದಿದೆ. ಅಂದಿನ ಆಳರಸರ ರಂಜಿಸುವುದಕೊಸ್ಕರವೆ ಮನರಂಜನೆ ಮೂಡಿಸುವ ಕಾರ್ಯವನ್ನು ಮಾಡುತ್ತಾ ತಮ್ಮ ಜೀವನದ ಮಹತ್ವಕಾಂಕ್ಷೆಗಳನ್ನು ಈಡೇರಿಸಿಕೊಳ್ಳದೆ ಬರಿ ರಂಜನೆ ಕೊಡುತ್ತಾ ಪರರ ಸಂತೋಷಗೊಳಿಸುವುದನ್ನೆ ಮಾಡುತ್ತಾ ಬಂದಿದೆ. ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳಲಾಗದಂತಹ ಸ್ಥಿತಿಯನ್ನು ಇವರ ವೃತ್ತಿ ತಂದುಬಿಟ್ಟಿದೆ. ಅಂದಿನ ರಾಜಷಾಹಿ ಆಳ್ವಿಕೆ ಬರೀ ಇವರಿಂದ ಮನರಂಜನೆಯನ್ನು ಪಡೆಯಿತೆ ವಿನಹಃ ಸಮಾಜದಲ್ಲಿ ಈ ಸಮುದಾಯಕ್ಕೆ ಸ್ಥಾನಮಾನ ಭದ್ರತೆಯನ್ನು ಕಲ್ಪಿಸಲಿಲ್ಲ. ಅಲೆಮಾರಿಗಳಾಗಿಯೇ ಉಳಿದರು. ಸಾಮಾಜಿಕ ವ್ಯವಸ್ಥೆಯ ಯಾವುದೇ ಬಗೆಯ ಸ್ಥಾನಮಾನ ಗೌರವಗಳಿಗೂ ಪಾತ್ರರಾಗಲಿಲ್ಲ. ಭವಿಷ್ಯತ್ತಿನ ಜೀವನಕ್ಕೆ ಅಗತ್ಯವಾದ ರಕ್ಷಣೆ ಬರೀ ಶೋಷಣೆಯ, ನಿಕೃಷ್ಟ ಬದುಕನ್ನು ಅನುಭವಿಸುತ್ತಾ ಬಂದಿರುವವರಾಗಿದ್ದಾರೆ. ಹಿಂದಿನ ಹಿರಿಯರೆನಿಸಿದವರು ತಮಗಾಗಿ ಯಾವುದೇ ರೀತಿಯ ಭೂಮಿ, ಆಸ್ತಿ ಮನೆಯನ್ನು ಮಾಡದೇ ಸಂಪಾದಿಸಿದ ಹಣ ಭೂಮಿಯನ್ನೆಲ್ಲಾ ಮೋಜು ಮಾಡಿ ಸಂತೃಪ್ತಿಯಾಗಿ ಹೊಟ್ಟೆ ತುಂಬಿಸಿಕೊಂಡರೆ ವಿನಃ ಬಿಡಿಗಾಸನ್ನು ತಮಗೆ ಮಾಡಲಿಲ್ಲ. ಆ ಕಾಲದಲ್ಲಿ ರಾಜರು ಇನಾಮಾಗಿ ಕೊಟ್ಟ ಭೂಮಿಯನ್ನು ಮಾರಿದರು.ತಮ್ಮ ಬಗೆಗೆ ಜೀವನ ನಿರ್ವಹಣೆ ಬಗೆಗೆ ಯೋಚಿಸಲಿಲ್ಲ. ಬರಿ ಕರಡಿಯನ್ನು ಕೈಗೆ ಕೊಟ್ಟು ಹೋಗಿದ್ದಾರೆ. ಈಗ ಇದನ್ನೆ ತಾವು ನಂಬಿಕೊಂಡು ಜೀವನವನ್ನು ನಿರ್ವಹಿಸುತ್ತಿದ್ದೇವೆ. ಅಂದಿನ ಕಾಲಕ್ಕೂ ಇಂದಿನ ಕಾಲಕ್ಕೂ ತುಂಬಾ ವ್ಯತ್ಯಾಸವಿದೆ. ಇಂದು ದಿನನಿತ್ಯ ಕಾನೂನು ಕಾಯಿದೆಗಳು ತಮ್ಮ ಜನಾಂಗದ

ಜೀವನವನ್ನೇ ಬುಡಮೇಲು ಮಾಡುತ್ತಿವೆ ಮುಂದೇ ತಾವೇನು ಮಾಡಬೇಕು ಎಂಬುದೆ ಯಕ್ಷಪ್ರಶ್ನೆ ಎಂದು ಜನಾಂಗದ ಹಿರಿಯರು ಕ್ಷೇತ್ರಕಾರ್ಯದ ವೇಳೆಯಲ್ಲಿ ದುಃಖ ತೋಡಿಕೊಂಡರು.

ಮದಾರಿಗಳು ಖಲಂದರರು ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಬಲಿಷ್ಠರೊಡನೆ ಸಂಘರ್ಷ ಮಾಡಬೇಕಾಗಿದೆ. ರಾಜಕಾರಣಿಗಳು ಚುನಾವಣೆಯ ವೇಳೆಯಲ್ಲಿ ಇವರಿಗೆ ಮುಖವನ್ನು ತೋರಿಸುವರು. ಅವರ ಸಂಕಷ್ಟಸ್ಥಿತಿ ಕಂಡು ಮೊಸಳೆ ಕಣ್ಣೀರು ಸುರಿಸಿ ಉದ್ದುದ್ದವಾದ ಪೊಳ್ಳು ಭರವಸೆ ನೀಡಿ ಗೆದ್ದು ಅಧಿಕಾರವೇರಿದ ಮೇಲೆ ಇವರ ಕಡೆ ಸೌಜನ್ಯಕ್ಕಾದರೂ ಭೇಟಿ ಕೊಡುವುದಿಲ್ಲ. ಆದರೂ ಸಹ ಇದೆ ರಾಜಕಾರಣಿಗಳಿಂದ ತಮ್ಮ ಭವಿಷ್ಯ ಉಜ್ವಲವಾಗುವುದೆಂಬ ಮುಗ್ಧನಂಬಿಕೆ ಹೊಂದಿದ್ದಾರೆ.

ಇನ್ನೊಂದು ಕಡೆ ಸರಕಾರ ಪ್ರಾಣಿ ಹಿಂಸಿಸುವುದು ಅಪರಾಧ ಅದು ಮಾಡುವವರು ಅಪರಾಧಿಗಳು ಎಂಬ ಆಕ್ಟನ್ನು ಜಾರಿಗೆ ತಂದು ಪ್ರಾಣಿದಯಾಸಂಘದವರ ಜತೆಗೂಡಿ ಕರಡಿಯನ್ನು ಖಲಂದರರಿಂದ ಕಿತ್ತುಕೊಂಡು ಪರಿಹಾರವಾಗಿ ಹಣವನ್ನು ಸಂಘದಿಂದ ಕೂಡಿಸುವುದು ಈ ಪರಿಹಾರದ ಹಣ ಎಲ್ಲರಿಗೂ ಸಿಕ್ಕಿಲ್ಲ ಕೆಲವರಿಗೆ ಮಾತ್ರ ಸಿಕ್ಕಿದೆ ಅವರೇ ಅಲ್ಪಸ್ವಲ್ಪ ಆಸ್ತಿಮಾಡಿಕೊಂಡಿದ್ದಾರೆ. ಉಳಿದಕುಟುಂಬಗಳು ಏನು ಮಾಡಬೇಕು. ಮುಂದಿನ ಭವಿಷ್ಯವಾದರೂ ಏನು ಎಂಬ ದೊಡ್ಡ ಚಿಂತೆಯಲ್ಲಿರುವುದರ ಬಗೆಗೆ ಜನಾಂಗದ ಹಿರಿಯರು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ತಮ್ಮ ಅಳಲನ್ನು ಹಂಚಿಕೊಂಡರು. ಪ್ರಾಣಿದಯಾ ಸಂಘದವರು ಮಾಡುತ್ತಿರುವ ಕೆಲಸ ಒಳ್ಳೆಯದಾದರೂ ತಮ್ಮಿಂದ ಕಿತ್ತುಕೊಂಡ ಕರಡಿಗೆ ಪರ್ಯಾಯವಾಗಿ ಸರಕಾರದಿಂದ ಸಂವಿಧಾನಬದ್ಧ ಸೌಲಭ್ಯಗಳನ್ನು ಕೊಡಿಸುವ ಪ್ರಯತ್ನ ಮಾಡುತ್ತಿಲ್ಲ ತಮಗೆ ಈ ವೃತ್ತಿ (ಕರಡಿಯಾಡಿಸುವಿಕೆ) ಬಿಟ್ಟರೆ ಬೇರೆ ವೃತ್ತಿಮಾಡುವುದು ಗೊತ್ತಿಲ್ಲ. ತಾವು ಎಂದಿಗೂ ಮೈಬಗ್ಗಿಸಿ ದುಡಿದವರಲ್ಲ, ಕೃಷಿಕರು ಅಲ್ಲ, ವಾಸಿಸಲು ಶಾಶ್ವತವಾದ ಮನೆ, ಭೂಮಿ, ಬಿ.ಪಿಎಲ್. ಕಾರ್ಡು ಇದಾವುದು ಇಲ್ಲದೆ ನಿರ್ಗತಿಕರಾಗಿರುವುದು ಇವರು ವಾಸಿಸಿರುವ ಗುಡಿಸಲನ್ನು ನೋಡಿದಾಗ ನಮಗೆ ತಿಳಿಯುತ್ತದೆ. ಪ್ರಾಣಿದಯಾ ಸಂಘದವರು ಪರಿಹಾರದ ಹಣ ಕೊಟ್ಟು ಜೊತೆಗೆ ಹೆಣ್ಣುಮಕ್ಕಳ ವೃತ್ತಿ ಕೌಶಲ್ಯ ತರಬೇತಿಗಳನ್ನು (ಕಸೂತಿ ಮಾಡುವುದು, ರಾಟಿ ಹೊಲಿಯುವ, ಎಂಬ್ರಾಯಿಡೆರಿ) ಕಲಿಸಿದೆಯಾದರೂ ಇದರ ಉಪಯೋಗ ಮದಾರಿ ಹೆಂಗಸರಿಗೆ ಅಷ್ಟೊಂದು ಪ್ರಯೋಜನವಾಗಿಲ್ಲ. ಅನಕ್ಷರಸ್ಥರಾದ ಇವರಿಗೆ ತಿಳುವಳಿಕೆ ಕಡಿಮೆ ಆದರಲ್ಲೂ ಮನೆಯಲ್ಲಿ ಮಕ್ಕಳನ್ನು ನೋಡಿಕೊಳ್ಳುವುದು, ಗಂಡನ ಊಟೋಪಚಾರದ ಕಡೆಗೆ ಹೆಚ್ಚುಗಮನ ಹರಿಸುತ್ತಾರೆ. ಇಂತಹ ಸಂದರ್ಭದಲ್ಲಿ ಪ್ರಾಣಿದಯಾಸಂಘವು ಈ ಯೋಜನೆಗಳು ಹಾಕಿಕೊಳ್ಳುವ ಬದಲು ಈ ಜನಾಂಗದ ಸಮಗ್ರ ವರದಿಯನ್ನು ಸರಕಾರಕ್ಕೆ ಸಲ್ಲಿಸುವ ಕಾರ್ಯಮಾಡಬೇಕಿದೆ. ಮೂಲವೃತ್ತಿಯ ನಂತರ ಪರ್ಯಾಯವಾಗಿ ಇವರಿಗೆ ಮೂಭೂತ ಸೌಕರ್ಯಗಳು, ಮೀಸಲಾತಿ, ಉದ್ಯೋಗ ಸೃಷ್ಠಿ ಶೈಕ್ಷಣಿಕ ಮಟ್ಟ ಪ್ರಗತಿ ಕುರಿತಾದ ಅಂಶಗಳನ್ನು ಸರಕಾರಕ್ಕೆ ತಿಳಿಸಿಕೊಡುವ ಪ್ರಾಮಾಣಿಕ ಪ್ರಯತ್ನವನ್ನು ಪ್ರಾಣಿದಯಾ ಸಂಘದವರು ಮಾಡಿದರೆ ಈ ಜನಾಂಗಕ್ಕೆ ಸಮಾಜಕ್ಕೆ ಪರಿಚಯಿಸಿದಂತಾಗುತ್ತದೆ. ಇವರಂತೆಯೇ ಪ್ರಾಣಿಪ್ರದರ್ಶಿಸಿ ಹೊಟ್ಟೆತುಂಬಿಸಿಕೊಳ್ಳುವ ಇತರಜನಾಂಗಿಗಳಾದ ಹಾವಾಡಿಸುವರು, ಕಸರತ್ತು ಮಾಡುವ ದೊಂಬರು, ಕವಲೆತ್ತಿನವರು, ಹಕ್ಕಿ ಪಿಕ್ಕಿಗಳು ಮುಂತಾದವರಿಗೆ ಸರಕಾರದಿಂದ ಸೌಲಭ್ಯ ಸಿಕ್ಕಿದೆ. ಅವರಂತೆಯೇ ಇವರಿಗೆ ಸರಕಾರದಿಂದ ಸಿಗಬೇಕಾದ ಸೌಲಭ್ಯಗಳನ್ನು

ಸ್ವಯಂಸೇವಾ ಸಂಘ ಪ್ರಾಣಿದಯಾ ಸಂಘ, ರಾಜಕಾರಣಿಗಳು ಸಿಗುವಂತೆ ಪ್ರಾಮಾಣಿಕವಾಗಿ ಹೋರಾಟ ಮಾಡಿ ತರಬೇಕಾದ ಜರೂರು ಇಂದು ಆಗಬೇಕಾಗಿದೆ.

ಎಲ್ಲಾ ರಂಗಗಳಲ್ಲಿ ಅಂದರೆ ಶೈಕ್ಷಣಿಕ, ರಾಜಕೀಯ, ಆರ್ಥಿಕ, ಸಾಮಾಜಿಕ ಧಾರ್ಮಿಕ ಮುಂತಾದ ಕ್ಷೇತ್ರಗಳಲ್ಲಿ ಇವರು ಹಿಂದುಳಿದ ಜನಾಂಗವಾಗಿದೆ. ೨೧ ನೇ ಶತಮಾನದಲ್ಲಿ ಐಟಿಬಿಟಿ ಕ್ಷೇತ್ರಕ್ಕೆ ಮಾತ್ರ ನಮ್ಮ ಸರಕಾರ ಮನ್ನಣೆ ನೀಡಿ ಹೆಚ್ಚು ಹೆಚ್ಚು ಕಾರ್ಖಾನೆಗಳ ಸ್ಥಾಪಿಸುವುದರತ್ತ ಗಮನಹರಿಸುತ್ತಿದೆ. ಅದರ ಜೊತೆಗೆ ಇಂತಹ ಅಲೆಮಾರಿಗಳ ಕಡೆಗೆ ದೃಷ್ಟಿ ಹಾಯಿಸುವುದು ಒಳ್ಳೆಯದು ಎಂಬುದು ಶೋಷಿತರ ಧ್ವನಿಯಾಗಿದೆ.

ಖಲಂದರ ಮದಾರಿಗಳು ಕರಡಿಯಾಡಿಸುವವರು ಸರಕಾರಕ್ಕೆ ತಮ್ಮ ಬೇಡಿಕೆಗಾಗಿ ಸಲ್ಲಿಸಿದ ಪತ್ರಗಳು ಹಾಗೂ ಸರಕಾರದ ಪತ್ರಗಳು ಈ ಕೆಳಗಿನಂತಿವೆ.

೧. ಕರ್ನಾಟಕ ಮುಸ್ಲಿಂ ಸಂಘರ್ಷ ಸಮಿತಿಯ ವತಿಯಿಂದ ಸರಕಾರದ ಇಲಾಖೆಯ ಅಧಿಕಾರಿಗಳಾದ ವಲಯ ಅರಣ್ಯಾಧಿಕಾರಿಗಳು ಹೊಸಪೇಟೆ, ಜಿಲ್ಲಾ ಅರಣ್ಯ ಸಂರಕ್ಷಕರು ಬಳ್ಳಾರಿ.

೨. ಮಾನ್ಯ ಜಿಲ್ಲಾಧಿಕಾರಿಗಳಿಗೆ ಕೊಟ್ಟ ಪತ್ರ.

೩. ಸಮಾಜ ಕಲ್ಯಾಣ ಆಯುಕ್ತರಿಗೆ ಬೆಂಗಳೂರು ಇವರಿಗೆ ನೀಡಿದ ಮನವಿ ಪತ್ರ.

೪. ಕರ್ನಾಟಕದ ರಾಜ್ಯ ಅಲ್ಪಸಂಖ್ಯಾತರ ಆಯೋಗದ ಕಾರ್ಯದರ್ಶಿಗಳಿಗೆ ನೀಡಿದ ಮನವಿ ಪತ್ರ.

೫. ಗೃಹ ಕಾನೂನು ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳ ಸಚಿವರ ಆಪ್ತ ಕಾರ್ಯದರ್ಶಿ ಇವರಿಗೆ ನೀಡಿದ ಮನವಿ ಪತ್ರ.

ಮದಾರಿಗಳು ಮತ್ತು ಸರ್ಕಾರದೊಂದಿಗಿನ ಹೋರಾಟ

ಬುಡಕಟ್ಟು ಜನಾಂಗಕ್ಕೆ ಸೇರಿದ ಅಲೆಮಾರಿ ಮದಾರಿ ಅಥವಾ ಖಲಂದರರು ಶತಮಾನಗಳಿಂದ ಶೋಷಿತಗೊಂಡ ಸಮುದಾಯವಾಗಿದೆ. ಚರಿತ್ರೆಯ ಪುಟಗಳಲ್ಲಿ ಈ ಜನಾಂಗದ ಕಥೆ, ಮೂಲ ಗೊತ್ತಾಗುತ್ತದೆ. ರಾಜಷಾಹಿ ಆಳ್ವಿಕೆಯಲ್ಲಿ ಬಹುಮುಖ್ಯ ಪಾತ್ರವಹಿಸಿ ತಮ್ಮ ಪ್ರಾಣಿ ಪ್ರದರ್ಶನದಿಂದ ಅರಸರ ಮನಸ್ಸನ್ನು ಗೆದ್ದು ಅವರ ಮೆಚ್ಚುಗೆ ಪಡೆದು ಸಾಮ್ರಾಜ್ಯದೊಳಗಿನ ಪ್ರಜೆಗಳೆಲ್ಲರ ಮನಸ್ಸನ್ನು ಗೆದ್ದ ಜನಾಂಗವೆನಿಸಿದೆ ಅಂತರಾಳದ ಕಷ್ಟನಷ್ಟ ನೋವು ನಲಿವುಗಳನ್ನು ಲೆಕ್ಕಿಸದೆ ಅತ್ಯಂತ ಕಠಿಣವಾದ ಶ್ರಮಯುತವಾದ ಕಾರ್ಯವನ್ನು ಮಾಡುವುದೇ ಮುಖ್ಯ ಉದ್ದೇಶವಾಗಿಟ್ಟುಕೊಂಡ ಇವರು ತಮ್ಮ ಜೀವನದ ಮಹತ್ವಾಕಾಂಕ್ಷಿಯ ಆಸೆ, ಆಕಾಂಕ್ಷೆ, ಭವಿಷ್ಯತ್ತಿನ ಯೋಜನೆಗಳನ್ನು, ಹಣ, ಆಸ್ತಿ, ಭೂಮಿಯಂತಹ ಸಂಪತ್ತನ್ನು ಸಂಗ್ರಹಿಸಿಡುವ ಅದನ್ನು ತಮ್ಮ ಮುಂದಿನ ಪೀಳಿಗೆಗೆ ಅನುಭವಿಸಲಿ ಎಂಬ ಮುಂದಾಲೋಚನೆಯನ್ನು ಮಾಡದೆ ಅಂದು ಬಂದ ಹಣದಲ್ಲಿಯೇ ಹೊಟ್ಟೆತುಂಬಿಸಿಕೊಳ್ಳುತ್ತ ಬಂದಿರುವ ಈ ಮದಾರಿಗಳ ಒಂದು ರೀತಿಯಲ್ಲಿ ವಿಶಿಷ್ಟಜೀವನವನ್ನು ಮಾಡುತ್ತಾ ಬಂದಿರುವರು. ಸಮಾಜದಲ್ಲಿ ಇತರರನ್ನು ರಂಜಿಸುವುದಕೋಸ್ಕರವಾಗಿಯೆ ಈ ಸಮುದಾಯ ಮೀಸಲಾಗಿದೆಯೋ ಏನೋ? ಎಂಬ ಪ್ರಶ್ನೆ ಎಂತಹವರನ್ನು ಎಚ್ಚರಿಸುತ್ತದೆ. ಆದರೂ ಈ ಮದಾರಿಗಳು ಪ್ರಾಮಾಣಿಕ ಜೀವನ

ನಡೆಸುತ್ತಾರೆ. ಕಳ್ಳತನವಾಗಲಿ, ದರೋಡೆ ಮಾಡುವುದಾಗಲಿ, ಮೋಸಮಾಡಿ ಸಂಪಾದಿಸುವಾಗಲಿ, ಕಾಡಿನಲ್ಲಿ ಪ್ರಾಣಿಗಳನ್ನು ಬೇಟೆಯಾಡುವುದಾಗಲಿ, ಇದಾವುದನ್ನು ಮಾಡದೆ ಅದನ್ನು ವಿರೋಧಿಸುತ್ತಾರೆ. ಹಾಗೂ ಹಾಗೆ ಮಾಡುವವರನ್ನು ಖಂಡಿಸುತ್ತಾರೆ. ಇದರಿಂದ ದೂರವಿರುತ್ತಾರೆ. ಸಾವಿರಾರು ವರ್ಷಗಳಿಂದ ವಂಶವೃತ್ತಿ ಕರಡಿಯಾಡಿಸಯೇ ಹೊಟ್ಟೆ ತುಂಬಿಸಿಕೊಳ್ಳುತ್ತಾ ಬಂದಿರುವರು. ಒಂದೂರಿನಿಂದ ಮತ್ತೊಂದೂರಿಗೆ ಹೀಗೆ ಊರುಗಳನ್ನೆಲ್ಲಾ ಸುತ್ತಿ ಕೊನೆಗೆ ಕರ್ನಾಟಕದಲ್ಲಿಯೇ ಬಂದು ಇಲ್ಲಿಯೇ ನೆಲೆಯೂರಿದ್ದಾರೆ. ಇವರ ವೃತ್ತಿಯಾಡಿಸುವ ಸಂಬಂಧಿಗಳು ಉತ್ತರಭಾರತದಲ್ಲಿದ್ದಾರೆ ಇವರು ಮೂಲಸ್ಥಾನ ಉತ್ತರ ಭಾರತವೆಂದು ಕೆ.ಎಸ್.ಸಿಂಗ್‌ರವರು ತಮ್ಮ ಗ್ರಂಥದಲ್ಲಿ ಅಭಿಪ್ರಾಯ ಪಟ್ಟಿರುವುದು ತಿಳಿದುಬರುತ್ತದೆ. ಕರ್ನಾಟಕದಲ್ಲಿಯೆ ಬಹಳ ವರ್ಷಗಳಿಂದ ನೆಲೆಸಿ ಕನ್ನಡನಾಡಿನ ಸಂಸ್ಕೃತಿಗೆ ಹೊಂದಿಕೊಂಡುಬಿಟ್ಟಿರುವುದು ಇಲ್ಲಿಯ ಇತರ ಧರ್ಮಿಯರ ಹಾಗೂ ನಾಡಿನ ಸಂಸ್ಕೃತಿಯ ಪ್ರಭಾವದಿಂದಲೇ ಎಂದು ಹೇಳಬಹುದು. ತಮ್ಮ ವಿಶಿಷ್ಟ ಕರಡಿ ಪ್ರದರ್ಶನ ಕಲೆಯಿಂದ ಇಡೀ ಜನಪದರ ಮನಸ್ಸಿನಲ್ಲಿ ಶಾಶ್ವತವಾಗಿ ಉಳಿದಿರುವುದು ಜನಪದದ ಸೌಹಾರ್ದತೆಯನ್ನು ಎತ್ತಿತೋರಿಸುತ್ತದೆ. ಮನೆಯ ಅಂಗಳದ ಮುಂದೆ, ಬೀದಿಯಬದಿಯಲ್ಲಿ, ರೈಲು ಬಸ್ ನಿಲ್ದಾಣ ಹೀಗೆ ಎಲ್ಲೆಂದರಲ್ಲಿ ಕರಡಿಯಾಡಿಸಿ ಪ್ರದರ್ಶನ ಕಲೆಯನ್ನು ತೋರಿಸುವ ಈ ಜನಾಂಗ ಜನಪದರ ಮನಸ್ಸಿನೊಳಗೆ ಸ್ಥಾನ ಪಡೆದುಬಿಟ್ಟಿದ್ದಾರೆ. ಕೋತಿಯಾಡಿಸುವ, ಹಾವಾಡಿಸುವ, ಕವಲೆತ್ತಿನವರು ಹೇಳುವ ಪುರಾಣ ಕತೆಗಳನ್ನು ಈ ಮದಾರಿಗಳು ಕೂಡಾ ಕರಡಿಯ ಕುರಿತು ಮೂಲ ಪುರಾಣವನ್ನು ಕೆಲವು ಸಂದರ್ಭಗಳಲ್ಲಿ ಕೇಳಿದಾಗ ದೀರ್ಘವಾಗಿ ಹೇಳುವುದುಂಟು.

ತಾವು ಸಾಕಿರುವುದು ಹಾಗೂ ವೃತ್ತಿ ಮಾಡುತ್ತಿರುವುದು ಕೇವಲ ಪ್ರಾಣಿಯನ್ನಲ್ಲ ದೇವರನ್ನು, ಈ ದೇವರನ್ನು ದಿನಕ್ಕೆ ಒಂದುಬಾರಿಯಾದರೂಕೈ ಮುಗಿಯುತ್ತೇವೆ. ಜೊತೆಗೆ ಅದಕ್ಕೆ ವೇಳೆಗೆ ಸರಿಯಾಗಿ ಆಹಾರ, ಅದರ ಸ್ವಚ್ಛತೆ, ಆರೋಗ್ಯ ರಕ್ಷಣೆ, ಸತ್ತಾಗ ಮಾನವನಿಗೆ ಮಾಡುವ ಅಲಂಕಾರದಷ್ಟು ವಿಧಾನ ಅಂದರೆ ಶವಸಂಸ್ಕಾರ ದಂತಹ ಕಾರ್ಯಗಳನ್ನು ಮಾಡುತ್ತೇವೆ. ಇನ್ನೂ ತಾವು ಅದಕ್ಕೆ ಹಿಂಸಿಸುವ ಮಾತು ಬರುವುದಿಲ್ಲ ತಾವು ಸಾಕಿರುವುದು ದೇವರನ್ನು ಎಂಬ ಭಾವನೆ ತಮ್ಮಲ್ಲಿ ಇಂದಿಗೂ ಇದೆ ಎಂಬ ಮಾತು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ತಿಳಿದುಬಂದಿತು. ಅಮಾಯಕರಾದ ಈ ಮದಾರಿಗಳು ತಮ್ಮ ಪೂರ್ವಜರ ಕಾಲದಿಂದ ಪ್ರಾಣಿ (ಕರಡಿ) ಸಾಕುತ್ತಾ ಬಂದಿದ್ದಾರೆ. ಅದರಿಂದಲೇ ಜೀವನ ಮಾಡುತ್ತಿದ್ದಾರೆ. ಇತ್ತೀಚೆಗೆ ಬಂದ ''೧೯೭೨ರ ಪ್ರಾಣಿ ಹಿಂಸೆ ಅಪರಾಧ ಕಾಯಿದೆ'' ಜಾರಿಗೆ ಬಂದುದು ಅದರ ನಿಯಮ ಕಾನೂನುಗಳು ಈ ಜನಾಂಗಕ್ಕೆ ಗೊತ್ತಿಲ್ಲದ ಪರಿಣಾಮವಾಗಿ ಗೊಂದಲಕ್ಕೆ ಒಳಗಾಗಿರುವ ಸಂಗತಿಯನ್ನು ಕ್ಷೇತ್ರಕಾರ್ಯದ ವೇಳೆಯಲ್ಲಿ ಹಂಚಿಕೊಂಡರು.

ಅನಕ್ಷರಸ್ಥರಾದ ತಾವು ಮೊದಲೆ ಅಲೆಮಾರಿಗಳಾಗಿದ್ದರಿಂದ ಶಾಲೆಗೆ ಹೋಗಿ ಅಕ್ಷರ ಕಲಿಯುವಷ್ಟು ಸಮಯ ಜ್ಞಾನ ವಿಲ್ಲದ್ದರಿಂದ ಬರೀ ಹೊಟ್ಟೆ ತುಂಬಿಸಿಕೊಳ್ಳುವುದರಲ್ಲಿಯೇ ತಮ್ಮ ಜೀವಮಾನವನ್ನು ಕಳೆದುಬಿಟ್ಟಿದ್ದೇವೆ. ಹೊರಗಿನ ಪ್ರಾಪಂಚಿಕ ಜ್ಞಾನಗೊತ್ತಿಲ್ಲದೆ ಮೂಲವೃತ್ತಿಯಲ್ಲಿಯೇ ತಮ್ಮ ವೃತ್ತಿ ಜ್ಞಾನ ಪರಂಪರೆಯನ್ನು ಮಾತ್ರಕಾಪಾಡಿಕೊಂಡು ಬಂದಿರುವುದಾಗಿ, ಯಾರಾಗಲಿ ಇಂಜಿನೀಯರ್, ಡಾಕ್ಟರ್, ಶಿಕ್ಷಣ

ವ್ಯಾಪಾರಿಯಂತಹ ಉದ್ಯೋಗವನ್ನು ಹೊಂದಿಲ್ಲ ಎಂದು ಹೇಳುವ ಈ ಜನಾಂಗದ ಅಂತರಾಳದ ಧ್ವನಿಯ ಕೂಗು ಸರ್ಕಾರಕ್ಕೆ ಇನ್ನು ಮುಟ್ಟದಿರುವುದು ದುರಂತವೇ ಆಗಿದೆ. ತಮ್ಮದೆ ಆದ ಲೋಕ ದೃಷ್ಟಿಯನ್ನು ಹೊಂದಿದೆ ಈ ಸಮುದಾಯ ಅಕ್ಷರ ಜ್ಞಾನವನ್ನು ತಿಳಿಯದ ಇವರಿಗೆಅಕ್ಷರ ಜ್ಞಾನದ ಬಗೆಗೆ ನಿರ್ಲಕ್ಷ್ಯ ಹಾಗೂ ತಿರಸ್ಕಾರದ ಭಾವನೆಯಿರುವುದು ಸಹಜವಾಗಿದೆ ಆದರೂ ಸರಕಾರ ಇದರ ಬಗೆಗೆ ಗಮನಹರಿಸಬೇಕಾಗಿದೆ.

ಸರಕಾರವು ಪ್ರಾಣಿ ನಿಷೇದದ ಜವಾಬ್ದಾರಿಯನ್ನು ಪ್ರಾಣಿದಯಾ ಸಂಘದ ಜೊತೆಗೂಡಿ ಒಪ್ಪಂದ ಮಾಡಿಕೊಂಡಿದ್ದರಿಂದ ಇಂದು ಪ್ರಾಣಿ ಪ್ರದರ್ಶಿಸಿ ಬದುಕುವ ಅನೇಕ ಸಮುದಾಯಗಳು ಖಲಂದರರ ಜೀವನವು ಬಹಳ ಅತಂತ್ರ ಸ್ಥಿತಿಯಲ್ಲಿದೆ ಕಳೆದ ಎರಡು ವರ್ಷಗಳಿಂದ ಸಿಕ್ಕಸಿಕ್ಕಲ್ಲಿ ಕರಡಿಗಳನ್ನು ಅರಣ್ಯ ಇಲಾಖೆ ತಮ್ಮ ವಶಕ್ಕೆ ತೆಗೆದುಕೊಳ್ಳುತ್ತಿರುವುದರಿಂದ ಮದಾರಿ ಕುಟುಂಬಗಳು ಕಂಗಲಾಗಿವೆ. ಕರಡಿ ಆಡಿಸಿ ಬರುವ ಆದಾಯ ಹೊಟ್ಟೆ ಹೊರೆಯುವುದಕ್ಕೆ ಸರಿಗೋಗುತ್ತಿದ್ದರಿಂದ ಉಳಿತಾಯ ಮಾಡುವುದು ಸಾಧ್ಯವಾಗಿಲ್ಲ. ಪರ್ಯಾಯ ಕೆಲಸ ಕೈಗೊಳ್ಳಲು ಕೈಯಲ್ಲಿ ಹಣವಿಲ್ಲ ಕೂಲಿ ಮಾಡುವುದು ಗೊತ್ತಿಲ್ಲ. ಕರಡಿ ಒಪ್ಪಿಸಲು ತಾವು ಸಿದ್ಧ ಎಂಬ ಘೋಷಣೆ ಮಾಡಿದರೂ ಸರಕಾರವು ಇದನ್ನು ಲೆಕ್ಕಕ್ಕೆ ತೆಗೆದುಕೊಳ್ಳುತ್ತಿಲ್ಲ. ಖುದ್ದಾಗಿ ಸರಕಾರದವರು ಗ್ರಾಮಕ್ಕೆ ಬಂದು ಕರಡಿಗಳನ್ನು ವಶಕ್ಕೆ ತೆಗೆದುಕೊಂಡು ಕರಡಿಯಿರುವ ಎಲ್ಲರಿಗೂ ಉದ್ಯೋಗ ನೀಡುವ ಬೇಡಿಕೆಯನ್ನಾದರೂ ಈಡೇರಿಸಬಹುದಾಗಿದೆ. ಇದಾವುದನ್ನು ಸರಕಾರದವರು ಮಾಡುತ್ತಿಲ್ಲ ಅನಿವಾರ್ಯವಾಗಿ ತಮ್ಮ ಹೊಟ್ಟೆ ತುಂಬಿಸಿಕೊಳ್ಳಲು ಕರಡಿ ಆಡಿಸಲು ಹೋದಾಗ ಅರಣ್ಯಸಿಬ್ಬಂದಿ ಕರಡಿಗಳನ್ನು ಒಂದೊಂದಾಗಿ ವಶಪಡಿಸಿಕೊಳ್ಳುವುದು ನ್ಯಾಯವೇ ಎಂಬುದು ಕರಡಿಯಾಡಿಸುವ ಸಂಘದ ಅಧ್ಯಕ್ಷರ ಹಾಗೂ ಸಮಸ್ತ ಜನಾಂಗದವರ ಸರಕಾರಕ್ಕೆ ಕೇಳುವ ಪ್ರಶ್ನೆಯಾಗಿದೆ. ಪರ್ಯಾಯ ವೃತ್ತಿಯಿಲ್ಲದೆ ತಮ್ಮ ಕುಟುಂಬಗಳು ಬೀದಿಪಾಲಾಗಿವೆ ಎಂದು ಹೇಳುತ್ತಾರೆ ಜನಾಂಗದ ಕೆಲಸದಸ್ಯರು.

ಪರ್ಯಾಯ ಉದ್ಯೋಗ ಕಲ್ಪಿಸುವಂತೆ ಆಗ್ರಹಿಸಿ ಖಲಂದರ ಮದಾರಿಗಳು, ಜಿಲ್ಲಾಧಿಕಾರಿಗಳಲ್ಲಿ, ರಾಜ್ಯಗೃಹಸಚಿವರ, ರಾಜ್ಯ ಅಲ್ಪಸಂಖ್ಯಾತರ ಆಯೋಗಕ್ಕೆ, ರಾಜ್ಯ ಸಮಾಜಕಲ್ಯಾಣ ಆಯುಕ್ತರ ಬಳಿಯಲ್ಲಿ ಹೋಗಿ ತಮ್ಮ ಬೇಡಿಕೆಗಳನ್ನು ಸಲ್ಲಿಸಿ ಎರಡು ವರ್ಷವಾಗಿ ಕಳೆದರೂ ಇದುವರೆಗೆ ಯಾವುದೇ ರೀತಿಯ ಕ್ರಮಕೈಗೊಳ್ಳದೆ ಸಮುದಾಯವನ್ನು ಇಂದು ಅತಂತ್ರಸ್ಥಿತಿಗೆ ತಂದು ಬಿಟ್ಟಿದೆ ಎಂದರೇ ತಪ್ಪಾಗಲಾರದು. ಬೇಡಿಕೆ ಸಲ್ಲಿಸಿದಂದಿನಿಂದಲೂ ಸರಕಾರದ ಅನುಮತಿಗಾಗಿ ಕಾಯುತ್ತಾಕುಳಿತಿದಿದೆ. ಅನೇಕ ರೀತಿಯ ಸತ್ಯಾಗ್ರಹ, ಅಮರಣ ಉಪವಾಸ, ಹೋರಾಟಗಳನ್ನು ಮಾಡುತ್ತಾ ಬಂದಿದೆ. ತಹಶೀಲ್ದಾರರಿಂದ ಹಿಡಿದು ಮುಖ್ಯಮಂತ್ರಿಯವರೆಗೆ ಮುಖಾಮುಖಿಯಾಗಿ ಭೇಟಿಮಾಡಿ ತಮ್ಮ ಬೇಡಿಕೆಯನ್ನು ಅವರ ಮುಂದಿಟ್ಟಿರುವುದು ಹೊಸದೇನಲ್ಲ ಈ ಹಿಂದಿನ ಸರಕಾರದ ಮುಖ್ಯಮಂತ್ರಿಗಳು ಗ್ರಾಮವಾಸ್ತವ್ಯಕ್ಕೆಂದು ಪಕ್ಕದ ಊರಾದ ಪೋತಲಕಟ್ಟೆಗೆ ಬಂದಾಗ ಅವರನ್ನು ನೇರವಾಗಿ ಕಂಡು ತಮ್ಮ ಬೇಡಿಕೆಯನ್ನು ಮುಖ್ಯ ಮಂತ್ರಿಯ ಕೈಯಲ್ಲಿ ಕೊಟ್ಟಿರುವುದನ್ನು ಈಗಲೂ ಹೇಳಿ ನೆನಪಿಸಿಕೊಳ್ಳುತ್ತಾರೆ. ಈ ಜನಾಂಗದ ಅಧ್ಯಕ್ಷ ರಾಜಾಸಾಬ್‌ರವರು. ಆದರೆ ದುರದೃಷ್ಟವೆಂಬಂತೆ ಕೆಲವೇ ತಿಂಗಳುಗಳಲ್ಲಿ ಸರಕಾರ ಉರುಳಿ ಹೋಯಿತು.ಅಲ್ಲಿಗೆ ಮದಾರಿ ಖಲಂದರರ ಆಸೆಗೆ ತಣ್ಣೀರೆರಚಿದಂತಾಗಿದೆ. ಇದಾದ ಕೆಲವು ತಿಂಗಳ ಬಳಿಕ ಪ.ಜಾತಿ, ಪಂ.ಪಂಗಡ ಹಾಗೂ ಹಿಂದುಳಿದ

ವರ್ಗಗಳ ಆಯೋಗದ ಅಧ್ಯಕ್ಷರು ಕೊಪ್ಪಳಕ್ಕೆ ಬಂದ ಸಂದರ್ಭದಲ್ಲಿ ಮಂಗಳಾಪುರಕ್ಕೆ ಆಗಮಿಸಿ ಮದಾರಿ ಜನಾಂಗದ, ಸ್ಥಿತಿಗತಿಯನ್ನು ಆಲಿಸಿ, ಬೇಡಿಕೆಯನ್ನು ಪೂರೈಸುವುದಾಗಿಯೂ ಭರವಸೆಕೊಟ್ಟರು, ಇದಲ್ಲದೆ ಕನ್ನಡ ದಿನಪತ್ರಿಕೆಗಳಲ್ಲಿ ಇಂಗ್ಲೀಷ್ ಪತ್ರಿಕೆಗಳಲ್ಲಿ ಜನಾಂಗದ ಸ್ಥಿತಿಗತಿ ಪ್ರಕಟವಾಯಿತು. ಟಿ.ವಿ.ಚಾನಲ್‌ಗಳಾದ ಟಿ.ವಿ.೯, ಉದಯ, ಸುವರ್ಣದಂತಹ ಚಾನಲ್‌ಗಳಲ್ಲಿ ಈ ಜನಾಂಗದ ಶೋಚನೀಯ ಬದುಕನ್ನು ಇತ್ತೀಚೆಗಷ್ಟೆ ಪ್ರಸಾರ ಮಾಡಿರುತ್ತವೆ. ಇದೆಲ್ಲದರ ಪರಿಣಾಮವೆಂಬಂತೆ ಜನಾಂಗದ ಬೇಡಿಕೆ ಈಡೇರುವಲ್ಲಿ ಹಿನ್ನಡೆ ಅನುಭವಿಸಿದೆ. ಸರಕಾರದ ನಿರ್ಲಕ್ಷ್ಯತನ, ಅಧಿಕಾರಿಗಳ ಬೇಜವಾಬ್ದಾರಿತನವು ಎದ್ದು ಕಾಣುತ್ತದೆ. ಇತ್ತೀಚೆಗಷ್ಟೆ ಕರಡಿಯಾಡಿಸುವ ಮದಾರಿಗಳ ಸಂಘದವರು ಹೊಸದಾಗಿ ಬಂದ ಸರಕಾರದ ಅಲ್ಪಸಂಖ್ಯಾತ ಸಚಿವರ ಬಳಿ ಹೋಗಿ ತನ್ನ ಬೇಡಿಕೆಯನ್ನು ಸಲ್ಲಿಸಿದ್ದು ಸ್ವಲ್ಪ ದಿನ ಗಡುವು ನೀಡಿರುತ್ತಾರೆ. ಕೈಯಲ್ಲಿರುವ ಹಣವನ್ನೆಲ್ಲಾ ಬರೀ ಅಧಿಕಾರಿಗಳು, ಸಚಿವರು, ಆಯೋಗಗಳನ್ನು ಕಾಣುವುದಕ್ಕಾಗಿ ಖರ್ಚುಮಾಡಿ ಬರಿಗೈಯಲ್ಲಿದ್ದದ್ದು ಸ್ಥಿತಿಯನ್ನು ಕ್ಷೇತ್ರಕಾರ್ಯದ ವೇಳೆ ತಿಳಿಸಿದರು. ಹೊರಗಡೆ ಸಾಲ ಮಾಡಿಯಾದರೂ ಸರಿ ತಮ್ಮ ಬೇಡಿಕೆ ಈಡೇರಿಸಿಕೊಳ್ಳುತ್ತೇವೆ ಎಂಬ ಛಲವನ್ನು ಇಟ್ಟುಕೊಂಡವರು ಈ ಮದಾರಿಗಳು.

ಇವರ ಬೇಡಿಕೆಯೂ ಅಂತ ದೊಡ್ಡದೇನಲ್ಲ ತುಂಬಾ ಸರಳವಾದಂತಹ ಬೇಡಿಕೆಗಳಿರುವವು ಮುಖ್ಯವಾಗಿ ತಮಗೆ ಬಗರ್‌ಹುಕುಂ ಅಡಿ ಜಮೀನು, ವಾಸಿಸಲು ಆಶ್ರಯಮನೆ, ಪಡಿತರ ಚೀಟಿ, ನೀಡುವುದು ಇಂತಹ ಸರಳವಾದ ಬೇಡಿಕೆಗಳನ್ನು ಸರಕಾರ ಈಡೇರಿಸುವುದು ಕಷ್ಟವೇನಲ್ಲ. ಕಾರ್ಖಾನೆ ಸ್ಥಾಪಿಸುವುದಕ್ಕಾಗಿ ಬಂಡವಾಳ ಷಾಹಿಗಳಿಗೆ ಬಹುಬೇಗನೆ ಬೇಡಿಕೆ ಈಡೇರಿಸುವ ಸರ್ಕಾರ ಈ ಜನಾಂಗದ ಸಣ್ಣ ಬೇಡಿಕೆಯನ್ನು ಈಡೇರಿಸಬಹುದು. ಉತ್ತರ ಭಾರತದಲ್ಲಿ ಮದಾರಿ ಖಲಂದರಗಳನ್ನು ಪರಿಶಿಷ್ಟ ಜಾತಿಗೆ ಸೇರಿಸಿ ಅವರಿಗೆ ಪರ್ಯಾಯ ಉದ್ಯೋಗಕ್ಕೆ ಅಲ್ಲಿಯ ಸರಕಾರ ನೆರವು ನೀಡುತ್ತಿದೆ. ಆದರೆ ಕರ್ನಾಟಕದಲ್ಲಿಯ ಮದಾರಿ ಖಲಂದರರನ್ನು ೨ಬಿ ವರ್ಗಕ್ಕೆ ಸೇರಿಸಿ ಸೌಲಭ್ಯಸಿಗದಂತೆ ಮಾಡಿರುವುದು ಜನಾಂಗದ ಅಸಮಾದಾನಕ್ಕೆ ಕಾರಣವಾಗಿದೆ. ಸರಕಾರವು ಇನ್ನಾದರೂ ಖಲಂದರ ಮದಾರಿಗಳ ಕಷ್ಟವನ್ನು ನೀಗಿಸಿ ಪರ್ಯಾಯ ಉದ್ಯೋಗ ಕಲ್ಪಿಸಿ ಇತರ ಬೇಡಿಕೆಗಳನ್ನು ಈಡೇರಿಸಬೇಕಾಗಿದೆ.

ಸರಕಾರವು ಮದಾರಿ ಖಲಂದರರ ಶ್ರೇಯಾಭಿವೃದ್ಧಿಗಾಗಿ ಕೆಲವು ವಿಶೇಷ ಅಭಿವೃದ್ಧಿ ಕ್ರಮಗಳನ್ನು ಕೈಗೊಳ್ಳಬಹುದಾಗಿದೆ.

೧. ಮಾನವ ಸಂಪತ್ತಿನಿಂದ ಅಭಿವೃದ್ಧಿಯಾಗ ಬೇಕಾಗಿದೆ. ಈ ಸಮುದಾಯ ಬಯಸುವಂತ ಮತ್ತು ಬಹುಕಾಲದವರೆಗೆ ಬದುಕನ್ನು ಕಟ್ಟಿಕೊಡಲು ಬೇಕಾದ ಅಭಿವೃದ್ಧಿ ಕ್ರಮ ಕೈಗೊಳ್ಳಬೇಕಾಗಿದೆ.

೨. ಪಾರಂಪರಿಕ ವೃತ್ತಿಯ ಪರ್ಯಾಯವಾಗಿ ತಾಂತ್ರಿಕ, ಕರಕುಶಲ ಕಲೆಗಳ ಬಗೆಗೆ ತರಬೇತಿ ನೀಡುವುದು, ಕರಕುಶಲ ತಂತ್ರಜ್ಞಾನವನ್ನು ಆಧುನಿಕತೆಯ ಸಂಯೋಗದಿಂದ ಸಮಕಾಲೀನಗೊಳಿಸಬೇಕು. ಅವುಗಳಿಗೆ ಬೇಕಾದ ಮಾರುಕಟ್ಟೆಯನ್ನು ದೇಶಿಯವಾಗಿ ವಿಸ್ತರಿಸಬೇಕು.

೩. ಮದಾರಿಗಳು ತಮ್ಮ ಮೂಲ ಸಂಸ್ಕೃತಿ ವೃತ್ತಿ ಸಂಸ್ಕೃತಿ ಯಲ್ಲೇ ಬದುಕನ್ನು ನಡೆಸುತ್ತಿದ್ದಾರೆ. ಇದನ್ನು ತೊಡೆದು ಹಾಕಿ ಹೊಸಕಾಲದ ಎಚ್ಚರದಲ್ಲಿ ಇವರ ಸಂಸ್ಕೃತಿ ಸಾಧ್ಯವಾಗಿಸಿಟ್ಟು ಉತ್ಪಾದನಾ ಆಧ್ಯಾತ್ಮದಲ್ಲಿ ಪುನರ್ ಸಂಘಟಿಸಬೇಕು.

೫. ಮದಾರಿಗಳು ವಾಸಿಸುವ ಪ್ರದೇಶವು ಕಲುಷಿತವಾಗಿದ್ದು ಮೂಲಭೂತ ಸಮಸ್ಯೆಗಳನ್ನು ಎದುರಿಸುತ್ತಿದ್ದು ಇವರ ಪ್ರದೇಶಗಳಲ್ಲಿಯ ಆರೋಗ್ಯಸ್ಥಿತಿಯನ್ನು ಸುಧಾರಿಸಬೇಕು.

೬. ಸಂವಿಧಾನಿಕ ಸಂಹಿತೆಗಳನ್ನು ಮತ್ತಷ್ಟು ಬಲಪಡಿಸಬೇಕು.

೭. ಮದಾರಿ ಮಕ್ಕಳ ಶೈಕ್ಷಣಿಕ ಮಟ್ಟ ಕುಸಿದಿದ್ದು ಪುನಃ ಮೂಲ ವೃತ್ತಿ ಕೈಗೊಳ್ಳಲು ಹಾಗೂ ಬಾಲಕಾರ್ಮಿಕರಾಗುವುದಕ್ಕೆ ಹೊರಟಿರುವುದನ್ನು ಸರ್ಕಾರ ಕೂಡಲೇ ಗಮನಿಸಿ ಅವರ ಶೈಕ್ಷಣಿಕ ಪ್ರಗತಿಗೆ ಸಹಾಯಕವಾಗಲು ಕೆಲವು ಆಕರ್ಷಕ ಯೋಜನೆಗಳನ್ನು ಈ ಜನಾಂಗಕ್ಕಾಗಿ ಪ್ರತ್ಯೇಕವಾಗಿರಬೇಕು.

೮. ಮದಾರಿಗಳು ಪ್ರಾಣಿ ಕೌಶಲ್ಯದ ನಿಪುಣರಾಗಿದ್ದು ಬೇಗನೆ ಪ್ರಾಣಿಗಳ ಚಲನ-ವಲನ ಅರಿತುಕೊಳ್ಳುವವರಾಗಿದ್ದು ಇಂತಹವರನ್ನು ಸರ್ಕಾರದ ಅಧೀನದಲ್ಲಿರುವ ಪ್ರಾಣಿಸಂಗ್ರಹಾಲಯ ಕೇಂದ್ರಗಳಲ್ಲಿ ನೌಕರರನ್ನಾಗಿ ನೇಮಿಸಿಕೊಳ್ಳಬೇಕು. ಆಗ ಪ್ರಾಣಿಗಳಿಗೆ ಅಗತ್ಯವಾದ ಬೇಡಿಕೆ ಅದರ ಆರೋಗ್ಯ ರಕ್ಷಣೆ, ಪೋಷಣೆಯ ಕಡೆ ಹೆಚ್ಚಿನ ಗಮನ ಹರಿಸುತ್ತಾರೆ. ಪ್ರಾಣಿಗಳ ಆರೋಗ್ಯವು ಚೆನ್ನಾಗಿರುತ್ತದೆ.

೯. ಮದಾರಿ ಹೆಣ್ಣುಮಕ್ಕಳ ಸ್ಥಿತಿ ಅತ್ಯಂತ ಶೋಚನೀಯವಾಗಿದ್ದು ಶಿಕ್ಷಣದಿಂದ ವಂಚಿತರಾಗಿ ಅನಕ್ಷರಸ್ಥರಾಗಿ ಸಮಸ್ಯೆಗಳ ಸುಳಿಯಲ್ಲಿರುವರು. ಮನೆಯಲ್ಲಿ ಹಿರಿಯರು ಬೇಗನೆ ಮದುವೆ ಮಾಡಿಕೊಡುವುದು ಹೀಗೆ ಮದುವೆಯಾಗಿ ಹೆಚ್ಚಿನ ಮಕ್ಕಳನ್ನು ಹೇರುವುದು ಅವರ ಪೋಷಣೆಯ ಮಾಡುವುದು ಇದೆ ಇವರ ಜೀವನಸ್ಥಿತಿಯಾಗಿದೆ. ಸರಕಾರವು ಹೆಣ್ಣುಮಕ್ಕಳಿಗೆ ವಿಶೇಷ ಶೈಕ್ಷಣಿಕ ಸೌಲಭ್ಯ ನೀಡಬೇಕು. ಇವರ ಪೋಷಕರ ಬಡತನ ಸುಧಾರಿಸಲು ಅವರಿಗೆ ಕೆಲವು ವಿಶಿಷ್ಟ ಕರಕುಶಲ ಹಾಗೂ ವೃತ್ತಿ ಕೌಶಲ್ಯಗಳಂತಹ ಕೆಲಸಗಳ ತರಬೇತಿ ನೀಡಬೇಕು.

೧೦. ಮದಾರಿಗಳ ಬಹುಮುಖ್ಯ ಬೇಡಿಕೆಗಳಾದ ಬಗರ್‌ಹುಕುಂ ಅಡಿ ಜಮೀನು, ಆಶ್ರಯಮನೆ, ಪಡಿತರಚೀಟಿ (BPL) ಈ ಪ್ರಾಥಮಿಕ ಬೇಡಿಕೆಗಳು ಅತಿ ಜರೂರಾಗಿ ಈಡೇರಬೇಕು ಸರಕಾರ ಆದಷ್ಟು ಬೇಗನೆ ಇವುಗಳನ್ನು ಈಡೇರಿಸಬೇಕಾಗಿದೆ.

೧೧. ಮದಾರಿಗಳು ವಾಸಿಸುವ ಪ್ರದೇಶದಲ್ಲಿ ಮೂಲಭೂತ ಸೌಲಭ್ಯಗಳಾದ ರಸ್ತೆ, ಸಾರಿಗೆ, ಆರೋಗ್ಯ ಶಿಕ್ಷಣದಂತಹ ಸೌಲಭ್ಯಗಳನ್ನು ಪ್ರಥಮ ಆದ್ಯತೆಯನ್ನಾಗಿ ನೀಡಿ ಈ ಜನಾಂಗದ ಅಭಿವೃದ್ಧಿಗಾಗಿ ಯೋಜನೆಗಳನ್ನು ಹಾಕಿಕೊಳ್ಳಬೇಕು.

೧೨. ಮದಾರಿಗಳಿಗಾಗಿ ಪ್ರತ್ಯೇಕ ಮೀಸಲಾತಿಯನ್ನು ಕಲ್ಪಿಸಬೇಕು. ಸಾವಿರಾರು ವರ್ಷಗಳಿಂದ ಮೂಲ ವೃತ್ತಿಯಲ್ಲಿ ಅವಲಂಬಿತವಾದ ಈ ಜನಾಂಗಕ್ಕೆ ಇಂದು ಮೀಸಲಾತಿ ಅತಿ ಜರೂರಿ ಎನಿಸಿದೆ.

೧೩. ಪ್ರಾಣಿದಯಾ ಸಂಘದವರ "ಪ್ರಾಣಿ ಹಿಂಸೆ ಅಪರಾಧ" ಎಂಬ ನಿಯಮವೇನು ಒಳ್ಳೆಯದು ಅವರಿಗೆ ನಾವು ಎಲ್ಲ ರೀತಿಯಿಂದಲೂ ಸಹಕರಿಸುತ್ತೇವೆ. ಅದರಂತೆ ಆ ಸಂಘವು ಶತಮಾನಗಳಿಂದ ಪ್ರಾಣಿಯನ್ನು ಅವಲಂಭಿಸಿದ ತಮಗೆ ಮುಂದಿನ ಜೀವನಕ್ಕೆ ಅಗತ್ಯವಾದ ಮಾರ್ಗೋಪಾಯಗಳ

ಬಗ್ಗೆ ಯೋಜನೆ ಹಾಕಿಕೊಂಡು ಸರ್ಕಾರಕ್ಕೆ ಸಮಗ್ರ ವರದಿ ತಯಾರಿಸಿಕೊಡುವುದು ಉತ್ತಮವೆಂಬುದು ಜನಾಂಗದ ಸಹಮತ ಹಾಗೂ ಸರಕಾರವು ಇದನ್ನು ಗಮನಿಸಬೇಕಾಗಿದೆ.

೧೪. ಉತ್ತರ ಭಾರತದಲ್ಲಿಯ ಕರಡಿಯಾಡಿಸುವ ಮದಾರಿಗಳಿಗೆ ಅಲ್ಲಿಯ ಸರ್ಕಾರ ಈಗಾಗಲೇ ಅಗತ್ಯ ಸೌಲಭ್ಯ ಕಲ್ಪಿಸಿಕೊಟ್ಟಿದೆ. ಆದೇ ರೀತಿ ನಮ್ಮ ಕರ್ನಾಟಕ ಸರ್ಕಾರವು ಬೇದಭಾವ ಮಾಡದೆ ಜನಾಂಗದ ಬಗೆಗೆ ಸರ್ವೆಮಾಡಿ ಮಾಹಿತಿ ಸಂಗ್ರಹಿಸಿ ಅವರಿಗೆ ಅಗತ್ಯ ಮಾರ್ಗೋಪಾಯಗಳನ್ನು ಕಲ್ಪಿಸಬೇಕು.

೧೫. ಸಂಪತ್ತಿನ ಕೇಂದ್ರಿಕರಣ ತಡೆದು ಸಂಪತ್ತಿನ ಪಾಲುಗಳು ಇಂತಹ ಅಲೆಮಾರಿ ಸಮುದಾಯಕ್ಕೆ ಸೇರುವಂತೆ ಕ್ರಮ ಕೈಗೊಳ್ಳಬೇಕು.

WSOS ಎಂಬ ಪ್ರಾಣಿದಯಾ ಸಂಸ್ಥೆ

ವೈಲ್ಡ್ ಲೈಫ್ SOS ಎಂಬ ಪ್ರಾಣಿದಯಾ ಸಂಸ್ಥೆಯು ಅಳಿವಿನಂಚಿನಲ್ಲಿರುವ ಪ್ರಾಣಿ ಪಕ್ಷಿಗಳನ್ನು ರಕ್ಷಿಸುವ ಸಲುವಾಗಿ ಹುಟ್ಟಿಕೊಂಡಿರುವಂತಹದ್ದು. ಈ ಸಂಸ್ಥೆಯ ಪ್ರಧಾನ ಕಛೇರಿ ದೆಹಲಿಯ ಸಮೀಪದ ಅಗ್ರಾ ಪ್ರದೇಶದಲ್ಲಿದೆ. ದೇಶದೊಳಗಿನ ಎಲ್ಲ ಪ್ರಾಣಿ ಧಾಮ ಪಕ್ಷಿದಾಮಗಳ ಕಾರ್ಯವನ್ನು ಅದರ ಆಗು-ಹೋಗು ಸಿಬ್ಬಂದಿಗಳ ಕಾರ್ಯವನ್ನು ನೋಡಿಕೊಳ್ಳುತ್ತದೆ. ಪ್ರಾಣಿ ಪಕ್ಷಿಗಳ ಜೀವವನ್ನು ಕಣ್ಣಲ್ಲಿ ಕಣ್ಣಿಟ್ಟುಪ್ರಾಣಿ ಹತ್ಯಾಚೋರರಿಂದ ರಕ್ಷಿಸಿ ಅವುಗಳನ್ನು ಚೆನ್ನಾಗಿ ಸಾಕಿ ಅದರ ಪಾಲನೆ ಪೋಷಣೆಯ ಜವಾಬ್ದಾರಿಯನ್ನು ಹೊತ್ತುಕೊಂಡು ಈ ಸಂಸ್ಥೆಯು ಕೆಲವು ಮೂಲ ಉದ್ದೇಶಗಳನ್ನಿ (ಪ್ರಾಣಿಗಳಿಗೆ ಸಂಬಂಧಿಸಿದದ್ದು)ಟ್ಟುಕೊಂಡು ಅದಕ್ಕೆ ಪರ್ಯಾಯ ಕಾರ್ಯಗಳನ್ನು ನಿರ್ವಹಿಸಿಕೊಂಡು ಬರುತ್ತಿದೆ. ಈ ಸಂಸ್ಥೆಯು ಇಂತಹದೆ ಪ್ರಾಣಿ ಪಕ್ಷಿ ರಕ್ಷಿಸಬೇಕೆಂಬ ನಿಯಮ ಹೊಂದದೆ ಎಲ್ಲಾ ಜಾತೀಯ ಪ್ರಾಣಿ ಪಕ್ಷಿಗಳು ಅಂದರೆ ಕರಡಿ, ಹುಲಿ, ಚಿರತೆ, ಆಮೆ, ಮೊಲ, ಜಿಂಕೆ, ನವಿಲು, ಕೋಗಿಲೆ, ಇತರೆ ಜಾತೀಯ ಪಕ್ಷಿಗಳು ಇನ್ನಿತರ ನೂರಾರು ಬಗೆಯ ಪ್ರಾಣಿ ಪ್ರಭೇದಗಳನ್ನು ರಕ್ಷಿಸಿಕೊಂಡು ಬರುತ್ತಿದೆ. ಇಂತಹ ಸಂಸ್ಥೆ ಸರಕಾರದ ಕೆಲವು ಉದ್ದೇಶಗಳನ್ನು ಈಡೇರಿಸುವ ಸಲುವಾಗಿ ಸರಕಾರದೊಂದಿಗೆ ಕೈ ಜೋಡಿಸಿ ದೇಶಾದ್ಯಂತ ಹತ್ತು ಹಲವು ಕಾರ್ಯಕ್ರಮಗಳನ್ನು ನಡೆಸುತ್ತಾ ಬಂದಿದೆ. ಸಂಸ್ಥೆ ತನ್ನ ಕೆಲಸಕ್ಕಾಗಿ ದೇಶದ ತುಂಬಾ ವನ್ಯಜೀವಿ ಧಾಮಗಳಿರುವಡೆ ಸಮಾಜ ಕಾರ್ಯಕರ್ತರನ್ನು ನೇಮಿಸಿ ಅವರಿಗೆ ಸಂಬಳವನ್ನು ನೀಡಿ ಜೀವನೋಪಾಯವನ್ನು ಕಲ್ಪಿಸಿದೆ ಇದರಿಂದ ಸಾವಿರಾರು ನಿರುದ್ಯೋಗಿಗಳಿಗೆ ಉದ್ಯೋಗವನ್ನು ಈ ಸಂಸ್ಥೆ ಕಲ್ಪಿಸಿದೆ ಇನ್ನೊಂದು ವಿಶೇಷವೆಂದರೆ ಈ ಸಂಸ್ಥೆ ಪ್ರಾಣಿಯಾಡಿಸಿ ಬದುಕುತ್ತಿದ್ದ ಸಮುದಾಯ ಪ್ರಾಣಿ ನಿಷೇದದಿಂದ ಉದ್ಯೋಗ ಕಳೆದುಕೊಂಡ ಕುಟುಂಬದಲ್ಲಿಯ ಒಬ್ಬರನ್ನು ತನ್ನ ಸಂಸ್ಥೆಯಲ್ಲಿ ಉದ್ಯೋಗವನ್ನು ನೀಡಿ ಮಾನವೀಯತೆಯನ್ನು ತೋರಿದೆ.

ಕೆಲವು ಅಲೆಮಾರಿ ಬುಡಕಟ್ಟು ಸಮುದಾಯಗಳು ನೂರಾರು ವರ್ಷಗಳಿಂದ ಪ್ರಾಣಿಗಳನ್ನು ಪ್ರದರ್ಶಿಸಿ ಜನರಿಗೆ ಮನರಂಜನೆ ನೀಡುತ್ತಾ ಅದನ್ನು ವೃತ್ತಿ ಕಸುಬನ್ನಾಗಿ ಕಲೆಯ ರೀತಿಯಲ್ಲಿ ಮೈಗೂಡಿಸಿಕೊಂಡು ಬಂದಿದ್ದಾರೆ. ಚರಿತ್ರೆಯ ಕಾಲದಿಂದಲೇ ಇವರ ವೃತ್ತಿ ಪ್ರಾರಂಭವಾಯಿತೆಂದು ಈ ಸಮುದಾಯಗಳು ಹೇಳುತ್ತವೆ. ಇಂತಹ ಅಲೆಮಾರಿಗಳ ಪ್ರಾಣಿ ಪ್ರದರ್ಶನವು ಮಾರಕವಾಗಿ ಇಂದಿನ ದಿನಗಳಲ್ಲಿ ಸರ್ಕಾರ ಪ್ರಾಣಿ ಸಂತತಿ

ಕ್ಷೀಣಿಸುವಿಕೆಯನ್ನು ಅರಿತು ಸಂತತಿಯನ್ನು ಉಳಿಸುವುದರ ಸಲುವಾಗಿ ವೈಲ್ಡ್ ಲೈಫ್ ಸಂಸ್ಥೆಯೊಂದಿಗೆ ಕೈ ಜೋಡಿಸಿ ಪ್ರಾಣಿ ಸಂರಕ್ಷಣೆಯ ಜವಾಬ್ದಾರಿ ಸಂಸ್ಥೆಗೆ ಕೊಟ್ಟಿದೆ. ವೈಲ್ಡ್ ಲೈಫ್ ಸಂಸ್ಥೆ ಸರ್ಕಾರದ ಉದ್ದೇಶವನ್ನು ಈಡೇರಿಸುವುದರ ಸಲುವಾಗಿ ದೇಶದ ಕೆಲವು ಭಾಗಗಳಲ್ಲಿ ವಾಸವಾಗಿರುವ ಅಲೆಮಾರಿ ಇಬುಡಕಟ್ಟು ಸಮುದಾಯದವರು ಜೀವನೋಪಾಯಕ್ಕಾಗಿ ಪ್ರಾಣಿ ಪ್ರದರ್ಶನ ವೃತ್ತಿಯನ್ನೇ ಕೈಗೊಂಡವಂತಹವರು ಅಂದರೇ ಕೋತಿಯಾಡಿಸುವ, ಕರಡಿಯಾಡಿಸುವ, ಹಾವಾಡಿಸುವ ಗಿಣಿಶಾಸ್ತ್ರ ಹೇಳುವ ಇನ್ನೂ ಹಲವು ವೃತ್ತಿಯನ್ನು ಹೊಂದಿರುವಂತಹರ ಹತ್ತಿರ ಹೋಗಿ ಪ್ರಾಣಿ ಪ್ರದರ್ಶಿಸುವುದು, ಹಿಂಸಿಸುವುದು ಸರ್ಕಾರದ ೧೯೭೨ರ ಆಕ್ಟ್‌ನ ಪ್ರಕಾರ ಅಪರಾಧ ಜೈಲಿಗೆ ಹೋಗಬೇಕಾಗುತ್ತದೆ. ಅದರಿಂದಾಗುವ ಮುಂದಿನ ಅನಾಹುತವನ್ನು ಅವರಿಗೆ ತಿಳಿಸಿಕೊಡುತ್ತಾರೆ. ಪ್ರಾಣಿಗಳನ್ನು ತಮಗೊಪ್ಪಿಸಿ ತಾವು ಅದಕ್ಕೆ ಪರಿಹಾರವಾಗಿ ಹಣವನ್ನು ನೀಡುತ್ತೇವೆ. ಜೊತೆಗೆ ಸಮುದಾಯದ ಹೆಂಗಸರಿಗೆ ಬಾಲಕೀಯರಿಗೆ ಕೆಲವು ವೃತ್ತಿ ಕೌಶಲ್ಯಗಳನ್ನು ಕಲಿಸಿ ತರಬೇತಿ ಕೊಡಿಸುತ್ತೇವೆ. ಎಂದೆಲ್ಲಾ ಭರವಸೆ ನೀಡಿ ಅವರಲ್ಲಿ ಆ ಕ್ಷಣಕ್ಕೆ ಆದ ದುಃಖವನ್ನು ಮರೆಸಿ ಮುಖದಲ್ಲಿ ಚೈತನ್ಯವನ್ನು ತಂದರು ತಲೆಮಾರಿನಿಂದ ಉಳಿಸಿಕೊಂಡು ಬಂದ ವಂಶ ವೃತ್ತಿಯನ್ನು ಬಿಡುವುದು ಸುಲಭದ ಮಾತಲ್ಲ ಅದು ಅಪ್ಪ ಹಾಕಿದ ಆಲದ ಮರವಾಗಿತ್ತು ಎಂಬುದು ಸಮುದಾಯದ ಗಾಢ ನಂಬಿಕೆಯಾಗಿತ್ತು. ಈ ನಂಬಿಕೆಯೇ ತಮ್ಮನ್ನು ತಮ್ಮ ಕುಟುಂಬವನ್ನು ಸಾಕಿಕೊಂಡು ಬಂದಿದೆ. ಎಂಬುದೇ ಈ ವೃತ್ತಿ ಅವಲಂಬಿತ ಸಮುದಾಯಗಳ ಅಂತರಂಗದ ಮಾತಾಗಿತ್ತು. ಸಂಸ್ಥೆಗೆ ಇದು ಮೇಲ್ನೋಟವಾಗಿ ಕಂಡುಬಂದಿತು. ಸಮುದಾಯದ ಅಂತರಂಗವನ್ನು ತಿಳಿಯಲು ಪ್ರಯತ್ನಿಸಲಿಲ್ಲ. ಮೊದ-ಮೊದಲು ಸಂಸ್ಥೆಯವರು ಬಹು ಹುರುಪಿನಿಂದ ಕರಡಿ ಇಲ್ಲದ ಸಮುದಾಯದ ಹೆಣ್ಣು ಮಕ್ಕಳಿಗೆ ಎಂಬ್ರಾಯಡೆರಿ ಹೊಲಿಗೆ ತರಬೇತಿ, ಕಸೂತಿ ಕೆಲಸ, ಬಟ್ಟೆ ಹೊಲಿಯುವುದು ಇಂತಹ ಹಲವು ಕೌಶಲ್ಯಗಳನ್ನು ನೀಡಿತಾದರೂ ಇಂತಹ ಕೌಶಲ್ಯಗಳನ್ನು ತಿಳಿಯುವುದಕ್ಕೆ ಅಕ್ಷರ ಜ್ಞಾನ ಸಾಮಾನ್ಯ ತಿಳುವಳಿಕೆ ಬೇಕು. ಇದು ಈ ಮದಾರಿ ಹೆಣ್ಣು ಮಕ್ಕಳು, ಹೆಂಗಸರಲ್ಲಿ ಇರುವುದಿಲ್ಲ. ಬರೀ ಮನೆಯ ಮಕ್ಕಳ ಪೋಷಣೆ, ಪ್ರಾಣಿ (ಕರಡಿ)ಯ ಸಾಕುವಿಕೆ, ಗಂಡನ ಊಟೋಪಚಾರದಂತಹ ಕಾರ್ಯಗಳೇ ಇವರಿಗೆ ಗುಡ್ಡದಂತಹ ಕೆಲಸಗಳಾಗಿದ್ದವು. ಇನ್ನು ಅಕ್ಷರ ಕಲಿಯುವುದಲ್ಲಿ ಅನಕ್ಷರಸ್ಥ ಎಂಬ ಪಟ್ಟಿಯನ್ನು ಹಣೆಗೆ ಕಟ್ಟಿಕೊಂಡು ಬಂದಿದ್ದಾರೆ. ಸಂಸ್ಥೆ ಇವರ ಅನಕ್ಷರತೆಯ ಸಮಸ್ಯೆ ತಿಳಿಯುವುಲ್ಲಿ ಸ್ವಲ್ಪ ಎಡವಿತು. ಆದರೂ ಹೆಣ್ಣು ಮಕ್ಕಳು ಹಾಗೂ ಹೆಂಗಸರು ವೃತ್ತಿ ಕಲಿಯಲು ಸೌಲಭ್ಯ ಹಾಗೂ ಯೋಜನೆಗಳನ್ನು ಪರಿಣಾಮಕಾರಿಯಾಗಿ ಜಾರಿಗೆ ತಂದಿತು. ಆದರೆ ಇದರ ಉಪಯೋಗವನ್ನು ಮಾತ್ರ ಮದಾರಿಗಳು ಬಳಸಿಕೊಳ್ಳಲಿಲ್ಲ. ಈ ಸಮುದಾಯವು ಸರ್ಕಾರದ ಗಮನಕ್ಕೆ ಇದುವರೆಗೂ ಬರದಿದ್ದದು. ಸಂಸ್ಥೆಯ ಬಗೆಗೆ ಈ ಸಮುದಾಯದವರನ್ನು ವಿಚಾರಿಸಿದಾಗ ಶೇ ೭೦ ರಷ್ಟು ಜನ ಸಂಸ್ಥೆಯ ಕ್ರಮವು ಸರಿಯಾದುದಾದರೂ ತಮ್ಮ ಸಂಸಾರ ಬೀದಿಗೆ ಬರುವಂತಾಗಿದೆ ಹಾಗೂ ತಮಗೆ ಪರ್ಯಾಯವಾಗಿ ಸರ್ಕಾರದಿಂದ ಯಾವುದೇ ಸೌಲಭ್ಯ ಅಂದರೇ ಮನೆ, ಜಮೀನು, ಉದ್ಯೋಗದಂತಹ ಜೀವನ ಭದ್ರತೆಯನ್ನು ಕಲ್ಪಿಸದೆ ಇರುವುದು ಎಂಬ ಅಭಿಪ್ರಾಯ ಕೇಳಿಬಂದಿತು. ಇನ್ನು ಶೇ ೩೦ ರಷ್ಟುಜನರಿಗೆ ಸಂಸ್ಥೆಯು ನೀಡಿದ ೫೦,೦೦೦ ಸಾವಿರ ಹಣದಿಂದ ತಾವು ಕೆಲವರು ಆಟೋ ನಡೆಸುತ್ತಾ, ಅಂಗಡಿ ನಡೆಸುವುದು, ತಮ್ಮ ಹೆಣ್ಣುಮಕ್ಕಳ ವಿವಾಹ

ಮಾಡಿದುದರ ಬಗೆಗೆ ಹೇಳಿದಾರಾದರೂ ಇವರು ಕೂಡಾ ತಾವು ಹೇಳುವ ಮಾತಿನ ದಾಟಿಯಲ್ಲಿ ಸ್ವಲ್ಪ ಕಂಡುಬಂದಿತು. ತಮಗೆ ನೀಡಿದ ಹಣವು ಮಕ್ಕಳ ಮದುವೆ, ಮಾಡಿದುದರಲ್ಲಿ ಹೋಯಿತು. ಎಂದು ಇನ್ನೊಬ್ಬರು ಹೇಳುವ ಪ್ರಕಾರ. ಅಂಗಡಿಗೆ ನಾವು ಬಂಡವಾಳ ಹಾಕಿದವೇನೂ ನಿಜ ಆದರೆ ಇಂದಿನ ದಿನಗಳಲ್ಲಿ ಸಂಸ್ಥೆ ನೀಡಿದ ಹಣ ಸಾಕಾಗುವುದಿಲ್ಲವೆಂದು ಕಣ್ಣೀರಿಟ್ಟರು. ಇದೆಲ್ಲಕ್ಕಿಂತ ಕರಡಿಯೇ ಎಷ್ಟೋ ಉತ್ತಮವಾಗಿತ್ತು. ಎಂಬ ಅಭಿಪ್ರಾಯ ಕೇಳಿಬಂದಿತು. ಆದರೆ ಅದು ಆ ಕ್ಷಣದ ನೋವಿನಿಂದ ಸಮುದಾಯವು ವೃತ್ತಿಯನ್ನು ಮತ್ತೊಮ್ಮೆ ನೆನಸಿಕೊಂಡು ಆ ಮಾತು ಆಡಿತ್ತು.

ಇನ್ನೊಂದು ಘಟನೆಯು ಈ ಸಮುದಾಯದವರ ಮುಗ್ಧತೆಯನ್ನು ಕೆಲವು ಹೊರಗಿನ ಕೆಲವು ದುಷ್ಟವ್ಯಕ್ತಿಗಳು ಪ್ರಾಣಿದಯಾಸಂಸ್ಥೆ ಹಾಗೂ ಸರಕಾರದ ಹೆಸರನ್ನು ಬಳಸಿಕೊಂಡು ಈ ಜನರಿಂದ ಬಹಳಷ್ಟುಹಣವನ್ನು ಹದ್ದಿನಂತೆ ಕಿತ್ತುಕೊಂಡಿದೆ. ಹೀಗೆ ಈ ಜನರು ಸರಕಾರದಿಂದ ಸೌಲಭ್ಯ ಸಿಗುತ್ತದೆಂಬ ಆಸೆಯಿಂದ ಹೊರಗಡೆ ಬಡ್ಡಿಯಂತೆ ಹಣ ತಂದು ದುಷ್ಟರ ಬಾಯಿಯಲ್ಲಿ ಸುರಿಯುತಿದ್ದಾರೆ. ಇದರಿಂದ ಇನ್ನಷ್ಟು ಬಡತನವನ್ನು ಈ ಜನರು ಈಗ ಅನುಭವಿಸುತ್ತಿದ್ದಾರೆ. ಸಂಸ್ಥೆಯು ತನ್ನ ಕರ್ತವ್ಯವೇನೂ ಮಾಡಿದೆ. ಆದರೆ ಕೇವಲ ಕರಡಿ ಕಿತ್ತುಕೊಂಡ ಬಳಿಕ ಅವರಿಗೆ ಕೊಡುವ ಹಣವು ಅವರಿಗೆ ಶಾಶ್ವತ ಪರಿಹಾರವಾಗಲಾರದು. ಆ ಹಣವನ್ನು ಈ ಸಮುದಾಯದವರು ಗಳಿಸಬಲ್ಲರು. ಹಣದ ಪರ್ಯಾಯವಾಗಿ ಸಂಸ್ಥೆ ಇವರ ಸಮಗ್ರ ಜೀವನ ಕುಟುಂಬದ ಸಮಗ್ರ ಮಾಹಿತಿಯನ್ನು ಸರ್ವೇ ಮಾಡಿಕೊಂಡು ಕರಡಿಯಿರುವ ಪ್ರತಿ ಕುಟುಂಬದ ವಿವರ ಪಡೆದು ಆ ವಿವರವನ್ನು ಪರಿಶೀಲಿಸಿ ಸರಕಾರಕ್ಕೆ ಕಳಿಸಬೇಕು. ಅವರಿಗೆ ಸರಕಾರದಿಂದ ಸಿಗಬೇಕಾದ ಸೌಲಭ್ಯಗಳನ್ನು ವರದಿ ಅಥವಾ ವಿವರ ಮಾಹಿತಿಯೊಳಗೆ ತಿಳಿಸಬೇಕು. ಇಂದಿನ ದಿನಗಳಲ್ಲಿ ಈ ಮದಾರಿಗಳ ಬದುಕುವ ಸ್ಥಿತಿಗತಿಯನ್ನು ಕುರಿತು ಸಮಗ್ರ ಮಾಹಿತಿಯನ್ನು ತಯಾರಿಸಿ ಸರಕಾರಕ್ಕೆ ಸಲ್ಲಿಸಬೇಕಾಗಿದೆ. ಈ ಸಮುದಾಯಕ್ಕೆ ಮೀಸಲಾತಿಯನ್ನು ಕೊಡಲು ಸಮುದಾಯದ ಪೂರ್ಣ ಮಾಹಿತಿಯನ್ನು ಸಂಸ್ಥೆ ಪಡೆದು ಸರ್ಕಾರಕ್ಕೆ ಕಳಿಸಿಕೊಡಬೇಕು. ಈಗಾಗಲೇ ಈ ಸಮುದಾಯ ಹಿಂದುಳಿದ ವರ್ಗ ೨ಬಿ, ಗೆ ಸೇರಿ ಹಲವು ಕಷ್ಟನಷ್ಟಗಳನ್ನು ಎದುರಿಸುತ್ತಿದೆ. ಈ ೨ಬಿ, ಸೌಲಭ್ಯದಿಂದ ಯಾವುದೇ ಉಪಯೋಗವಾಗುತ್ತಿಲ್ಲ. ಇವರು ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ಪಂಗಡಕ್ಕೆ ಈ ಸಮುದಾಯ ಅರ್ಹವಾಗಿದೆ ಎಂದು ಇವರ ಮೂಲ ಆಧಾರವನ್ನು ಪರಿಗಣಿಸಿ ಸಂಸ್ಥೆಯು ಸರ್ಕಾರದ ಗಮನಕ್ಕೆ ತರುವ ಪ್ರಯತ್ನ ಮಾಡಬೇಕು. ಸರ್ಕಾರದಿಂದ ಆದಷ್ಟು ಹೆಚ್ಚಿನ ರೀತಿಯ ಸೌಲಭ್ಯಗಳನ್ನು ಜೊತೆಗೆ ಈ ಜನಾಂಗಕ್ಕೆ ಪ್ರತ್ಯೇಕ ಮೀಸಲಾತಿಯ ಸೌಲಭ್ಯವನ್ನು ಕಲ್ಪಿಸಲು ಬೇಕಾದ ರೂಪುರೇಷೆಯನ್ನು ತಯಾರಿಸಿಕೊಡಬೇಕು. ಹಾಗಾದಾಗ ಈ ಅಲೆಮಾರಿ ಸಮುದಾಯವು ಸಂಸ್ಥೆಗೆ ಋಣಿಯಾಗಿರುತ್ತದೆ.

ವೈಲ್ಡ್‌ಲೈಫ್ SOS ಸಂಸ್ಥೆಯ ಮಹತ್ವದ ಕಾರ್ಯಗಳು

ವೈಲ್ಡ್‌ಲೈಫ್ SOSಸಂಸ್ಥೆ ದೇಶಿಯ ಮಟ್ಟದಲ್ಲಿ ಮಾತ್ರ ಕಾರ್ಯನಿರ್ವಹಿಸದೆ ಅಂತರ್ ರಾಷ್ಟ್ರೀಯ ಮಟ್ಟದಲ್ಲಿ ಬೇರೆ ಬೇರೆ ದೇಶಗಳೊಡನೆ ಸಂಬಂಧವಿಟ್ಟು ಪ್ರಾಣಿಯ ಸಂರಕ್ಷಣೆಯ ಜವಾಬ್ದಾರಿಯನ್ನು ಹಗಲಿರುಳು ಶ್ರಮಿಸುತ್ತಿದೆ. ಅದಕ್ಕಾಗಿ ಸಾವಿರಾರು ಕ್ಷೇತ್ರಕಾರ್ಯಕರ್ತರನ್ನು ನೇಮಿಸಿಕೊಂಡು ಅವರಿಗೆ ಉದ್ಯೋಗವನ್ನು ಕಲ್ಪಿಸಿದೆ.

ಸಂಸ್ಥೆಯು ಪ್ರಾಣಿ ಸಂರಕ್ಷಣೆಯ ಹೆಚ್ಚಿನ ಅಭಿವೃದ್ಧಿಗಾಗಿ ಕೆಲವು ಮಹತ್ವದ ಕಾರ್ಯಗಳನ್ನು ಯೋಜನೆಗಳನ್ನು ಹಾಕಿಕೊಂಡು ಬಂದಿದೆ. ಇದರ ಕೆಲವು ಕಾರ್ಯಗಳು ಈ ಕೆಳಗಿನಂತಿವೆ.

೧. ಪ್ರಾಣಿಗಳ ಸಮಗ್ರ ದೇಹರಚನೆ ಹಾಗೂ ಅದರ ಮಾಹಿತಿಗೆ ಸಂಬಂಧಿಸಿದಂತೆ ನುರಿತ ಪ್ರಾಣಿಶಾಸ್ತ್ರಜ್ಞರಿಂದ ಕಾರ್ಯಾಗಾರಗಳನ್ನು ಏರ್ಪಡಿಸಿ ಅವರ ಸಲಹೆ ಸೂಚನೆಗಳನ್ನು ಸಂಗ್ರಹಿಸುತ್ತದೆ.

೨. ವೈಜ್ಞಾನಿಕವಾಗಿ ಅಳಿವಿನಂಚಿನಲ್ಲಿರುವ ಪ್ರಾಣಿ ಪಕ್ಷಿಗಳನ್ನು ಸರ್ವೆಮಾಡಿ ಅವುಗಳ ರಕ್ಷಣೆಗಾಗಿ ಪಣತೊಟ್ಟು ನಿಂತಿದೆ.

೩. ದೇಶಾದ್ಯಂತ ಎಲ್ಲೆಲ್ಲಿ ಪ್ರಾಣಿಗಳು ಹೆಚ್ಚಾಗಿ ವಾಸಿಸುತ್ತವೆಯೋ ಆ ಭಾಗಗಳಲ್ಲಿ ಅವುಗಳ ರಕ್ಷಣೆಗೆ ಅಗತ್ಯವಾದ ಪ್ರಾಣಿಧಾಮಗಳನ್ನು ಸ್ಥಾಪಿಸಿದೆ.

೪. ನಮ್ಮ ದೇಶದ ಕೆಲವು ಅಮೂಲ್ಯ ಪ್ರಾಣಿಗಳನ್ನುಕೊಂದು ಅವುಗಳ ಚರ್ಮವನ್ನು ಹಣದಾಸೆಗಾಗಿ ಬೇರೆ ದೇಶಕ್ಕೆ ಕಳುಹಿಸುತ್ತಿದ್ದ ಕೆಲವು ದುಷ್ಟಶಕ್ತಿ (ಕಳ್ಳರು)ಯನ್ನು ಹಿಡಿದು ಶಿಕ್ಷಿಸಿ ರಕ್ಷಿಸಿರುವುದು ಮಹತ್ವದ್ದೆನಿಸಿದೆ. ಹೀಗೆ ನಮ್ಮ ಅಮೂಲ್ಯ ಪ್ರಾಣಿಗಳನ್ನು ರಕ್ಷಿಸಿದ್ದಾರೆ.

೫. ಕರಡಿಯಾಡಿಸುವ ಮದಾರಿಗಳಿಂದ ಪಡೆದ ಕರಡಿಗಳನ್ನು ದೇಶದ ಕೆಲವು ಭಾಗಗಳಲ್ಲಿ ಸ್ಥಾಪಿತವಾಗಿರುವ ಅರಣ್ಯಧಾಮ ಅಥವಾ ಪ್ರಾಣಿಧಾಮಗಳಲ್ಲಿ ಇರಿಸಿ ಅವುಗಳ ಸಂಪೂರ್ಣರಕ್ಷಣೆಯ ಜವಾಬ್ದಾರಿಯನ್ನು ನೋಡಿಕೊಳ್ಳುತ್ತಿದೆ.

೬. ಕರಡಿ ಜಾತಿಗೆ ಸೇರಿದ ಇನ್ನೂ ಹಲವು ಬೇರೆ ಜಾತಿಯ ಕರಡಿಗಳನ್ನು (ಪ್ರಪಂಚದಾದ್ಯಾಂತ) ರಕ್ಷಿಸುವ ಕೆಲಸವನ್ನು ಮಾಡುತ್ತಿದೆ.

೭. ಮಾನವನ ಹತೋಟಿ (ನಿಯಂತ್ರಣ)ಯಲ್ಲಿರುವ ಕರಡಿಯನ್ನು ಮುಕ್ತಿಗೊಳಿಸುವ ಕಾರ್ಯವನ್ನು ಮಾಡುತ್ತದೆ.

೮. ಅಳಿವಿನಂಚಿನಲ್ಲಿರುವ ಜಿಂಕೆಗಳು ಇಂದು ಅದರ ಚರ್ಮಕ್ಕಾಗಿ ದುಷ್ಟಶಕ್ತಿಗಳು ಕೊಲ್ಲುವುದನ್ನು ಕಂಡು ಅವುಗಳ ರಕ್ಷಣೆಗಾಗಿ ಪ್ರತ್ಯೇಕ ಜಿಂಕೆದಾಮ ವಿಹಾರಗಳನ್ನು ಸ್ಥಾಪಿಸಿದೆ.

೯. ನಮ್ಮ ದೇಶದಲ್ಲಿ ಕಾಜಿರಂಗವು ಜಿಂಕೆಗಳಿಗಾಗಿಯೇ ಪ್ರಸಿದ್ಧಿ ಹೊಂದಿದ ಜಿಂಕೆಧಾಮ ಇದರ ಜವಾಬ್ದಾರಿಯನ್ನು ಈ ಸಂಸ್ಥೆ ನೋಡಿಕೊಳ್ಳುತ್ತಿದೆ.

೧೦. ಪಶ್ಚಿಮ ಬಂಗಾಳ (ಕಲ್ಕತ್ತಾ) ಭೂಪಾಲ, ಪುಣೆ ಯಂತಹ ಪ್ರಮುಖ ಸ್ಥಳಗಳಲ್ಲಿ ವಿವಿಧ ಜಾತಿಯ ಪ್ರಾಣಿಗಳಾದ ಕರಡಿ, ಹುಲಿ, ಚಿರತೆ, ಪಕ್ಷಿ ಸಂಕುಲ, ಹಾಗೂ ಹಾವಿನಂತಹ ಉರಗಸಂಕುಲಗಳು ನಾಶವಾಗುವುದನ್ನು ತಪ್ಪಿಸಿದೆ.

೧೧. ಪೂರ್ಣ ಅಳಿವಿನಂಚಿನಲ್ಲಿರುವ ಆಮೆಯಂತಹ ಅತ್ಯುಪಯುಕ್ತ ಸಂಕುಲವನ್ನು ಕಳ್ಳರಿಂದ ರಕ್ಷಿಸುವಲ್ಲಿ ಮಹತ್ತರ ಪಾತ್ರವಹಿಸಿದೆ.

೧೨. ೧೯೭೩ ರ ಸರ್ಕಾರ ಕಾಯ್ದೆಯ ಪ್ರಕಾರ ಹಾವು ಹಿಡಿಯುವುದು ಅದನ್ನು ವೃತ್ತಿಗಾಗಿ ಜನರ ಮುಂದೆ

ಆಡಿಸುವುದು ಅಪರಾಧ ಜೊತೆಗೆ ಬೇರೆ ಯಾವುದೇ ಉದ್ದೇಶಗಳಿಗೆ ಇದನ್ನು ಬಳಸುವಂತಿಲ್ಲ ಎಂಬ ಜಾಗೃತಿಯನ್ನು ಜನರಿಗೆ ಮೂಡಿಸುವ ಕಾರ್ಯಮಾಡುತ್ತಿದೆ.

೧೩. ಸಾರ್ವಜನಿಕ ಜಾಗೃತಿ ಮೂಡಿಸುವ ಸಲುವಾಗಿ ಕಾರ್ಯಕ್ರಮಗಳನ್ನು ನಡೆಸುತ್ತಿದೆ. ಅಂದರೆ ಹಾವಾಡಿಸುವುವರೆ ಆಟವನ್ನು ನೋಡಿ ಚಪ್ಪಾಳೆ ತಟ್ಟುವುದು. ಖುಷಿಪಟ್ಟು ಹಣಕೊಟ್ಟು ಅವರ ಆಟವನ್ನು ಪ್ರೋತ್ಸಾಹಿಸುವುದನ್ನು ಸಂಸ್ಥೆ ಖಂಡಿಸುತ್ತದೆ. ಹಿಂಸೆ ಎಂದು ಪರಿಗಣಿಸಿ ಅದಕ್ಕಾಗಿ ಟಿ.ವಿ.ಚಾನೆಲ್ ಮಾಧ್ಯಮಗಳಲ್ಲಿ ಕಾರ್ಯಕ್ರಮಗಳನ್ನು ಬಿತ್ತರಿಸಿ ಜಾಗೃತಿ ಮೂಡಿಸುತ್ತಾ ಬಂದಿದೆ.

೧೪. ಹಾವಿನ ಬಗೆಗೆ ಹಿಂದು ಧರ್ಮದ ಭಾರತೀಯ ಸಂಸ್ಕೃತಿಯ ಪೌರಾಣಿಕ ಕಲ್ಪನೆಯನ್ನು ಹೆಚ್ಚಿನ ರೀತಿಯಲ್ಲಿ ಮೇಲಿಂದ ಮೇಲೆ ಇದರ ಬಗೆಗೆ ಜನರಲ್ಲಿ ಪೂಜ್ಯಭಾವನೆ ಬರುವುದಕ್ಕಾಗಿ ಅವರಿಗೆ ಇದರ ಬಗೆಗೆ ಹೆಚ್ಚಿನ ರೀತಿಯ ಮಾಹಿತಿಯನ್ನು ನೀಡುತ್ತಾ ಬಂದಿದೆ. ಜನರಲ್ಲಿ ಹಾವಿನ ಬಗೆಗೆ ಪೂಜ್ಯಭಾವನೆ ಬರಲು ತುಂಬಾ ಶ್ರಮವಹಿಸಿದೆ.

ಅರಣ್ಯ ವಿಚಕ್ಷಕರನ್ನು ನೇಮಿಸುವುದು

ನಮ್ಮ ದೇಶದ ಬಹುಪಾಲು ಅರಣ್ಯ ಸಂಪತ್ತಿನಿಂದ ಕೂಡಿದ್ದು ಇಲ್ಲಿ ಸಾವಿರಾರು ಜಾತೀಯ ಕೀಟ, ಪಕ್ಷಿ, ಪ್ರಾಣಿ ಸಂಕುಲಗಳು ಕಂಡುಬರುತ್ತವೆ. ಇಂತಹ ಅಮೂಲ್ಯ ಪ್ರಕೃತಿ ಸಂಪತ್ತು ಹಾಗೂ ಪ್ರಾಣಿಸಂಪತ್ತನ್ನು ದೋಚುತ್ತಿರುವ ಕಳ್ಳರನ್ನು ಹಿಡಿಯಲು, ಪತ್ತೆಗಾಗಿ ವೈಲ್ಡ್‌ಲೈಫ್ ಸಂಸ್ಥೆ ಅರಣ್ಯ ವಿಚಕ್ಷಕ ಹುದ್ದೆಯನ್ನು ನೇಮಿಸಿದೆ. ಇಂತಹ ಹುದ್ದೆಯ ಸೃಷ್ಟಿಯಿಂದ ಪ್ರಕೃತಿ ಹಾಗೂ ಪ್ರಾಣಿಸಂಪತ್ತನ್ನು ಉಳಿಸಿದಂತಾಗಿದೆ. ಇಂತಹ ಮಹತ್ತರವಾದ ಕಾರ್ಯವನ್ನು ಈ ಸಂಸ್ಥೆ ನಿರ್ವಹಿಸುತ್ತಿದೆ.

ವೈಲ್ಡ್ ಲೈಫ್ (SOS)ಸಂಸ್ಥೆಯ ಕೆಲವು ಪ್ರಮುಖ ಕೇಂದ್ರಗಳು

ವೈಲ್ಡ್ ಲೈಫ್ ಸಂಸ್ಥೆಯು ಪ್ರಾಣಿಸಂರಕ್ಷಣೆಗೆ ಕಟುಬದ್ದವಾಗಿ ನಿಂತು ಕಾರ್ಯವನ್ನು ನಿರ್ವಹಿಸುತ್ತಿದೆ. ಅದಕೋಸ್ಕರ ಕೆಲವು ಕೇಂದ್ರಗಳನ್ನು ದೇಶದ ಕೆಲವು ಭಾಗಗಳಲ್ಲಿ ಸ್ಥಾಪಿಸಿದೆ.

೧. ದೆಹಲಿಯ ಆಗ್ರಾ ಪ್ರದೇಶದಲ್ಲಿ ಕರಡಿ ವಿಮೋಚನಾ ಕೇಂದ್ರವನ್ನು ನಿರ್ಮಿಸಿದೆ.

ಈ ಕೆಂದ್ರದಲ್ಲಿಯ ಬಹಳಷ್ಟು ಕರಡಿಗಳಿದ್ದು ಇವುಗಳ ಪಾಲನೆ ಪೋಷಣೆಯನ್ನು ಶ್ರದ್ಧೆವಹಿಸಿ ನೌಕರರಿಂದ ಕಾರ್ಯವನ್ನು ನಿರ್ವಹಿಸುತ್ತದೆ.

೨. ಬೆಂಗಳೂರಿನ ಬನ್ನೇರು ಘಟ್ಟದಲ್ಲಿ ಕರಡಿ ರಕ್ಷಣೆಯ ಕೇಂದ್ರವನ್ನು ಸ್ಥಾಪಿಸಿದೆ.

ಬೆಂಗಳೂರಿನಿಂದ ೪೦ ಕಿ.ಮೀ. ದೂರದಲ್ಲಿರುವ ಬನ್ನೇರುಘಟ್ಟ ಪ್ರಾಣಿ ಸಂಗ್ರಹಾಲಯದಲ್ಲಿ ಬಹಳಷ್ಟು ಜಾತಿಯ ಪ್ರಾಣಿಗಳಿವೆ. ಅಲ್ಲಿ ಕರಡಿಯನ್ನು ಅದರ ಪಾಲನೆ ಪೋಷಣೆ ನೋಡಿಕೊಳ್ಳಲಾಗುತ್ತಿದೆ.

೩. ವನವಿಹಾರ ಎಂಬ ರಕ್ಷಣಾ ಕೇಂದ್ರವನ್ನು ಭೂಪಾಲ್‌ನಲ್ಲಿ ಸ್ಥಾಪಿಸಿದೆ.

ಹೀಗೆ ಭಾರತದ ಅನೇಕ ಕಡೆಗಳಲ್ಲಿ ಕರಡಿಯ ರಕ್ಷಣೆಯ ಸಲುವಾಗಿ ಪ್ರತ್ಯೇಕ ಕೇಂದ್ರಗಳನ್ನು ಸ್ಥಾಪಿಸಿ ಅದಕ್ಕಾಗಿಯೇ ನೌಕರರನ್ನು ನೇಮಿಸಿಕೊಂಡು ಪ್ರಾಣಿಗಳನ್ನು ಬಹಳ ಚೆನ್ನಾಗಿ ನೋಡಿಕೊಳ್ಳುವಂತೆ

ಪ್ರೇರೇಪಿಸುತ್ತಿದೆ. ವೈಲ್ಡ್ ಲೈಫ್ ಸಂಸ್ಥೆಯು ಕೇವಲ ಭಾರತದಲ್ಲಷ್ಟೇ ಇಂತಹ ಕಾರ್ಯಮಾಡದೇ ಅಂತರ್ ರಾಷ್ಟ್ರೀಯ ದೇಶಗಳಾದ ಅರಬ್ ಅಮೇರಿಕಾ ಪಶ್ಚಿಮ ಅಸ್ಟ್ರೇಲಿಯಾ ಫ್ರಾನ್ಸ್ ನಂತಹ ಸಂಪದ್ಭರಿತ ಶ್ರೀಮಂತ ರಾಷ್ಟ್ರಗಳೊಡನೆ, ಕೈಜೋಡಿಸಿ ಪ್ರಾಣಿಗಳ ರಕ್ಷಣೆಗಾಗಿ ಹಲವು ಕಾರ್ಯಕ್ರಮಗಳನ್ನು ಹಾಕಿಕೊಂಡು ಯಶಸ್ವಿಯಾಗಿ ನಡೆಯುತ್ತಿದೆ.

ವೈಲ್ಡ್ ಲೈಫ್ ಸಂಸ್ಥೆಯವರ ಈ ಮೇಲಿನ ಕಾರ್ಯಯೋಜನೆ, ಉದ್ದೇಶ ಆಶಯವೇನೂ ಸಮಾಜಕ್ಕೆ ಸರ್ಕಾರಕ್ಕೆ ಒಳ್ಳೆಯದೆನಿಸಿದರೂ ಶತಮಾನಗಳಿಂದ ಪ್ರಾಣಿಯನ್ನಾಡಿಸಿ ವೃತ್ತಿ ಮಾಡಿಕೊಂಡು ಬಂದ ಸಮುದಾಯಗಳ ಮೂಲ ವೃತ್ತಿ ನಿಂತುಹೋದ ಮೇಲೆ ಇವರ ಕುಟುಂಬಗಳು ಬೀದಿಗೆ ಬಂದಿವೆ. ತಮ್ಮ ಹತ್ತಿರ ಪ್ರಾಣಿ (ಕರಡಿ, ಕೋತಿ, ಹಾವು) ಇರುವಷ್ಟು ದಿನ ಕುಟುಂಬಗಳು ನೆಮ್ಮದಿಯ ಜೀವನ ನಡೆಸಿದವು ನಂತರ ಸಂಸ್ಥೆಯ ಕಾರ್ಯಫಲದಿಂದ ಪ್ರಾಣಿ ಹಿಡಿದನಂತರ ಸಮುದಾಯವು ಬಹಳ ಕಠಿಣವಾದ ಕೆಲಸಗಳನ್ನು ಕೆಲವು ಮಾಲೀಕರು ಇವರಿಂದ ಮಾಡಿಸಿಕೊಂಡು ಕಡಿಮೆಕೂಲಿ ಕೊಡುತ್ತಿದ್ದಾರೆ. ಕೆಲವು ಸಲ ಈ ಸಮುದಾಯವು ನಾವು ಸಂಶೋಧನೆಗೆಂದು ಹೋದಾಗ ಸಂಸ್ಥೆಯ ಕಾರ್ಯದ ಬಗ್ಗೆ ಹೇಳುತ್ತಾ ''ಈ ಸಂಸ್ಥೆಯವರಿಗೆ, ನಾಯಿ, ಎತ್ತು, ಕುರಿ, ಕೋಳಿ, ಗಿಣಿ, ಬೆಕ್ಕು''ಗಳನ್ನು ದಿನನಿತ್ಯ ಹಿಂಸಿಸುತ್ತಾರೆಲ್ಲಾ ಅವರಲ್ಲಿರುವ ಅಂತಹವುಗಳನೇಕೆ ಹಿಡಿಯುವುದಿಲ್ಲ. ಎಂದು ನನಗೆ ಪ್ರಶ್ನೆ ಹಾಕಿದರು; ನಾನು ಉತ್ತರ ಹೇಳಲು ತಡವರಿಸಿದೆನು.

ಏನೇ ಆದರೂ ಸಂಸ್ಥೆಯವರಿಗೆ ತಮಗೆ ಬೇಕಾದ ಪ್ರಾಣಿಗಳನ್ನು ಅವರಿಂದ ಪಡೆಯುವುದೋ ಹೇಗೊ ಹಾಗೆ ಅವರಿಗೆ ಅವರ ಮುಂದಿನ ಭವಿಷ್ಯಕ್ಕೆ ಬೇಕಾದ ಸರ್ಕಾರಿ ಸೌಲಭ್ಯಗಳನ್ನು ಸರ್ಕಾರದ ಗಮನಕ್ಕೆ ತರುವುದು ಈ ಸಂಸ್ಥೆಯ ಪ್ರಮುಖ ಪ್ರಥಮ ಕರ್ತವ್ಯವಾಗಿದೆ. ಈ ಸಮುದಾಯದ ಜೀವನ ಸ್ಥಿತಿಗತಿ ಬಹಳ ಶೋಚನೀಯವಾಗಿದ್ದು ಇದರ ಬಗೆಗೆ ಸಂಪೂರ್ಣ ಮಾಹಿತಿಯನ್ನು ಸರ್ಕಾರಕ್ಕೆ ಸಲ್ಲಿಸಬೇಕು. ಈ ಅಲೆಮಾರಿ ಸಮುದಾಯ ವಾಸವಿರುವ ಜಾಗದಲ್ಲಿ ನೀರಿನ ಸೌಲಭ್ಯ ಆರೋಗ್ಯಕೇಂದ್ರ, ಅಂಗನವಾಡಿ ಕೇಂದ್ರಗಳಂತಹ ಪ್ರಾಥಮಿಕ ಸೌಲಭ್ಯಗಳನ್ನು ಒದಗಿಸಿಕೊಡಬೇಕು. ಆ ಸಮುದಾಯದವರ ಮನಸ್ಸನ್ನು ತಮ್ಮೆಡೆಗೆ ಸೆಳೆಯಬೇಕು.

WSOS ಸಂಸ್ಥೆ ತನ್ನ ಕಾರ್ಯಯೋಜನೆಗೆ ಸಂಬಂಧಿಸಿದಂತೆ ಕೆಲವು ಪ್ರಶ್ನೆಗಳನ್ನು ಸಿದ್ಧಪಡಿಸಿ ಅದಕ್ಕೆ ಉತ್ತರವನ್ನು ನೀಡಿ ತನ್ನ ಕಾರ್ಯಕ್ಷೇತ್ರವನ್ನು ವಿಸ್ತಾರಗೊಳಿಸಿದೆ

೧. ಭಾರತದಲ್ಲಿ ಕರಡಿಯಾಡಿಸುವುದು ಎಂದರೇನು?

ಕಪ್ಪುಬಣ್ಣವುಳ್ಳ ನಿಧಾನವಾಗಿ ಚಲಿಸುವ ಸೂಕ್ಷ್ಮ ಪ್ರಾಣಿ ಕರಡಿ ಎಂಬ ಪ್ರಾಣಿಯು ಮದಾರಿಗಳ ಹತೋಟಿಯಲ್ಲಿ ಅವರಾಡಿಸಿದಂತೆ ಆಡುವ ಪ್ರಾಣಿ ಆಗಿದೆ. ಈ ಮದಾರಿಗಳು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಅಲೆಯುತ್ತಾ ಹೋಗುವ ಅಲೆಮಾರಿಗಳು.

೨. ಯಾರೂ ಈ ಕರಡಿ ಪ್ರದರ್ಶನವನ್ನು ಮಾಡಿ ತೋರಿಸುತ್ತಾರೆ ?

ಖಲಂದರ ಅಥವಾ ಮದಾರಿ ಎಂಬ ಬುಡಕಟ್ಟು ಅಲೆಮಾರಿ ಜನಾಂಗವು ಕರಡಿಯಾಡಿಸುತ್ತಾರೆ. ಈ ವೃತ್ತಿಯಿಂದಲೇ ಹೊಟ್ಟೆ ತುಂಬಿಸಿಕೊಳ್ಳುತ್ತಾರೆ. ಜನರಿಗೆ ಮನರಂಜನೆ ನೀಡುತ್ತಾರೆ ಜೊತೆಗೆ ಪ್ರದರ್ಶನದಿಂದ ಬಂದ ಹಣದಿಂದ ಬದುಕನ್ನು ಸಾಗಿಸುತ್ತಾರೆ. ಈ ವೃತ್ತಿಯನ್ನು ಖಲಂದರ ಮದಾರಿಗಳು ೧೩ನೇ ಶತಮಾನದಿಂದಲೂ ಅರಸರಕಾಲದಿಂದ ಆಡಿಸುತ್ತಾ ಬಂದಿರುವರು.

೩. ಭಾರತದಲ್ಲಿ ಕರಡಿಯಾಡಿಸುವುದು ಅಪರಾಧವೇ ತಿಳಿಸಿ?

ಭಾರತೀಯ ಪ್ರಾಣಿರಕ್ಷಣಾ ಕಾಯಿದೆ ೧೯೭೨ ನಿಯಮದ ಪ್ರಕಾರ ಅಪರಾಧವಾಗಿದ್ದು ಆದರೂ ಕೂಡ ಮದಾರಿ ಖಲಂದರಗಳು ಇದನ್ನು ಬಿಡುತ್ತಿಲ್ಲ ಈ ವೃತ್ತಿ ಜೀವನಾಧಾರವಾಗಿದೆ.

೪. ಪ್ರಪಂಚದ ಯಾವ ಯಾವ ಕಡೆಗಳಲ್ಲಿ ಕರಡಿಯಾಡಿಸುವುದನ್ನು ನಿಷೇದಿಸಲಾಗಿದೆ ?

ಕರಡಿಗಳಿರುವ ಎಲ್ಲಾ ಭಾಗಗಳ ಪ್ರದೇಶಗಳಲ್ಲಿ ಕರಡಿಯಾಡಿಸುವುದನ್ನು ನಿಷೇಧಿಸಲಾಗಿದೆ.

೫. ಭಾರತದಲ್ಲಿ ಇಂದಿಗೂ ಕರಡಿಯಾಡಿಸುವಿಕೆ ಜಾರಿಯಲ್ಲಿದ್ದು ಇದನ್ನು ನಿಷೇದಿಸಲು ಹಾಗೂ ಪರ್ಯಾಯವಾಗಿ ವೈಲ್ಡ್‌ಲೈಫ್ ಸಂಸ್ಥೆ ಏನೇನೂ ಕಾರ್ಯಮಾಡುತ್ತಿದೆ.?

ಕರಡಿಯಾಡಿಸುವದರಿಂದ ಕರಡಿ ರಕ್ಷಿಸಲು ವೈಲ್ಡ್ ಲೈಫ್ ಸಂಸ್ಥೆ ಒಂದು ಯೋಜನೆ ಹಾಕಿಕೊಂಡಿದೆ ಇದನ್ನು ಭಾರತೀಯ ಕರಡಿ ವಿಮೋಚನೆ ಎಂದು ಕರೆಯಲಾಗುತ್ತದೆ. ಹೀಗೆಂದರೆ ವಶಪಡಿಸಿಕೊಂಡ ಕರಡಿಗಳನ್ನೆಲ್ಲಾ ಒಂದು ಕಡೆ ಸೇರಿಸಿ ಅವುಗಳ ಆಹಾರ ಪೋಷಣೆಯನ್ನು ಸಂಪೂರ್ಣ ಜವಾಬ್ದಾರಿ ನೋಡಿಕೊಳ್ಳುತ್ತದೆ. ಈ ವೃತ್ತಿ ನಂಬಿಕೊಂಡು ಜೀವನ ನಡೆಸುವ ಸಮುದಾಯಕ್ಕೆ ಈ ಸಂಸ್ಥೆಯು ಕೆಲವು ವೃತ್ತಿ ಕೌಶಲ್ಯ ತರಬೇತಿಯನ್ನು ನೀಡುತ್ತಿದೆ.

೬. ಕರಡಿಯನ್ನು ಒಪ್ಪಿಸಿದ ಮದಾರ ಖಲಂದರರಿಗೆ ಸಂಸ್ಥೆಯು ಪರ್ಯಾಯವಾಗಿ ಯಾವು ಸೌಲಭ್ಯ ಕಲ್ಪಿಸಿದೆ?

ಇದು ಅತಿ ಮುಖ್ಯವಾದ ಪ್ರಶ್ನೆಯಾಗಿದ್ದು ಕರಡಿಯನ್ನು ಸಂಸ್ಥೆಗೆ ಒಪ್ಪಿಸದ ಮದಾರಿ ಖಲಂದರರಿಗೆ ಸಂಸ್ಥೆಯು ಪ್ರತಿಕರಡಿಗೆ ೫೦,೦೦೦ ರೂ ಹಾಗೂ ಮಹಿಳೆಯರಿಗೆ ವೃತ್ತಿ ಕೌಶಲ್ಯಗಳಂತಹ ಕೆಲಸಗಳನ್ನು ಕಲಿಸಿ ತರಬೇತಿ ನೀಡುತ್ತದೆ.

೭. ಸಂಸ್ಥೆ ಎಲ್ಲೆಲ್ಲಿ ಕರಡಿ ಸಂರಕ್ಷಣಾ ಕೇಂದ್ರಗಳನ್ನು ಸ್ಥಾಪಿಸಿದೆ ?

ಸಂಸ್ಥೆಯು ಮದಾರಿಗಳಿಂದ ಕರಡಿ ವಶಪಡಿಸಿಕೊಂಡ ಮೇಲೆ ಅವುಗಳ ರಕ್ಷಣೆಗಾಗಿ ಮೂರು ಕಡೆ ಕೇಂದ್ರಗಳನ್ನು ಸ್ಥಾಪಿಸಿದೆ.

೧. ಆಗ್ರಾ ಪ್ರದೇಶದಲ್ಲಿ ಕರಡಿ ಸಂರಕ್ಷಣಾ ಕೇಂದ್ರ ತೆರೆಯಲಾಗಿದೆ ಇದು ಉತ್ತರ ಪ್ರದೇಶದಲ್ಲಿದೆ.

೨. ಕರ್ನಾಟಕ ರಾಜ್ಯದ ಬೆಂಗಳೂರು ಸಮೀಪವಿರುವ ಬನ್ನೇರು ಘಟ್ಟ ಅರಣ್ಯ ಪ್ರದೇಶದಲ್ಲಿ ತೆರೆದಿದೆ.

೩. ಭೂಪಾಲ್ ರಾಜ್ಯದ ಹತ್ತಿರ ವನ್‌ವಿಹಾರ ಎಂಬ ಹೆಸರಿನಲ್ಲಿ ಕೇಂದ್ರ ತರೆದಿದೆ. ಇದು ಮಧ್ಯಪ್ರದೇಶದ ಭಾಗದಲ್ಲಿದೆ.

೮. ಯಾವ ಇಸವಿಯ ವೇಳೆಗೆ ಮಾನವನ ಕಪಿಮುಷ್ಟಿಯಿಂದ ಕರಡಿಯನ್ನು ಮುಕ್ತವಾಗಿಸುತ್ತೇವೆ ಎಂದು ಈ ಸಂಸ್ಥೆ ತಿಳಿಸಿದೆ?

ವೈಲ್ಡ್ ವೈಪ್ ಸಂಸ್ಥೆ ಭಾರತದಲ್ಲಿ ಕರಡಿಗಳನ್ನು ಮಾನವನ ನಿಯಂತ್ರಣದಿಂದ ಪೂರ್ಣ ಪ್ರಮಾಣದಲ್ಲಿ ಮುಕ್ತಗೊಳಿಸಲು ೨೦೧೦ರ ವೇಳೆಗೆ ಕಾರ್ಯವನ್ನು ಮಾಡುತ್ತೇವೆ ಎಂದು ತಿಳಿಸಿದೆ.

ಅಡಿ ಟಿಪ್ಪಣಿಗಳು

೧. ಅಂತರ್‌ಜಾಲದಿಂದ ಪಡೆದ ಮಾಹಿತಿ Madari Gogglie. Com.

೨. ಹೈದ್ರಾಬಾದ್ ಕರ್ನಾಟಕದ ಅಲೆಮಾರಿಗಳ ಸಮಾಜೋ ಆರ್ಥಿಕ ಸ್ಥಿತಿಗತಿ: ಅಜ್ಜಯ್ಯ ಅಪ್ರಕಟಿತ ಪಿ.ಎಚ್.ಡಿ ಪ್ರಬಂಧ ೨೦೦೬

೩. ಕರಡಿ ಆಡಿಸುವವರಿಗೆ "ತಾಯತ" ಕಟ್ಟುವವರ್‍ಯಾರು, ವಿಜಯಕರ್ನಾಟಕ ೨೦೦೭ ಸೆ.೧೭

೪. ನಮ್ಮ ಊರು ನಮ್ಮ ಜಿಲ್ಲೆ "ಬೀದಿಗೆ ಬಿದ್ದ ಖಲಂದರ್" ಪ್ರಜಾವಾಣಿ ೨೦೦೭

೫. ಸರಕಾರಕ್ಕೆ ಖಲಂದರಗಳು ಸಲ್ಲಿಸಿದ ಮನವಿ ಪತ್ರಗಳಿಂದ ಪಡೆದ ಮಾಹಿತಿ

ಅಧ್ಯಾಯ ಆರು

ಸಮಾರೋಪ

ಅಧ್ಯಾಯ ಆರು

ಸಮಾರೋಪ

ಅಲೆಮಾರಿ ಬುಡಕಟ್ಟು ಜನಾಂಗಕ್ಕೆ ಸೇರಿದ ಮದಾರಿ ಅಥವಾ ಖಲಂದರರು ವೃತ್ತಿಯಿಂದ ಕರಡಿಯಾಡಿಸುವವರಾಗಿರುವರು. ಈ ವೃತ್ತಿಯಿಂದ ತಮ್ಮ ಉದರವನ್ನು ಸಾಕುವ ಸಲುವಾಗಿ ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಸಂಚಾರ ಮಾಡುತ್ತಾ ಕೊನೆಗೆ ಕರ್ನಾಟಕದಲ್ಲಿಯೇ ನೆಲೆಯೂರಿದ್ದಾರೆ. ಉತ್ತರಭಾರತದಲ್ಲಿಯೇ ಇವರ ಜನಾಂಗದ ಜನರು ಹೆಚ್ಚಿನ ಸಂಖ್ಯೆಯಲ್ಲಿರುವ ಬಗ್ಗೆ ಕೆ.ಎಸ್.ಸಿಂಗ್‌ರವರು ತಮ್ಮ India all Communities ಗ್ರಂಥದಲ್ಲಿ ಅಭಿಪ್ರಾಯ ಪಟ್ಟಿರುವುದು ತಿಳಿದುಬರುತ್ತದೆ. ಭಾಷೆಯಿಂದ ಇವರು ಬಹುಭಾಷಿಕರೆನಿಸಿದ್ದು ಇದು ಕಸುಬಿಗೆ ಬಹಳ ಅಗತ್ಯವೆನಿಸಿದೆ. ಹಲವು ಭಾಷೆಗಳ ಹಿಡಿತ ಇವರಿಗಿದೆ. ವೃತ್ತಿಯಿಂದ ಅರ್ಧದೇಶವನ್ನು ಸುತ್ತಿದ ಅನುಭವ ಮದಾರಿಗಳಿಗಿದೆ.

ಕರ್ನಾಟಕದಲ್ಲಿ ಕೆಲವು ಸಂಖ್ಯೆಯಲ್ಲಿ ವಾಸಿಸುವ ಮದಾರಿ ಕುಟುಂಬಗಳು ಆರ್ಥಿಕವಾಗಿ ಹಿಂದುಳಿದವರೆನಿಸಿದ್ದು ಇವರ ಬಹಳಷ್ಟು ಕುಟುಂಬಗಳು ಇನ್ನೂ ಗುಡಿಸಲು, ಬಾಡಿಗೆ ಮನೆಗಳಲ್ಲಿ ವಾಸಿಸುತ್ತಿವೆ. ಸ್ವಂತದ್ದೆನ್ನಲು ಏನೂ ಇರುವುದಿಲ್ಲ. ಹಿರಿಯರು ಯಾವುದೇ ರೀತಿಯ ಆಸ್ತಿ, ಮನೆ ಮಾಡದಿರುವುದು ಆರ್ಥಿಕ ದುಸ್ಥಿತಿಗೆ ಕಾರಣವಾಗಿದೆ. ಕರಡಿಯನ್ನೆ ನಿಮ್ಮ ಆಸ್ತಿ ಈ ಆಸ್ತಿಯಿಂದಲೇ ಬದುಕನ್ನು ನಡೆಸಿರಿ ಎಂದು ಹಿರಿಯರು ಕೈಗೆ ಕರಡಿ ಕೊಟ್ಟು ಹೋದರು. ಈ ಕರಡಿಯಾಡಿಸಿಯೇ ಇಂದು ಬದುಕನ್ನು ನಡೆಸುವ ರೀತಿಯ ಮದಾರಿಗಳಿಂದ ತಿಳಿದು ಬಂದಿತು.

ಉತ್ತರ ಕರ್ನಾಟಕದ ಬಯಲು ಪ್ರದೇಶದಲ್ಲಿ ವಾಸಿಸುತ್ತಿರುವ ಮದಾರಿಗಳದು ವಿಶಿಷ್ಟ ರೀತಿಯ ಜೀವನ ಹೊಲ, ಮನೆ, ಹಣ, ಸಂಗ್ರಹಿಸಿಡುವುದಾಗಲಿ, ಆಸ್ತಿ ಮಾಡುವುದಾಗಲಿ, ಕನಸು ಕಾಣದೆ ಕರಡಿಯಿಂದ ಬಂದ ಹಣದಿಂದ ನಂಬಿಕೊಂಡು ಜೀವನ ಸಾಗಿಸುತ್ತಿರುವುದು ನಿತ್ಯಜೀವನದ ಆರ್ಥಿಕ ಸ್ಥಿತಿಯ ಕೇಂದ್ರಭಾಗವಾಗಿದೆ. ಅನುತ್ಪಾದಕ ಸಮುದಾಯವೆನಿಸಿರುವ ಇವರು ಕರಡಿ ಪ್ರದರ್ಶನ ಕಲೆಯನ್ನು ನೀಡಿ ಅದರಿಂದ ಬರುವ ಹಣದಲ್ಲಿ ಜೀವನ ನಡೆಸುತ್ತಾರೆ. ರಾಜಕೀಯವಾಗಿ ಬಲಿಷ್ಟರಲ್ಲದ ಇವರಲ್ಲಿ ನಾಯಕತ್ವದ ಕೊರತೆ ಎದ್ದುಕಾಣುತ್ತದೆ. ಅನಕ್ಷರತೆ, ಬಡತನ, ಮೌಢ್ಯ ಸಂಪ್ರದಾಯದಲ್ಲಿನ ನಂಬಿಕೆಯಿಂದಾಗಿ ಸಮಾಜದ ಮುಖ್ಯವಾಹಿನಿಗೆ ಬರುವಲ್ಲಿ ಬಹಳ ಹಿಂದುಳಿದಿದ್ದಾರೆ. ಶೈಕ್ಷಣಿಕವಾಗಿ ಮದಾರಿ ಮಕ್ಕಳು ತೀರಾ ಹಿಂದುಳಿದವರಾಗಿದ್ದು ಅಲೆಮಾರಿತನದಿಂದಾಗಿ ಅರ್ಧದಲ್ಲೇ ಶಾಲೆ ಬಿಟ್ಟು ಮೂಲವೃತ್ತಿಗೆ ಸಹಾಯಕರಾಗಿ ತನ್ನ ತಂದೆಗೆ

ನೆರವಾಗುತ್ತಾರೆ. ಇತ್ತೀಚಿನ ದಿನಗಳಲ್ಲಿ ಕರಡಿಯಾಡಿಸುವುದನ್ನು ನಿಷೇದಗೊಳಿಸಿದ ಮೇಲೆ ಈ ಮಕ್ಕಳ ಗ್ರಹಣಶಕ್ತಿ ಕಡಿಮೆಯಾಗಿದ್ದು ಮನೆಯಲ್ಲಿನ ಬಡತನವು, ಪೌಷ್ಠಿಕಾಂಶದ ಆಹಾರದ ಕೊರತೆ, ಅನಕ್ಷರಸ್ಥ ಪೋಷಕರು, ಮೂಲ ವೃತ್ತಿಯ ಮೇಲಿನ ಹಿಡಿತ ತಪ್ಪಿಲ್ಲ ಈ ರೀತಿಯಿಂದ ಸಾಮಾಜಿಕವಾಗಿ ಆರ್ಥಿಕವಾಗಿ, ರಾಜಕೀಯ, ಶೈಕ್ಷಣಿಕವಾಗಿ ಹಿಂದುಳಿದು ತುಂಬಾ ಶೋಷಿತ ಜೀವನವನ್ನು ನಡೆಸುತ್ತಿರುವುದನ್ನು ನೋಡಬಹುದಾಗಿದೆ.

ಕರಡಿ ಪ್ರಾಣಿ ಇವರಿಗೆ ಪ್ರಾಣಿಯಾಗಿಲ್ಲ ಅದು ಇವರ ಪಾಲಿಗೆ ಅನ್ನವನ್ನು ನೀಡುವ ದೇವರು ಅನ್ನದಾತ, ರಕ್ಷಕ, ಸಂಸಾರವನ್ನು ನಡೆಸುವ ಯಜಮಾನ ಎಂದೆಲ್ಲಾ ನಂಬಿಕೆ ಹೊಂದಿದ್ದಾರೆ. ಇದರ ಸಾಕುವಿಕೆಯಿಂದಿಡಿದು ಮರಣದವರೆಗಿನ ಎಲ್ಲಾ ಕ್ರಿಯೆಗಳನ್ನು ಬಹಳ ಅಚ್ಚುಕಟ್ಟಾಗಿ ಜಾಗರೂಕತೆಯಿಂದ ಪಾಲಿಸುತ್ತಾರೆ. ಅದರ ಆರೋಗ್ಯದ ವಿಷಯಕ್ಕೆ ಸಂಬಂಧಿಸಿದಂತೆ ಪ್ರಾಣಿವೈದ್ಯ ಪದ್ಧತಿಯ ಜನಕರು ಆಗಿದ್ದಾರೆ. ಕರಡಿಗೆ ಬರುವ ಯಾವುದೇ ರೀತಿಯ ಖಾಯಿಲೆಗಳಿಗೆ ಗಿಡಮೂಲಿಕೆ ಔಷಧಿಯಿಂದ ಗುಣಪಡಿಸುವ ಜಾಣ್ಮೆ ವುಳ್ಳವರು ಆಗಿದ್ದಾರೆ. ಈ ವೈದ್ಯ ಪರಂಪರೆ ತಲಾತಲಾಂತರದಿಂದ ಬಂದಿರುವುದಾಗಿ ಹೇಳುತ್ತಾರೆ. ಒಮ್ಮೆ ಕರಡಿಯಿಡಿದು ಹೊರಗೆ ಹೋಗಿ ಪ್ರದರ್ಶನ ನೀಡಿ ೮೦ ಸಾವಿರದಿಂದ ಒಂದು ಲಕ್ಷದವರೆಗೆ ಆದಾಯವನ್ನು ಸಂಪಾದಿಸುವ ಶಕ್ತಿ ಇವರಿಗಿದೆ. ಜೊತೆಗೆ ತಾಯತ, ಕರಡಿ ಕೂದಲಿನಿಂದ ಮಾಡಿದ ಸರಗಳನ್ನು ಮಾರಿ ಲಾಭಗಳಿಸುತ್ತಾರೆ. ಕರಡಿಯೇ ಈ ಜನಾಂಗದ ಆರ್ಥಿಕತೆಯ ಕೇಂದ್ರ ಬಿಂದುವಾಗಿದೆ. ಕರಡಿ ಹೇಗೆ ಇವರಿಗೆ ಲಾಭ ಮಾಡುತ್ತದೆಯೋ ಹಾಗೆಯೇ ಇವರು ಕೂಡಾ ಕರಡಿಯ ಎಲ್ಲಾ ಬಯಕೆಗಳನ್ನು ಈಡೇರಿಸುತ್ತಾರೆ. ಕರಡಿ ಸತ್ತಾಗ ಮಾನವನಿಗೆ ಮಾಡುವಷ್ಟೇ ಶೃಂಗಾರ ಮಾಡಿ ಪೂಜೆ ವಿಧಾನ ಮಾಡುತ್ತಾರೆ. ಈ ಕರಡಿಯಿಂದ ಇಂದಿಗೂ ಕೆಲವು ಜನಪದನಂಬಿಕೆಗಳು ಉಳಿದುಕೊಂಡು ಬಂದಿವೆ.

ಪ್ರಚಲಿತ ದಿನಗಳಲ್ಲಿ ಸರಕಾರದ ಪ್ರಾಣಿ ಹಿಂಸೆ ಅಪರಾಧ ಎಂಬ ನೀತಿ ಜಾರಿಯಿಂದಾಗಿ ಪ್ರಾಣಿದಯಾಸಂಘದವರು ಈ ಕಾರ್ಯವನ್ನು ಕೈಗೆತ್ತಿಕೊಂಡು ಮದಾರಿಗಳ ಜೀವನದಲ್ಲಿ ಪ್ರವೇಶಿಸಿದಾಗಿನಿಂದ ಕುಟುಂಬದಲ್ಲಿ ತಲ್ಲಣವುಂಟಾಗಿದೆ. ಕರಡಿ ಕಿತ್ತುಕೊಂಡು ಪರಿಹಾರವಾಗಿ ಅಲ್ಪ ಮೊತ್ತದ ಹಣವನ್ನು ನೀಡಿದೆಯಾದರೂ ಪೂರ್ಣವಾಗಿ ನೀಡದೆ ಅರ್ಧನೀಡಿ ಅರ್ಧ ಹಾಗೆಬಿಟ್ಟಿದೆ. ಹೆಣ್ಣು ಮಕ್ಕಳ ಜೀವನಕ್ಕೆ ಪೂರಕವಾದ ಹೊಲಿಗೆ ತರಬೇತಿ ಕಸೂತಿ, ಎಂಬ್ರಾಯಡೆರಿ ಯಂತಹ ತರಬೇತಿ ನೀಡುವಲ್ಲಿ ಮೊದಮೊದಲು ಯಶಸ್ವಿಯಾಗಿದೆಯಾದರೂ ಸಂಪೂರ್ಣವಾಗಿ ಯಶಸ್ಸನ್ನು ಕಾಣದೆ ಈ ಯೋಜನೆ ಅರ್ಧದಲ್ಲಿಯೇ ಸ್ಥಗಿತಗೊಂಡಿದೆ. ಅನಕ್ಷರಸ್ಥರಾದ ಹೆಣ್ಣುಮಕ್ಕಳಿಗೆ ಶಿಕ್ಷಣದ ಕೊರತೆ, ಮನೆಯಲ್ಲಿನ ಮಕ್ಕಳ ಸಾಕುವಿಕೆ, ಗಂಡನಿಗೆ ಸಹಾಯ ಹೀಗೆ ಇವುಗಳು ಅಥವಾ ಹೆಣ್ಣಿನ ಸುತ್ತ ಭೂತದಂತೆ ಕಾಡುತ್ತಿವೆ. ಇಂತಹ ತರಬೇತಿಯ ಬದಲು ಪ್ರಾಣಿಯದಯಾ ಸಂಘವು ಮದಾರಿ ಕುಟುಂಬಗಳ ಸಮೀಕ್ಷೆ ನಡೆಸಿ ಸರಕಾರದಿಂದ ಸಿಗಬೇಕಾದ ಸೌಲಭ್ಯಗಳ ಕುರಿತು ಚಿಂತಿಸಬೇಕು ಇದಕ್ಕಾಗಿ ವರದಿ ಮಾಹಿತಿಯನ್ನು ಸರಕಾರಕ್ಕೆ ಸಲ್ಲಿಸಬೇಕಾಗಿದೆ. ಇದು ನನ್ನ ಅನಿಸಿಕೆಯೂ ಕೂಡಾ ಆಗಿರುವುದು.

ಮದಾರಿಗಳು ಒಂದು ಕಡೆ ತಮ್ಮ ಆರ್ಥಿಕತೆಯ ಕೇಂದ್ರಬಿಂದುವಾಗಿದ್ದ ಕರಡಿಯನ್ನು ಕಳೆದುಕೊಂಡು ಸಂಕಷ್ಟ ಎದುರಿಸುವುದರ ಜೊತೆಗೆ ತಮ್ಮ ಈ ವೃತ್ತಿಯು ಮುಸ್ಲಿಂ ಧಾರ್ಮಿಕ ಮುಖಂಡರಿಗೆ ಬೇಸರ ತಂದಿದೆ ಹಾಗೂ ತಮ್ಮನ್ನು ಯಾವುದೇ ಕಾರ್ಯಕ್ರಮಗಳಲ್ಲಿ ಆಹ್ವಾನ ನೀಡುವಲ್ಲಿ ತಾರತಮ್ಯ ಮಾಡುವಿಕೆ ಕಾಣುತ್ತಿದೆ. ಆದರೆ ಮೂಲ ವೃತ್ತಿಯಾದ ಇದನ್ನು ತಾವು ಶ್ರೇಷ್ಠ ಪವಿತ್ರವೆಂದು ನಂಬಿರುತ್ತೇವೆ. ಇದನ್ನು ಬಿಡುವುದಿಲ್ಲ ಎಂಬುದು ಧೃಡನಿರ್ಧಾರವಾಗಿದೆ. ಇತ್ತ ಮೂಲ ವೃತ್ತಿಯ ನಿಷೇದ, ಅತ್ತ ಮುಸ್ಲಿಂ ಧಾರ್ಮಿಕ ಮುಖಂಡರ ವಿರೋಧದಿಂದಾಗಿ ಅತಂತ್ರರೀತಿಯ ಬದುಕನ್ನು ಸಾಗಿಸುತ್ತಿರುವುದಾಗಿ ಹೇಳುತ್ತಾರೆ.

ಆರ್ಥಿಕತೆಯ ಕೇಂದ್ರಬಿಂದುವಾಗಿದ್ದ ಕರಡಿಯನ್ನು ಕಳೆದುಕೊಂಡು ಸಂಕಷ್ಟದಲ್ಲಿರುವ ಮದಾರಿಗಳಲ್ಲಿ ಅವಿಭಕ್ತ ಕುಟುಂಬಗಳ ಸಮಸ್ಯೆ ಎದ್ದು ಕಾಣುತ್ತದೆ. ಹೊರಗೆ ಹೋಗಿ ಕೆಲಸ ಮಾಡುವವರು ಒಬ್ಬರಾದರೆ ಮನೆಯಲ್ಲಿ ಕುಳಿತು ತಿನ್ನುವವರು ಹೆಚ್ಚಿನ ಸಂಖ್ಯೆಯಲ್ಲಿರುವುದು ಚಿಂತೆಗೀಡು ಮಾಡಿದೆ. ಈ ಮೊದಲು ಕುಟುಂಬ ನಿಯಂತ್ರಣ ಪದ್ಧತಿ ಪಾಲಿಸದೆ ಇಂದು ಹೊಟ್ಟೆಗಿಲ್ಲದೆ ಪಶ್ಚಾತ್ತಾಪ ಪಟ್ಟು ಅದರ ಬಗೆಗೆ ಜಾಗರೂಕರಾಗಿದ್ದಾರೆ. ಕೆಲಸವಿಲ್ಲದೆ ಕಂಗಲಾಗಿ ಮುಂದಿನ ಬರುವ ದಿನಗಳನ್ನು ಬಹಳ ವಿಷಾದದಿಂದ ನೋಡುತ್ತಿದ್ದಾರೆ. ಇಂದು ಅನಿವಾರ್ಯವಾಗಿ ಹೊಟ್ಟೆ ತುಂಬಿಸಿಕೊಳ್ಳಲು ಮೈನ್ಸ್‌ನಂತಹ ಕೆಂಪು ದೂಳಿಗೆ ದೇಹವನ್ನು ಬಗ್ಗಿಸಿ ಕಷ್ಟವಾದ ಕೆಲಸಗಳನ್ನು ಮಾಡುತ್ತಿದ್ದಾರೆ. ಹಣ್ಣುಮಾರುವ, ಗುಜರಿ ಕೆಲಸ ಮನೆಕಟ್ಟುವ ಬೇಲ್ದಾರ ಕೆಲಸ, ಮೈನ್ಸ್‌ಲಾರಿಯ ಚಾಲಕರಾಗಿ ಹಗಲು-ರಾತ್ರಿ ಪಾಳಿಯ ಕೆಲಸಗಾರರಾಗಿ ದುಡಿಯುತ್ತಿದ್ದು ಇಂತಹ ಕೆಲಸ ಸಮಾಜಬಾಹೀರವೆಂಬುದು ತಿಳಿಯದೆ ದುಡಿಯುತ್ತಿದ್ದಾರೆ. ಕಾಲಬದಲಾದಂತೆ ಕೆಲವು ಸತ್ಯಸಂಗತಿಗಳು ಇತ್ತೀಚೆಗೆ ನಗರ ಜನರ ಸಂಪರ್ಕದಿಂದ ತಿಳಿಯುತ್ತಿದ್ದು ತಮಗೆ ಸರಕಾರದಿಂದ ಸಿಗಬೇಕಾದ ಸೌಲಭ್ಯಗಳಿಗಾಗಿ ಅಥವಾ ಬೇಡಿಕೆಗಳಿಗಾಗಿ ತಮ್ಮದೇ ಸಂಘ ರಚಿಸಿ ಅಧ್ಯಕ್ಷರನ್ನು ನೇಮಿಸಿ ಸರಕಾರಕ್ಕೆ ಹೋರಾಟ ಮಾಡುವುದರ ಮೂಲಕ ಗಮನ ಸೆಳೆಯುತ್ತಿದೆ. ರಾಜ್ಯಾದ್ಯಾಂತ ತನ್ನನ್ನು ಗುರುತಿಸಿಕೊಂಡಿದೆ. ರಾಜಧಾನಿಯವರೆಗೆ ಹೋಗಿ ವಿಧಾನ ಸೌಧದಲ್ಲಿ ಕುಳಿತ ಸಚಿವರಿಂದಿಡಿದು ಮುಖ್ಯಮಂತ್ರಿಯ ತನಕ ಹೋಗಿ ತಮ್ಮ ಗೋಳನ್ನು ಹೇಳಿಕೊಂಡಿದೆ. ವಿಶೇಷವೆಂದರೆ ರಾಷ್ಟ್ರಪತಿಯ ಬಳಿಗೆ ಹೋಗಿ ಬಂದಿರುವರು. ತಮ್ಮ ಬೇಡಿಕೆಯನ್ನು ಸರಕಾರವಾಗಲಿ, ರಾಷ್ಟ್ರಪತಿಗಳಾಗಲಿ ಇನ್ನು ಗಮನವಹಿಸದಿರುವುದು, ಕ್ರಮ ಕೈಗೊಳ್ಳದಿರುವುದು ಚಿಂತೆಗೀಡು ಮಾಡಿದೆ. ಇತ್ತೀಚೆಗೆ ಈ ಜನಾಂಗ ತಮ್ಮ ಬೇಡಿಕೆ ಈಡೇರಿಕೆಗಾಗಿ ಅನಿರ್ದಿಷ್ಟ ಮುಷ್ಕರವನ್ನು ಜಿಲ್ಲಾಧಿಕಾರಿ ಕಚೇರಿ ಎದುರು ಕೈಗೊಂಡಿರುವ ಸಂಗತಿ ಟಿ.ವಿ.ಮಾಧ್ಯಮ ದಿನಪತ್ರಿಕೆಗಳಲ್ಲಿ ಪ್ರಕಟಗೊಂಡದ್ದು ನೋಡಬಹುದು. ೩ ತಿಂಗಳೊಳಗೆ ಸಮೀಕ್ಷೆ ನಡೆಸಿ ಬೇಡಿಕೆ ಈಡೇರಿಸುವುದಾಗಿ ಜಿಲ್ಲಾಧಿಕಾರಿ ಭರವಸೆ ನೀಡಿದ್ದರಿಂದ ವಾಪಸ್ ತೆಗೆದುಕೊಂಡಿದ್ದಾರೆ.

ಸರಕಾರವು ಇಂತಹ ಅಲೆಮಾರಿ ಸಮುದಾಯದ ಈ ಸಮಸ್ಯೆಯನ್ನು ಸಮೀಕ್ಷೆನಡೆಸಿ ಸರಕಾರದಿಂದ ಸಿಗಬೇಕಾದ ಸೌಲಭ್ಯಗಳನ್ನು ಒದಗಿಸಬೇಕು. ಇಲ್ಲದಿದ್ದರೆ ಮುಂದಿನ ದಿನಗಳಲ್ಲಿ ಮದಾರಿ ಖಲಂದರರ ಎನ್ನುವ ಜನಾಂಗ ಹೇಳಹೆಸರಿಲ್ಲದಂತೆ ಕಣ್ಮರೆಯಾಗುವುದರಲ್ಲಿ ಸಂದೇಹವಿಲ್ಲ.

ಅಧ್ಯಯನದ ಫಲಿತಗಳು

ಅಲೆಮಾರಿಗಳಾದ ಮದಾರಿಗಳು ಶತಮಾನಗಳಿಂದಲೂ ಸಾಮಾಜಿಕವಾಗಿ ಆರ್ಥಿಕವಾಗಿ ಹಿಂದುಳಿದ ಹಾಗೂ ಮೂಲಭೂತ ಸೌಲಭ್ಯಗಳಿಂದ ವಂಚಿತರಾಗಿದ್ದಾರೆ. ಮೂಲ ವೃತ್ತಿ (ಕರಡಿಯಾಡಿಸುವಿಕೆ)ಯನ್ನು ನಂಬಿಕೊಂಡು ಸಮಾಜದ ಮುಖ್ಯವಾಹಿನಿಗೆ ಬರುವಲ್ಲಿ ವಿಫಲವಾಗಿದ್ದುದು ಕ್ಷೇತ್ರಕಾರ್ಯದಿಂದ ತಿಳಿದುಬಂದಿದ್ದು ಈ ಮದಾರಿಗಳ ಸಮಸ್ಯೆಗಳು ಈ ಕೆಳಗಿನಂತಿವೆ.

೧. ಮದಾರಿ ಅಥವಾ ಖಲಂದರ ಜನಾಂಗ ಮೂಲತಃ ಅಲೆಮಾರಿಗಳಾಗಿದ್ದು, ಕರಡಿಯಾಡಿಸುತ್ತಾ ಹೊಟ್ಟೆ ತುಂಬಿಸಿಕೊಳ್ಳುವ ವೃತ್ತಿಯನ್ನು ಹಿರಿಯರಿಂದ ಮಾಡಿಕೊಂಡು ಬಂದ ವಂಶ ಪರಂಪರೆ ವೃತ್ತಿಯಾಗಿದೆ

೨. ಬಹಳಷ್ಟು ಕುಟುಂಬಗಳು ಇನ್ನೂ ಗುಡಿಸಲಿನಲ್ಲಿಯೇ ವಾಸಿಸುತ್ತಿದ್ದು ಕೆಲವರಿಗೆ ಮಾತ್ರ ಜನತಾ ಮನೆಗಳು ಸಿಕ್ಕಿವೆ. ಸ್ವಂತಮನೆ ಭೂಮಿ, ಆಸ್ತಿ ಯಾವುದು ಇರುವುದಿಲ್ಲ. ಹಿರಿಯರು ಯಾವುದೇ ಆಸ್ತಿಮಾಡಿಲ್ಲ.

೩. ಅವಿಭಕ್ತ ಕುಟುಂಬಗಳು ಇನ್ನೂ ಜೀವಂತವಾಗಿದ್ದು ಒಂದೇ ಕುಟುಂಬದಲ್ಲಿ ೧೦ರಿಂದ ೧೨ ಜನ ಸದಸ್ಯರು ಒಟ್ಟಿಗೆ ವಾಸಿಸುತ್ತಿರುವರು. ಮಗ, ಸೊಸೆ, ಕೂಡಾ ಒಂದೇ ಮನೆಯಲ್ಲಿರುವುದು ಕಂಡುಬಂದಿದೆ.

೪. ಆರ್ಥಿಕವಾಗಿ ಬಹಳ ಹಿಂದುಳಿದಿದ್ದಾರೆ, ಕರಡಿಯಾಡಿಸುವುದು ಬಿಟ್ಟರೆ ಬೇರೆ ವೃತ್ತಿ ಜ್ಞಾನ ಇರುವುದಿಲ್ಲ. ಕೆಲವರು ಇನ್ನೂ ಮನೆಯಲ್ಲಿಯೇ ಕುಳಿತು ನಿರುದ್ಯೋಗಿಗಳಾಗಿದ್ದಾರೆ. ಇನ್ನು ಕೆಲವರು ಗಣಿ, ಕಾರ್ಖಾನೆಯಂತಹ ಕೆಲಸಗಳಿಗೆ ಹೋಗುತ್ತಿದ್ದಾರೆ. ವಿಶೇಷವಾಗಿ ಮಹಿಳೆಯರು ಗಣಿ ಕೆಲಸ, ಕೃಷಿಕೂಲಿ ಹೋಗುತ್ತಿರುವ ಅಂಶಗಳು ಬೆಳಕಿಗೆ ಬಂದಿವೆ.

೫. ಮದಾರಿಗಳು ಬಹುಭಾಷಿಕರಾಗಿದ್ದಾರೆ. ಮಾತೃಭಾಷೆ ಹಿಂದಿಯಾಗಿರುವುದು. ಬಹುಶ ಉತ್ತರ ಭಾರತದಿಂದ ವಲಸೆ ಬಂದಿರಬಹುದಾದ ಊಹೆಗೆ ಪುಷ್ಟಿಸಿಗಬಹುದಾಗಿದೆ. ಇಸ್ಲಾಂ ಧರ್ಮದವರಾಗಿದ್ದರೂ ಹಿಂದುಧರ್ಮದ ಎಲ್ಲಾ ಹಬ್ಬಗಳನ್ನು ಆಚರಿಸುತ್ತಾರೆ. ಹಿಂದು-ಮುಸ್ಲಿಂ ಸಂಸ್ಕೃತಿಗಳೆರಡರ ಸಂಸ್ಕೃತಿವುಳ್ಳವರು.

೬. ಮೂಲವೃತ್ತಿಯ ನಿಷೇದದ ಬಳಿಕ ಹಲವು ಕುಟುಂಬಗಳು ಬೀದಿಗೆ ಬಿದ್ದು ಕಂಗಲಾಗಿದ್ದು, ಸರಕಾರದಿಂದ ಯಾವುದೇ ಯೋಜನೆ, ಸೌಲಭ್ಯಗಳು ಇದುವರೆಗೆ ಸಿಕ್ಕಿಲ್ಲ.

೭. ಮಕ್ಕಳ ಶೈಕ್ಷಣಿಕ ಸ್ಥಿತಿ ತೀರಾ ಹಿಂದುಳಿದಿದ್ದು, ಬಡತನ ಅನಕ್ಷರತೆ, ಪೋಷಕರ ಅಜ್ಞಾನ, ಮೂಢನಂಬಿಕೆಗಳು ಇವುಗಳಿಂದಾಗಿ ಮಕ್ಕಳು ಮನೆಯಲ್ಲಿ ಉಳಿಯುವಂತಹ ಸ್ಥಿತಿ ಬಂದಿದೆ.

೮. ಕರಡಿ ವಶಪಡಿಸಿಕೊಂಡ ಪ್ರಾಣಿದಯಾಸಂಘ ಇವರ ಕಡೆ ಗಮನಹರಿಸುತ್ತಿಲ್ಲ. ಜನಾಂಗಕ್ಕೆ ಪರ್ಯಾಯ ವೃತ್ತಿಯನ್ನು ಕಲ್ಪಿಸುವಲ್ಲಿ ವಿಫಲವಾಗಿದೆ. ಟೈಲರಿಂಗ್, ಕಸೂತಿ, ಎಂಬ್ರಾಯಡೆರಿ, ತರಬೇತಿ ನೀಡಿದೆ. ಆದರೆ ಅನಕ್ಷರತೆ ಬಡತನ ಸ್ಥಿತಿಯಿಂದಾಗಿ ಯೋಜನೆ ವಿಫಲವಾಗಿದೆ.

೯. ಮದಾರಿಗಳುತಮ್ಮ ಬೇಡಿಕೆಗಳಿಗಾಗಿ ೨-೩ ವರ್ಷಗಳಿಂದಲೂ ಧರಣಿ ನಡಸುತ್ತಾ ಬಂದಿದ್ದಾರೆ. ಸರಕಾರ ಇವರ ಬೇಡಿಕೆಗೆ ಸ್ಪಂದಿಸದೆ ನಿರ್ಲಕ್ಷ್ಯತನವಹಿಸಿದೆ. ಸರಕಾರದ ಎಲ್ಲಾ ಅಧಿಕಾರಿ ಮಂತ್ರಿಗಳಲ್ಲಿಯೂ ತನ್ನ ಗೋಳನ್ನು ತೋಡಿಕೊಂಡರೊ ಈಡೇರದಿರುವುದು ಇವರ ದುರಂತವೆನಿಸಿದೆ.

೧೦. ಮದಾರಿ ಕುಟುಂಬಗಳು ಕರ್ನಾಟಕದ ಹಲವು ಕಡೆಗಳಲ್ಲಿ ವಾಸಿಸುತ್ತಿದ್ದು. ನನ್ನ ಅಧ್ಯಯನಕ್ಕಾಗಿ ಕೊಪ್ಪಳದ ಮಂಗಳಾಪುರ, ಹುಲಿಹೈದರ ಹಾಗೂ ಬಳ್ಳಾರಿಯ ಹಂಪಿನಕಟ್ಟೆ, ವೆಂಕಟಾಪುರಗಳಿಗೆ ತೆರಳಿ ಅಲ್ಲಿನ ವಕ್ತೃಗಳಿಂದ ಮಾಹಿತಿ ಪಡೆದು ಕ್ಷೇತ್ರಕಾರ್ಯ ಮಾಡಲಾಗಿದೆ.

ಅನುಬಂಧ

ಕರಡಿ ಪದ

ಗಾದೆಗಳು

ಜನಪದ ನಂಬಿಕೆಗಳು

ಆಧಾರಗ್ರಂಥಗಳು

ಮನವಿಪತ್ರ

ಛಾಯಾಚಿತ್ರಗಳು

ನಕ್ಷೆಗಳು

ವಕ್ತೃ ವಿವರ

ಅನುಬಂಧ

ಜಾನಪದ ನಂಬಿಕೆಗಳು

ರಾತ್ರಿ ಮಕ್ಕಳು ಹಟ ಮಾಡುತ್ತಿದ್ದರೆ ಏನಾದರೂ ಬೇಡಿ ಅಳುತ್ತಿದ್ದರೆ ಕರಡಿ ಬಂತು ಕರಡಿ. ಕರಡಿ ಕೈಯಲ್ಲಿ ಹಿಡಿದು ಕೊಡಲಾ ಎಂದು ತಾಯಂದಿರು ಹೆದರಿಸಿ ಮಕ್ಕಳನ್ನು ರಮಿಸುವಲ್ಲಿ ಅಂಜಿಕೆ ತರುವಲ್ಲಿ ಕರಡಿಯ ಮೇಲಿನ ನಂಬಿಕೆಯಿಂದಲೇ ಆಗಿದೆ.

ಹಳ್ಳಿಗಳಲ್ಲಿ ಕರಡಿಯು ಮನೆಯ ಅಂಗಳದ ಮುಂದೆ ಬಂದಾಗ ಗೃಹಣಿಯರು ತಮ್ಮ ತಮ್ಮ ಮಕ್ಕಳನ್ನು ತಂದು ಕರಡಿಯನ್ನು ಮುಟ್ಟಿಸಿಕೊಂಡು ಹೋಗುವರು. ಹೀಗೆ ಮಾಡುವುದರಿಂದ ಮಕ್ಕಳು ಹೆದರುವುದಿಲ್ಲ. ಹಾಸಿಗೆಯಲ್ಲಿ ಮೂತ್ರ ವಿಸರ್ಜನೆ ಮಾಡುವುದಿಲ್ಲ. ಎಂಬ ನಂಬಿಕೆ ಇವರಲ್ಲಿದೆ. ಅಲ್ಲದೆ ಮಕ್ಕಳ ಕೊರಳಲ್ಲಿ ಕರಡಿಯ ಕೂದಲು ಕಟ್ಟಿದರೆ ಅಳುವ ಹಾಗೂ ಹಟ ಹಿಡಿಯುವ ಮಕ್ಕಳು ಅಳುವುದಿಲ್ಲ ಹಟ ಹಿಡಿಯುವುದಿಲ್ಲ ಎಂಬ ನಂಬಿಕೆಯೂ ಇದ್ದು ಇಂದಿಗೂ ಪ್ರಚಲಿತದಲ್ಲಿದೆ.

ಶಿವಪೂಜೆಯಲ್ಲಿ ಕರಡಿ ಬಿಟ್ಟಂತೆ ಎಂಬ ಉಕ್ತಿಯು ಇಂದಿಗೂ ಜನಪದರಲ್ಲಿ ದಿನನಿತ್ಯ ಜೀವನದಲ್ಲಿ ಬಳಕೆಗೊಳ್ಳುತ್ತದೆ. ಇಲ್ಲಿ ಕರಡಿ ಎಂಬ ಪದದ ಅರ್ಥ ಪ್ರಾಣಿಯ ಅರ್ಥವನ್ನು ಸೂಚಿಸುವುದಿಲ್ಲ ಬದಲಾಗಿ ಅದು. ಕರಡಿಗೆ ಎಂಬ ಪದವಾಗಿದೆ. ಉಚ್ಚಾರಗೊಳ್ಳುವ ಕಾಲಕ್ಕೆ ಜನಪದರಲ್ಲಿ ಬರುಬರುತ್ತಾ ಕರಡಿಗೆ ಹೋಗಿ ಕರಡಿ ಮಾತ್ರ ಉಳಿದುಕೊಂಡಿದೆ. 'ಗೆ' ಪದ ಬಿಟ್ಟು ಹೋಗಿರುವುದಿರಿಂದ ಇದರ ಅರ್ಥವೇ ಬೇರೆಯಾದ ಅರ್ಥಕಲ್ಪಿಸಿಬಿಟ್ಟಿದೆ.

"ಕರಡಿಗೆ" ಎಂದರೆ ಕರಂಕಡಿಕೆ ಲಿಂಗಾಯತರ ಎದೆಯ ಮೇಲೆ ನೇತಾಡುವ ಲಿಂಗದ ಭರಣಿ ಎಂಬ ಅರ್ಥವಾಗಿದೆ. ಶಿವಪೂಜೆಯಲ್ಲಿ ಕರಡಿಗೆ ಬಿಟ್ಟಂತೆ ಎಂಬುದು ನಿಜವಾದ ಉಕ್ತವಾಗಿದೆ. ಇದರರ್ಥ ಪೂಜೆಗೆ ಕುಳಿತಾಗ ದೈವಿಕತೆಯಲ್ಲಿ ನಂಬಿಕೆಯಿಟ್ಟ ವ್ಯಕ್ತಿ ತನಗರಿವಿಲ್ಲದಂತೆ ಕರಡಿಯನ್ನು ಬಿಟ್ಟು ಪೂಜೆಗೆ ಕುಳಿತಾಗ ಪೂಜೆ ಸಾಗುವುದಿಲ್ಲ. ಇದಕ್ಕಾಗಿಯೇ ಮೇಲಿನ ಉಕ್ತಿಯನ್ನು ಅಂದಿನ ಜನಪದರು ಬಳಸಿರುವುದನ್ನು ಕಾಣಬಹುದಾಗಿದೆ.

ಕರಡಿಯ ಬಗೆಗಿನ ಗಾದೆಗಳು

ನಮ್ಮ ಜನಪದರು ಕರಡಿಯ ಬಗೆಗೆ ಕೆಲವು ನಂಬಿಕೆಗಳನ್ನು ಇಟ್ಟಿರುವುದರ ಜೊತೆಗೆ ಗಾದೆಗಳನ್ನು ಸೃಷ್ಟಿಸಿ ರಕ್ಷಿಸಿಕೊಂಡು ಬಂದಿರುವರು. ಕರಡಿಗೆ ಸಂಬಂಧಪಟ್ಟಂತೆ ಮಾನವನ ನಿತ್ಯ ಜೀವನದಲ್ಲಿ ನಡೆಯುವ ಘಟನೆಗಳಿಗೆ ಕರಡಿಯಂತಹ ಪ್ರಾಣಿಯನ್ನು ಹೋಲಿಕೆ ಮಾಡುವುದರ ಮೂಲಕ ಮನುಷ್ಯನ ಬುದ್ಧಿಗೆ ಇನ್ನಷ್ಟು ಜ್ಞಾನಧಾರೆಯನ್ನು ನೀಡಿರುವುದು ಈ ಕೆಲಗಿನ ಗಾದೆಗಳಿಂದ ತಿಳಿದುಬರುತ್ತದೆ.

'ನರಿ ಕರಡಿ ಕಕ್ಕೆ ಕಾಯಿ ತಿಂದ ಹಾಗೆ'

ಯಾವುದನ್ನು ಮಾಡಬಾರದೆಂದು ನಿಷೇದ ಮಾಡಲಾಗಿರುತ್ತದೆಯೇ ಅದನ್ನು ಮಾನವನು ತಿಳಿದು ತಪ್ಪುಮಾಡಿದಾಗ ಮೇಲಿನ ಗಾದೆ ಅರ್ಥಸೂಚಿಸುತ್ತದೆ.

'ಪರಡಿ (ಪಾಯಸದ) ಕುಟಿ ಕರಡಿಗೇನು ಗೊತ್ತು'

ಇಂದಿನ ಆಧುನಿಕ ದಿನಗಳಲ್ಲಿ ಮನುಷ್ಯನು ಹಿಂದಿನ ಕಾಲದಲ್ಲಿ ಬಳಸುತ್ತಿದ್ದ ಗಡಿಗೆ, ಮಡಿಕೆಯೊಳಗಿನ ಆಹಾರದ ಬಳಕೆಯನ್ನು ಬಿಟ್ಟು ಸ್ಟೀಲ್, ಸಿಲ್ವರ್‌ದಂತಹ ಪಾತ್ರೆಯೊಳಗಿನ ಆಹಾರ ಮಾಡುತ್ತಿದ್ದುದರಿಂದ ಮೇಲಿನ ಗಾದೆಯನ್ನು ತಿಳಿಯಬಹುದಾಗಿದೆ.

''ಕರಡಿಗೆ ಕೂದಲು ಯಾವುದು ಶ್ಯಾಟ ಯಾವುದು''?

ನಾವು ಯಾರನ್ನು ಒಳ್ಳೆಯವರು ಎಂದು ಭಾವಿಸಿರುತ್ತೇವೆಯೋ ಅವರು ಬಹಳ ದುಷ್ಟರಾಗಿರುವರು ಅದರಲ್ಲಿರುವ ಯಾವ ಗುಣಗಳು ನಿಮಗೆ ಬೇಗನೆ ತಿಳಿಯುವುದಿಲ್ಲ. ಹೀಗೆ ಈ ಮೇಲಿನ ಗಾದೆಯಿಂದ ''ದುಷ್ಟರೆಲ್ಲಾ ಒಂದೇ'' ಎಂಬ ಅರ್ಥ ತಿಳಿಯಬಹುದು.

''ಎರಡು ಕೆಟ್ಟು ಕರಡಿ ಹೊಲೆಯಾದ''

ಮಾನವನ ಯಾವ ಆಸೆಯು ಈಡೇರದೆ ಅತಂತ್ರ ಪರಿಸ್ಥಿತಿ ಉಂಟಾದಾಗ ಈ ಮೇಲಿನ ಗಾದೆಯ ಮೂಲಕ ತಿಳಿಯಬಹುದು. ''ಅತಂತ್ರ ಸ್ಥಿತಿ'' ಕುರಿತು ತಿಳಿಯಬಹುದು.

''ಕಂಬಳಿ ಕಟ್ಟು ಅಂತ ಕರಡಿ ಹಿಡಿದ ಹಾಗೆ''

ಮನುಷ್ಯನು ಕೆಲವು ಸಾರಿ ತಾನು ಮಾಡುವ ಕೆಲಸದಲ್ಲಿ ಆಲಸ್ಯತನ ತೋರಿ ಆ ಕೆಲಸದ ಗುರಿಯನ್ನು ತಪ್ಪಿಸಿ ಬೇರೆ ಕೆಲಸವನ್ನು ಮಾಡಲು ಹೋಗುತ್ತಾನೆ ಇದರಿಂದ ಆತನ ಅಜಾಗರೂಕವರ್ತನೆ ಎದ್ದು ಕಾಣುತ್ತದೆ. ಈ ಮೇಲಿನ ಗಾದೆಯಿಂದ ಅಜಾಗರೂಕತೆಯನ್ನು ತಿಳಿಯಬಹುದು.

''ಕರಡಿಗೆ ಹೆದರದವ ಕರಿಕಂಬಳಿಗೆ ಹೆದರುತ್ತಾನೆಯೇ''

ಈ ಗಾದೆ ಮನುಷ್ಯನಲ್ಲಿನ ಧೈರ್ಯವನ್ನು ಕುರಿತು ಹೇಳುತ್ತದೆ. ಎಂತಹ ಕಷ್ಟದ ಸಂದರ್ಭಗಳು ಬಂದಾಗ ಕರಡಿಯ ಉದಾ ಕೊಟ್ಟು ಈ ಮೇಲಿನಂತೆ ಗಾದೆಯಿಂದ ತಿಳಿಯಬಹುದಾಗಿದೆ.

''ಕರಡಿಗೆ ಹೆದರುವವನು ಕರಿಕಂಬಳ ಕಂಡ ಹಾಗೆ''

''ಕರಡಿ ಕಂಡು ಗೊಬ್ಬುಳಿ ಎರಿದ ಹಾಗೆ''

ಮನುಷ್ಯನಾದವನು. ಕರಡಿಯನ್ನು ನೋಡಿ ಹೆದರಿದಾಗ ಕರಡಿಬಣ್ಣದ ಯಾವುದೇ ವಸ್ತುವನ್ನು ನೋಡಿದಾಗ ಹೆದರುತ್ತಾನೆ. ಇದಕ್ಕಾಗಿಯೇ ಜನಪದರು ಈ ಮೇಲಿನ ಗಾದೆಯನ್ನು ಹೇಳಿರಬೇಕು.

ಮೂರ್ಖನ ಸ್ನೇಹ ಮಾಡೋದು ಒಂದೇ ಕರಡಿ ತಬ್ಬೊದೂ ಒಂದೇ ಈ ಮೇಲಿನ ಗಾದೆಯ ಮಾನವನ ಮೂರ್ಖತನವನ್ನು ಕುರಿತು ತಿಳಿಸುತ್ತದೆ.

ಕರಡಿಯ ಪದ

ಕರಡಿಯ ಕುಣಿತ (ಕವನ)

ದ.ರಾ.ಬೇಂದ್ರೆಯವರು ಕರಡಿಯ ಕುಣಿತವನ್ನು ಕಂಡು ಅಂಕುಒಂಕಾಗಿರುವ ಸಮಾಜ ಹಾಗೂ ಸಮಾಜದೊಳಗಿನ ಮಾನವರ ಅವಿವೇಕಿ ತನವನ್ನು ಕಂಡು ಕರಡಿಯೊಳಗಿರುವ ಬುದ್ಧಿಯನ್ನು ಮಾನವನ ಬುದ್ಧಿಗೆ ಹೋಲಿಸುತ್ತಾರೆ. ಆಗ ಮಾನವನ ಬುದ್ಧಿಪ್ರಾಣಿಗಳ ಬುದ್ಧಿಗಿಂತ ಮೇಲು ಆದ್ದರಿಂದ ಪ್ರಾಣಿಗಳ ರಕ್ಷಣೆ ಮಾಡುತ್ತಾ ಬಂದಿರುವ ಮದಾರಿಗಳಿಗೆ ಈ ಪದವು (ಪದ್ಯ) ಅನ್ವಯಿಸುವುದು ಜೊತೆಗೆ ಈ ಸಮಾಜದೊಳಗೆ ಇರುವ ಮನುಷ್ಯರೆಲ್ಲರೂ ಪ್ರಾಣಿಗಳನ್ನು ರಕ್ಷಿಸಬೇಕು ಎಂದು ಈ ಪದ್ಯದಿಂದ ತಿಳಿಯಬಹುದು.

ಕಬ್ಬಿಣ ಕೈಕಡಗ ಕುಣಿಕೋಲು, ಕೂದಲು
ಕಂಬಳಿ ಹೊದ್ದಾಂವ ಬಂದಾನ !
ಗುಣುಗುಟ್ಟುತ ಕಡಗವ ಕುಟ್ಟುತ
ಕರಡಿಯನಾಡಿಸುತ ನಿಂದಾನ !

ಯಾವ ಕಾಡಡವಿಯಲಿ ಜೇನುಂಡು ಬೆಳೆದಿದ್ದ
ಜಾಂಬವಂತನ ಹಿಡಿದು ತಂದಾನ ?
'ಧಣಿಯರ ಮನಿ ಮುಂದ ಕಾಪಳ್ಳಿ ಮಾಡಣ್ಣ
ಧಣಿದಾನ ಕೊಡುವನು' ಅಂದಾನ

ತ್ರೇತಾರ್ಯುಗದ ರಾಮನ್ನ ದ್ವಾಪರದ ಕೃಷ್ಣನ್ನ
ಕಲಿಯುಗದ ಕಲ್ಕೀನ ಕಂಡಾನ
ಜಾಂಬುನದಿ ದಂಡೆಯ ಜಂಬು ನೇರಳೆ ಹಣ್ಣು
ಕೃತಯುಗದ ಕೊನೆಗೀಂವಾ ಉಂಡಾನ

ಬಂದಾರೆ ಬರ್‍ರೆವ್ವ ಕಂದನ ತರ್‍ರೆವ್ವ
ಅಂಜೀಕಿ ಗಿಂಜೀಕಿ ಕೊಂದಾನ

ರೋಮ ರೋಮಗಳಲ್ಲಿ ಭೀಮರಕ್ಷೆಯ ಬಲ
ಕೊರಳಾಗ ಕಟ್ಟರಿ ಒಂದಾನ

'ಕುಣಿಯುತ ಮಗನೆ ನೀ' ಅನ್ನೊದೊಂದೇ ತಡ
ತನ್ನನ ತ್ಯಾನನ ಅಂದ್ಯಾನ
ಮುದ್ದು ಕೂಸಿನ ಹಾಗೆ ಮುಸು ಮುಸು ಮಾಡುತ್ತ
ಕುಣಿದಾನ ಕುಣಿತವ ಛಂದಾನ

ಹೊಟ್ಟೆಗಿಲ್ಲದವರ ಹೊಟ್ಟೆಗೆ ಹಾಕಲ
ನಡೆದಾನ ಪಡೆದಾನ ಬಂದ್ಯಾನ
ಕುಣಿಸುವವರ ಹೊಟ್ಟೆ ತಣ್ಣಗಾಗಲಿ ಎಂದು
ಮುಗಿಲಿಗೆ ಕೈ ಮುಗಿದು ನಿಂದಾನ

ಮನಬಲ್ಲ ಮಾನವ ಕುಣಿದಾನ ಕುಣಿಸ್ಯಾನ
ಪ್ರಾಣದ ಈ ಪ್ರಾಣಿ ಹಿಂದಾನ
ಕರಡಿಯ ಹೆಸರೀಲೆ ಚರಿತಾರ್ಥ ನಡಿದ್ಯಾನ
ಪರಮಾರ್ಥ ಎಂಬಂತೆ ಬಂದಾನ

ಈ ಮನುಷಾ ಎಂದಿದೊ ಕವಲೆತ್ತು ಕೋಡಗ
ತನಗಾಗಿ ಕುಣಿಸುತ್ತ ನಡೆದಾನ
ಕರಡೀ ಕುಣಿತಕ್ಕೆಂತ ನರರ ಬುದ್ಧಿಯ ಕುಣಿತ
ಮಿಗಿಲಹುದು ಕವಿಕಂಡು ನುಡಿದಾನ

ಆಧಾರ ಗ್ರಂಥಗಳು

೧. ಕರ್ನಾಟಕದ ಗೊಲ್ಲಸಮುದಾಯ, ಡಾ.ಎಂ.ಗುರುಲಿಂಗ

೨. ಗುಲ್ಬರ್ಗಾ ಜಿಲ್ಲೆಯ ಬೈಲುಪತ್ತಾರರರು ಸಮಾಜ ಶಾಸ್ತ್ರೀಯ ಅಧ್ಯಯನ, ಬಸವರಾಜ ಹಿರೇಮಠ, ಎಂಫಿಲ್, ಅಪ್ರಕಟಿತ ನಿಬಂಧ, ಕ.ವಿ.ವಿ. ಹಂಪಿ

೩. ಬಳ್ಳಾರಿ ಜಿಲ್ಲೆ ಅಂಕಿ ಅಂಶಗಳ ನೋಟ, ೨೦೦೨-೦೩, ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಛೇರಿ ಬಳ್ಳಾರಿ

೪. ಹೊಸಪೇಟೆ ತಾಲ್ಲೂಕು ದರ್ಶನ, ಡಾ.ಸಿ.ಮಹಾದೇವ, ಡಾ.ಮಾಧವ ಪೆರಾಜೆ, ಕ.ವಿ.ವಿ. ಹಂಪಿ, ೨೦೦೨

೫. ಕೊಪ್ಪಳ ಜಿಲ್ಲೆ ಮೊಹರಂ ಪದಗಳು ಪ್ರಕಾಶ ಬಳ್ಳಾರಿ, ಎಂ.ಫಿಲ್ ಅಪ್ರಕರಟಿತ ನಿಬಂಧ, ಕ.ವಿ.ವಿ. ಹಂಪಿ

೬. India all communities- K.S. Singh

೭. Caste and Tribes of Southern India- vol-ix, Edger Thurston

೮. ವಕ್ತೃವಿನಿಂದ ಪಡೆದ ಮಾಹಿತ, ಕರಡಿರಾಜಾಸಾಬ್, ಕರಡಿ ಫಕ್ರುಸಾಬ್, ಹಂಪಿನಕಟ್ಟೆ, ಮಂಗಳಾಪುರ.

೯, ಡಣಾಪುರ ಗ್ರಾಮಪಂಚಾಯಿತಿಯಿಂದ ಪಡೆದ ಮಾಹಿ, ಗ್ರಾಮ ಪಂಚಾಯಿತಿ ಕಾರ್ಯಾಲಯ ಡಣಾಪುರ, ಮರಿಯಮ್ಮನ ಹಳ್ಳಿ ಹೋಬಳಿ

೧೦. ಕೋಳೂರು ಗ್ರಾಮ ಪಂಚಾಯಿತಿಯಿಂದ ಪಡೆದ ಮಾಹಿ, ಗ್ರಾಮ ಪಂಚಾಯಿತಿ ಕಾರ್ಯಾಲಯ ಕೋಳೂರು, ಕೊಪ್ಪಳ, ತಾ, ಜಿ

೧೧. ವಕ್ತೃಮಾಹಿತಿ, ಕರಡಿ ಮಾಬುಸಾಬ್, ಹಂಪಿನಕಟ್ಟೆ
ವಕ್ತೃ ಮಾಹಿತಿ ಹುಲಿಹೈದರ ಶಾಲೆಗೆ ಭೇಟಿ ಕೊಟ್ಟು ಮಾಹಿತಿ ಪಡೆಯಲಾಗಿದೆ.
ಮಂಗಳಾಪುರ ಶಾಲೆಗೆ ಭೇಟಿಕೊಟ್ಟು ಅಂಕಿ ಅಂಶ ಪಡೆಯಲಾಗಿದೆ.
ಹಂಪಿನಕಟ್ಟೆ ಶಾಲೆಗೆ ಭೇಟಿಕೊಟ್ಟು ಅಂಕಿ ಅಂಶ ಮಾಹಿತಿ ಪಡೆಯಲಾಗಿದೆ.

೧೨. ಹೈದ್ರಾಬಾದ್ ಕರ್ನಾಟಕದ ಅಲೆಮಾರಿಗಳ ಸಮಾಜೋ, ಆರ್ಥಿಕ ಸ್ಥಿತಿಗತಿ ಅಜ್ಜಯ್ಯ, ಅಪ್ರಕಟಿತ ಪಿಎಚ್.ಡಿ ಪ್ರಬಂಧ, ೨೦೦೬ ಕ.ವಿ.ವಿ.ಹಂಪಿ

೧೩. ಕರಡಿ ಆಡಿಸುವವರಿಗೆ ತಾಯತ ಕಟ್ಟುವರ್‍ಯಾರು, ವಿಜಯ ಕರ್ನಾಟಕ, ೨೦೦೭, ಸೆಪ್ಟೆಂಬರ್, ೧೭

೧೪. ಅಂತರ್‌ಜಾಲದಿಂದ ಪಡೆದ ಮಾಹಿತಿ

೧೫. ನಮ್ಮ ಊರು ನಮ್ಮ ಜಿಲ್ಲೆ "ಬೀದಿಗೆ ಬಿದ್ದ ಖಲಂದರ್ ಮದಾರಿ" ಪ್ರಜಾವಾಣಿ, ೨೦೦೭

೧೬. ಸರಕಾರಕ್ಕೆ ಖಲಂದರ್ ಮದಾರಿಗಳು ಸಲ್ಲಿಸಿದ ಮನವಿ ಪತ್ರಗಳಿಂದ ಸಂಗ್ರಹಿಸಿದ ಮಾಹಿತ

೧೭. ಬುಡುಗ ಜಂಗಮರು, ಆಯ್ದು ಪತ್ರಿಕಾ ವರದಿಗಳು ಪ್ರಕಟಣೆ ಸಂಪಾದಕ, ಪ್ರೊ.ಕೆ.ಎಂ.ಮೈತ್ರಿ, (ಸಂ), ಪ್ರತಾಪ ಬಹುರೂಪಿ ಕರ್ನಾಟಕದ ಬುಡುಗ ಜಂಗಮರ ಸಂಘ (ರಿ) ಹೊಸಪೇಟೆ

೧೮. ಸುವರ್ಣ ಜಾನಪದ, ಸಂಪಾದಕ, ಡಾ.ಹಿ.ಶಿ.ರಾಮಚಂದ್ರಗೌಡ, ಕೃಷ್ಣಮೂರ್ತಿ ಹನೂರು, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು.

೧೯. ಅಭಿವೃದ್ಧಿ ಅಧ್ಯಯನ (ಸಂ), ಡಾ.ಟಿ.ಆರ್. ಚಂದ್ರಶೇಖರ್, ಕ.ವಿ.ವಿ.ಹಂಪಿ

೨೦. ಅಲೆಮಾರಿಗಳ ಸ್ಥಿತಿಗತಿ, (ಸಂ), ಸ.ಚಿ.ರಮೇಶ, ಪ್ರಸಾರಾಂಗ, ಕ.ವಿ.ವಿ. ಹಂಪಿ

೨೧. ಡೊಂಬರ ಆರ್ಥಿಕ ಸ್ಥಿತ್ಯಂತರಗಳು, (ಸಂ), ಡಾ.ಎ.ಎಸ್.ಪ್ರಭಾಕರ್, ಸಿದ್ಧಾರ್ಥ ಪ್ರಕಾಶನ, ಎಂ.ಪಿ.ಪ್ರಕಾಶ್ ನಗರ, ಹೊಸಪೇಟೆ

೨೨. ಹೈದ್ರಾಬಾದ್ ಕರ್ನಾಟಕ ಜನಪದ ಸಾಹಿತ್ಯ, (ಸಂ), ಬಸವರಾಜ ಪೋಲಿಸ್ ಪಾಟೀಲ್, ಗುಲ್ಬರ್ಗಾ

೨೩. ಸಂಶೋಧನಾ ಲೇಖನಗಳು, ಎಂ.ಎಸ್.ಲಠ್ಠೆ, ಗುಲಬರ್ಗಾ, ವಿ.ವಿ.

೨೪. ಜಾನಪದ ವಿಶ್ವಕೋಶ, (ಸಂ), ಡಾ. ಚಂದ್ರಶೇಖರ ಕಂಕಬಾರ, ಕನ್ನಡ ಸಾಹಿತ್ಯ ಪರಿಷತ್ತು,

೨೫. ಕನ್ನಡ ಗಾದೆಗಳ ಮಹಾಕೋಶ ಸಂಪುಟ ೨, ಪ್ರ.ಸಂ. ಹಂಪ. ನಾಗರಾಜಯ್ಯ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೮೨

೨೬. ಹೈದರಾಬಾದ್ ಕರ್ನಾಟಕದ ಜನಪದ ಪ್ರದರ್ಶನ ಕಲೆಗಳು, ಡಾ.ಹೆಚ್.ಚಿ. ಪೋತೆ ಅಂಬು ಪ್ರಕಾಶನ ರಾಯಚೂರು ೨೦೦೦, ಪು. ೨೨೪

ಕರ್ನಾಟಕ ಸರ್ಕಾರ

ಸಕಇ/ಬಿ ಅಂಡ್ ಆರ್ (ಶ್ರಸ/ಸಿಆರ್) 11/08-09

ಸಮಾಜ ಕಲ್ಯಾಣ ಆಯುಕ್ತರ ಕಛೇರಿ,
5ನೇ ಮಹಡಿ, ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ: 30-07-2008.

ಕಾರ್ಯದರ್ಶಿಗಳು,
ಕರ್ನಾಟಕ ಅನುಸೂಚಿತ ಜಾತಿ ಮತ್ತು
ಅನುಸೂಚಿತ ಬುಡಕಟ್ಟುಗಳ ಆಯೋಗ,
ಸಿ.ಎಫ್.ಸಿ., ಬಿಲ್ಡಿಂಗ್, ನೃಪತುಂಗ ರಸ್ತೆ,
ಬೆಂಗಳೂರು.

ಮಾನ್ಯರೆ,

ವಿಷಯ: ಕರಡಿ ಆಡಿಸುವವರ ಪ್ರತಿಯೊಂದು ಕುಟುಂಬಕ್ಕೆ ಒಂದು ಆಶ್ರಯ ಮನೆ ಹಾಗೂ ಬಿ.ಪಿ.ಎಲ್. ಪಡಿತರ ಚೀಟಿ ನೀಡುವಂತೆ ಕೋರಿ.

ಉಲ್ಲೇಖ: ಸರ್ಕಾರದ ಪತ್ರ ಸಂಖ್ಯೆ: ಸಕಇ 11418 ಬಾಬೆಬಿ/ವಿನಿ3/08, ದಿನಾಂಕ: 14-07-2008.

- - -

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಪತ್ರದಲ್ಲಿ ಕರ್ನಾಟಕ ಮುಸ್ಲಿಂ ಕೌನ್ಸಿಲ್ ಇವರು ಉತ್ತರ ಭಾರತದಲ್ಲಿ ಕರಡಿ ಆಡಿಸುವವರಿಗೆ ಖಲಂದರ್ ಹಾಗೂ ಮಹಾಲ್ ಎಂದು ಪರಿಶಿಷ್ಟ ಜಾತಿಯಲ್ಲಿ ಸೇರಿಸಿರುತ್ತಾರೆ. ಅದೇ ರೀತಿ ಕರ್ನಾಟಕದಲ್ಲಿಯೂ ಕೂಡ ಸೌಲಭ್ಯವನ್ನು ನೀಡುವಂತೆ ಕೋರಿರುವುದನ್ನು ನಿಯಮಾನುಸಾರ ಪರಿಶೀಲಿಸಿ ಅರ್ಜಿದಾರರಿಗೆ ಹಿಂಬರಹ ನೀಡುವಂತೆ ಕೋರಿರುತ್ತಾರೆ. ಅಡಕಗಳು ನೆರಳಚ್ಚು ಪ್ರತಿಯನ್ನು ಈ ಪತ್ರದೊಂದಿಗೆ ಲಗತ್ತಿಸಿ ಮುಂದಿನ ಕ್ರಮಕ್ಕಾಗಿ ಕಳುಹಿಸಲಾಗಿದೆ.

ತಮ್ಮ ನಂಬುಗೆಯ,

ಆಯುಕ್ತರ ಪರವಾಗಿ,
ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು.

ಪ್ರತಿಯನ್ನು:-

1) ಮನವಿಯ ಪ್ರತಿಯೊಂದಿಗೆ ಮುಂದಿನ ಕ್ರಮಕ್ಕಾಗಿ- ನಿರ್ದೇಶಕರು, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು ರವರಿಗೆ ರವಾನಿಸಿದೆ.
2) ಅರಣ್ಯ ಸಂರಕ್ಷಣಾಧಿಕಾರಿಗಳು, ಅರಣ್ಯ ಇಲಾಖೆ, ಬೆಂಗಳೂರು ರವರ ಮಾಹಿತಿ ಹಾಗೂ ಮುಂದಿನ ಕ್ರಮಕ್ಕಾಗಿ.
3) ಅಧ್ಯಕ್ಷರು, ಕರ್ನಾಟಕ ಮುಸ್ಲಿಂ ಕೌನ್ಸಿಲ್ 474, 11 ನೇ ವಾರ್ಡ್, ಹೊಸಪೇಟೆ ಮುಖ್ಯರಸ್ತೆ, ಹಳೇ ಡಿವೈಎಸ್‌ಪಿ ಕಛೇರಿ, ಕೂಡ್ಲಿಗಿ- 583135, ಬಳ್ಳಾರಿ ಜಿಲ್ಲೆ ರವರ ಮಾಹಿತಿಗಾಗಿ.

ಮುಖ್ಯ ಮಂತ್ರಿಯವರ ಸಚಿವಾಲಯ

CHIEF MINISTER'S SECRETARIAT

ವಿಧಾನ ಸೌಧ, ಬೆಂಗಳೂರು
VIDHANA SOUDHA, BANGALORE
PIN : 560 001

ಕ್ರಮಾಂಕ
No.
CM\DLT\165\2008

ದಿನಾಂಕ
DATED ....
02-07-2008

ಶ್ರೀ ಬಷೀರ್ ಅಹಮದ್ ಎಲ್.ಎಸ್,
ರಾಜ್ಯಯುವ ಅಧ್ಯಕ್ಷರು, ಕರ್ನಾಟಕ ಮುಸ್ಲಿಂ ಕೌನ್ಸಿಲ್,
ನಂ.474, 11ನೇ ವಾರ್ಡ್, ಹೊಸಪೇಟೆ ಮುಖ್ಯರಸ್ತೆ
ಕೂಡ್ಲಿಗಿ ತಾಲ್ಲೂಕು, ಬಳ್ಳಾರಿ ಜಿಲ್ಲೆ

ಮಾನ್ಯರೇ,

ವಿಷಯ :- ಕರಡಿ ಆಡಿಸುವವರ ಪ್ರತಿಯೊಂದು ಕುಟುಂಬಕ್ಕೆ ಒಂದು
ಆಶ್ರಯ ಮನೆ ಹಾಗೂ ಬಿ.ಪಿ.ಎಲ್.ಪಡಿತರ ಚೀಟಿ
ನೀಡುವಂತೆ ಕೋರಿರುವ ಕುರಿತು

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ದಿನಾಂಕ : 30-06-2008 ರಂದು ಮುಖ್ಯಮಂತ್ರಿಯವರಿಗೆ ತಾವು ಕಳುಹಿಸಿದ ಮನವಿ ಪತ್ರವು ತಲುಪಿದೆ. ಸದರಿ ವಿಷಯದ ಬಗ್ಗೆ ಪರಿಶೀಲಿಸಿ, ಮುಂದಿನ ಸೂಕ್ತ ಕ್ರಮವನ್ನು ಕೈಗೊಳ್ಳಲು ಸರ್ಕಾರದ ಕಾರ್ಯದರ್ಶಿ ಸಮಾಜ ಕಲ್ಯಾಣ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು ಇವರನ್ನು ಕೋರಲಾಗಿದೆ ಹಾಗೂ ಕೈಗೊಂಡ ಕ್ರಮವನ್ನು ತಮಗೆ ನೇರವಾಗಿ ತಿಳಿಸಲು ಅವರನ್ನು ಕೋರಿದೆ.

ತಮ್ಮ ವಿಶ್ವಾಸಿ,

(ಡಾ||ಸಿಂಧೆ ಭೀಮಸೇನ್ ರಾವ್. ಎಚ್)
ಮುಖ್ಯಮಂತ್ರಿಯವರ ಉಪ ಕಾರ್ಯದರ್ಶಿ

ಕರ್ನಾಟಕ ರಾಜ್ಯ ಅನುಸೂಚಿತ ಜಾತಿ
ಮತ್ತು ಅನುಸೂಚಿತ ಬುಡಕಟ್ಟುಗಳ ಆಯೋಗ

KARNATAKA STATE COMMISSION FOR SCHEDULED
CASTE & SCHEDULED TRIBES, BANGALORE.

ಸಂಖ್ಯೆ: ಕರಾ/ಅಜಾ/ಅಬು/ಆಯೋಗ/ ಸಿಆರ್-14/2005-06 ದಿನಾಂಕ: 19-05-2008.

ಕಾರ್ಯದರ್ಶಿಗಳು,
ಹಿಂದುಳಿದ ವರ್ಗಗಳ ಆಯೋಗ,
ದಾರುಸಲಂ ಬಿಲ್ಡಿಂಗ್,
ಕ್ವೀನ್ಸ್ ರಸ್ತೆ, ಬೆಂಗಳೂರು.

ಮಾನ್ಯರೆ,

ವಿಷಯ : ಕರಡಿ ಆಡಿಸುವವರ ಸಮೀಕ್ಷೆ ನಡೆಸಿ ಆ ಜನಾಂಗಕ್ಕೆ ಪ್ರತ್ಯೇಕ ಮೀಸಲಾತಿ ನೀಡುವ ಬಗ್ಗೆ.

ಉಲ್ಲೇಖ : 1] ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು ಇವರ ಕಛೇರಿ ಪತ್ರದ ಸಂಖ್ಯೆ: ಬಿ ಅಂಡ್ ಆರ್/ತಸ/ಸಿಆರ್-3/07-08, ದಿ: 18-01-08.
2] ಕಾರ್ಯದರ್ಶಿಗಳು, ಎ. ಜೆ. ಸದಾಶಿವ ವಿಚಾರಣಾ ಆಯೋಗ, ಇವರ ಪತ್ರದ ಸಂಖ್ಯೆ: ಕರಾ/ನ್ಯಾಸವಿಆ/ಸಿಆರ್-89/07-08, ದಿ: 03-03-2008.

****

ಕರಡಿ ಆಡಿಸುವವರ ಕುಟುಂಬಗಳನ್ನು ವೈಜ್ಞಾನಿಕ ಸಮೀಕ್ಷೆ ನಡೆಸಿ, ಹಕ್ಕಿ-ಪಿಕ್ಕಿ ಜನಾಂಗಕ್ಕೆ ನೀಡಿದ ಮಾದರಿಯಲ್ಲಿ ಪ್ರತ್ಯೇಕ ಪ್ಯಾಕೇಜ್ ನೀಡುವುದರ ಬಗ್ಗೆ ಕ್ರಮ ತೆಗೆದುಕೊಳ್ಳುವಂತೆ ಶ್ರೀ ಎಲ್. ಎಸ್. ಬಷೀರ್ ಅಹಮದ್, ರಾಜ್ಯ ಮಹಾ ಪ್ರಧಾನ ಕಾರ್ಯದರ್ಶಿಗಳು, ಕರ್ನಾಟಕ ಮುಸ್ಲಿಮ್ ಸಂಘರ್ಷ ಸಮಿತಿ ಇವರು ಮಾನ್ಯ ಗೃಹ ಸಚಿವರು ಹಾಗೂ ಕಾನೂನು ಸಂಸದೀಯ ವ್ಯವಹಾರಗಳ ಸಚಿವರಿಗೆ ಸಲ್ಲಿಸಿದ ಮನವಿಯಲ್ಲಿ ವಿನಂತಿಸಿರುತ್ತಾರೆ.

ಸದರೀ ಸಮೀಕ್ಷೆ ಕಾರ್ಯ ಆಯೋಗದಿಂದ ನಡೆಸುತ್ತಿಲ್ಲದಿರುವುದರಿಂದ ಉಲ್ಲೇಖಿತ ಪತ್ರವನ್ನು ಹಾಗೂ ಅದರೊಂದಿಗಿರುವ ಅಡಕಗಳನ್ನು ಈ ಪತ್ರದ ಜೊತೆ ಲಗತ್ತಿಸಿ ಕಳುಹಿಸುತ್ತಾ, ಸದರೀ ಮನವಿಯನ್ನು ನಿಯಮಾನುಸಾರ ಪರಿಶೀಲಿಸಿ, ಅಗತ್ಯ ಕ್ರಮ ತೆಗೆದುಕೊಂಡು, ತೆಗೆದುಕೊಂಡ ಕ್ರಮದ ಬಗ್ಗೆ ತಿಳಿಸಿ ಆಯೋಗಕ್ಕೆ ವರದಿ ಮಾಡಲು ಕೋರಲಾಗಿದೆ.

ತಮ್ಮ ನಂಬುಗೆಯ,


ಕಾರ್ಯದರ್ಶಿಗಳು.

ಪ್ರತಿಯನ್ನು :-

1] ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು ಇವರಿಗೆ ಮಾಹಿತಿಗಾಗಿ ಕಳುಹಿಸಲಾಗಿದೆ.
2] ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು ಇವರಿಗೆ ಮಾಹಿತಿಗಾಗಿ ಕಳುಹಿಸಲಾಗಿದೆ.
3] ರಾಜ್ಯ ಮಹಾ ಕಾರ್ಯದರ್ಶಿಗಳು, ಕರ್ನಾಟಕ ಮುಸ್ಲಿಮ್ ಸಂಘರ್ಷ ಸಮಿತಿ, ನಂಬರ್ 474, 11 ನೇ ವಾರ್ಡ್, ಹೊಸಪೇಟೆ ಮುಖ್ಯರಸ್ತೆ, ಹಳೇ ಡಿ.ವೈ.ಎಸ್.ಪಿ. ಕಛೇರಿ, ಕೂಡ್ಲಗಿ – 583135 ಇವರಿಗೆ ಮಾಹಿತಿಗಾಗಿ ಕಳುಹಿಸಲಾಗಿದೆ.

19/5/08
Secretary
Karnataka State Commission for Scheduled Castes and the Scheduled Tribes, Bangalore

:ಎಸ್ ವಿ:



ಮೈಸೂರು ಮಹಾರಾಜರಿಂದ ಕರಡಿ ಆಡಿಸುವುದಕ್ಕೆ ಪಡೆದ ಕಂಚಿನ ಪದಕ



ಸತ್ತ ಕರಡಿಯನ್ನನು ತಗ್ಗು ತೋಡಿ ಹೂಳಲು ಸಿದ್ಧರಾದ ಮದಾರಿ ಸದಸ್ಯರು.



ಬೇಡಿಕೆಗಳ ಈಡೇರಿಕೆಗಾಗಿ ಬೀದಿಗಿಳಿದು ಹೋರಾಟ ಮಾಡುತ್ತಿರುವ ದೃಶ್ಯ










ಮಂಗಳಾಪುರದ ಪಂಚಾಯತ್ ಕಟ್ಟೆಯಲ್ಲಿ ಕರಡಿಯೊಂದಿಗೆ ಮದಾರಿ ಸದಸ್ಯರು,



ಗುಡಿಸಲಿನಲ್ಲಿ ವಾಸಿಸುತ್ತಿರುವ ಮದಾರಿ ಮಹಿಳೆ ಮಾಬೂಬಿ



ಸರ್ಕಾರಿ ಜಾಗೆಯಲ್ಲಿ ಮದಾರಿ ಜನಾಂಗದ ಗುಡಿಸಲುಗಳು




ಉಪವಾಸ ಸತ್ಯಾಗ್ರಹದಲ್ಲಿ ಪಾಲ್ಗೊಂಡ ಮದಾರಿ ಜನಾಂಗ



ಗುಜರಿ ವ್ಯಾಪಾರದಲ್ಲಿ ತೊಡಗಿರುವ ಕರಡಿ ಲಾಲಸಾಬ .



ಬಳೆ ವ್ಯಾಪಾರದಲ್ಲಿ ತೊಡಗಿರುವ ರಾಜಾಬಿ ಮತ್ತು ಕುಟುಂಬ



ಮದಾರಿ ಜನಾಂಗದ ಅಧ್ಯಕ್ಷ ರಾಜಾಸಾಬವರಿಂದ ಶಾಸಕರಿಗೆ ಮನವಿ ಸಲ್ಲಿಸುತ್ತಿರುವ ದೃಶ್ಯ



ಮದಾರಿ ಜನಾಂಗದ ಮಹಿಳೆಯರೊಂದಿಗೆ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷರು



ಮುಖ್ಯಮಂತ್ರಿಗಳಿಗೆ ಬೇಡಿಕೆ ಪತ್ರ ಸಲ್ಲಿಸುತ್ತಿರುವ ಮದಾರಿ ಜನಾಂಗದ ಮುಖಂಡರು



ಗೌಡರ ಮನೆ ಗಸ್ತಿಮಾಡುವ ದೃಶ್ಯದಲ್ಲಿ ಕರಡಿ



ಸತ್ತ ಕರಡಿಯೊಂದಿಗೆ ಮದಾರಿ ಜನಾಂಗದ ಸದಸ್ಯರು



ಸತ್ತ ಕರಡಿಯೊಂದರ ಚಿತ್ರ



ಹಂಪಿನಕಟ್ಟೆಯಲ್ಲಿರುವ ಮದಾರಿ ಜನಾಂಗದ ಸದಸ್ಯರು



ಮದಾರಿಗಳ ಜೀವನ ಮಟ್ಟಕ್ಕೆ ಗುಡಿಸಲೇ ಸಾಕ್ಷಿ



ಗೌಡರ ಮನೆ ಕಾಯಲು ಸಿದ್ಧಗೊಂಡ ಕರಡಿ


ಕೊಪ್ಪಳ ಜಿಲ್ಲೆಯ ನಕಾಶೆ

ಮದಾರಿ ಜನಾಂಗ ವಾಸಿಸುವ ಪ್ರದೇಶಗಳು



ಹೊಸಪೇಟೆ ತಾಲೂಕು ನಕಾಶೆ(ಬಳ್ಳಾರಿ ಜಿಲ್ಲೆ)

ಮದಾರಿ ಜನಾಂಗ ವಾಸಿಸುವ ಪ್ರದೇಶಗಳು



೧. ಮರಿಯಮ್ಮನಹಳ್ಳಿ (ಹೋಬಳಿ)
೨.&೩. ವೆಂಕಟಾಪುರ ಹಾಗೂ ಹಂಪಿನಕಟ್ಟೆ
೪. ತುಂಗಭದ್ರ ಜಲಾಶಯ
೫. ವ್ಯಾಸನಕೆರೆ

	ವಕ್ತೃವಿವರ ಮತ್ತು ವಿಳಾಸ	ವಯಸ್ಸು	ವೃತ್ತಿ
೧.	ರಾಜಸಾಹೇಬ್ ಹೋಟಲ್ ತಂದೆ ವಾಲೆಸಾಬ್‌ಡಣಾಪುರ (ಅಂಚೆ)	೬೦	ಕರಡಿಯಾಡಿಸುವುದು
೨.	ಹುಸೇನ್ ಸಾಬ್ ಹಂಪಿನ ಕಟ್ಟೆ ಡಣಾಪುರ (ಅಂಚೆ)	೪೦	ಮೊದಲು ಕರಡಿಯಾಡಿಸುತ್ತಿದ್ದ ಈಗ ಆಟೋ ಓಡಿಸುವುದು
೩.	ಬಳ್ಳಾರಿ ಮಹಮ್ಮದ್ ಹಂಪಿನಕಟ್ಟೆ ಡಣಾಪುರ (ಅಂಚೆ)	೩೦	ಕಾರ್ಖಾನೆ ಕೆಲಸಕ್ಕೆ ಹೋಗುವುದು.
೪.	ಬಾಗವಾಲಾ ಮದಾರ್ ಸಾಬ್ ಹಂಪಿನಕಟ್ಟೆ, ಡಣಾಪುರ (ಅಂಚೆ)	೩೫	ಮೊದಲು ಕರಡಿಯಾಡಿಸುತ್ತಿದ್ದು ಗುಜ್ಜರಿ ವ್ಯಾಪರಾ
೫.	ಬಾಲೋರಿ ಇಮಾಂಸಾಬ್ ತಂದೆ ಸಣ್ಣರಾಜಾಸಾಬ್ ಹಂಪಿನಕಟ್ಟೆ ಡಣಾಪುರ (ಅಂಚೆ)	೬೦	ಮೊದಲು ಕರಡಿಯಾಸುತ್ತಿದ್ದು ಈಗ ಮೈನ್ಸ್‌ನಲ್ಲಿ ಕಲ್ಲುಕಿತ್ತುವ ಕೆಲಸ
೬.	ಲಾಲ್‌ಸಾಬ್ ತಂದೆ ಇಮಾಮ್‌ಸಾಬ್ ಹಂಪಿನಕಟ್ಟೆ ಡಣಾಪುರ (ಅಂಚೆ)	೨೫	ಮೊದಲು ಕರಡಿಯಾಡಿಸುತ್ತಿದ್ದು ಈಗ ಗುಜರಿ ಕೆಲಸಕ್ಕೆ ಹೋಗುತ್ತಿದ್ದು
೭.	ಗೋಖಾರ್ ವಲಿ ಹಂಪಿನ ಕಟ್ಟೆ ಡಣಾಪುರ (ಅಂಚೆ)	೪೫	ಮೊದಲು ಕರಡಿಯಾಡಿಸುವುದು ಈಗ ಕಾರ್ಖಾನೆ ಕೆಲಸಕ್ಕೆ ಹೋಗುವುದು.
೮.	ಪಕ್ರುದ್ದೀನ್ ಸಾಬ್ ಆಂಧ್ರ ಹಂಪಿನಕಟ್ಟೆ ಡಣಾಪುರ (ಅಂಚೆ)	೭೫	ಮೊದಲು ಕರಡಿಯಾಡಿಸುತ್ತಿದ್ದು ಈಗ ಮನೆಯಲ್ಲಿದಾರೆ.
೯.	ಮಾಬುಸಾಬ್ ಸಾಲಿ ಹಂಪಿನ ಕಟ್ಟೆ ಡಣಾಪುರ (ಅಂಚೆ)	೫೦	ಮೊದಲು ಕರಡಿಯಾಡಿಸುತ್ತಿದ್ದು ಈಗ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿರುವನು
೧೦.	ಮೆಹಬೂಬ್ ಹಂಪಿನ ಕಟ್ಟೆ ಡಣಾಪುರ (ಅಂಚೆ)	೧೬	ಪಿಯುಸಿ.ಯಲ್ಲಿ ಓದುತ್ತಿರುವುದು.

೧೧. ಕಟ್ಟೆಮನಿ ಎಸ್. ರಾಜಾಸಾಬ್ ಹುಲಿಹೈದರ್ ಕನಕಗಿರಿ (ಪೊ)	೬೦	ಮೊದಲು ಕರಡಿಯಾಡಿಸುತ್ತಿದ್ದು ಮನೆಯಲ್ಲಿರುವರು.
೧೨. ದರ್ವೇಶಿ ಹುಸೇನ್‌ಸಾಬ್ ಹುಲಿಹೈದರ್ ಕನಕಗಿರಿ (ಅಂಚೆ)		
೧೩. ಇಮಾಂಸಾಬ್ ವಲಜಾವಕ ಹಂಪಿನಕಟ್ಟೆ ಕನಕಗಿರಿ (ಅಂಚೆ)	೬೦	ಮೊದಲು ಕರಡಿಯಾಡಿಸುತ್ತಿದ್ದು ಈಗ ಮನೆಯಲ್ಲಿರುವರು
೧೪. ಇಮಾಂಸಾಬ್ ಹುಲಿಹೈದರ್ ಕನಕಗಿರಿ (ಅಂಚೆ)		
೧೫. ಸಣ್ಣ ರಾಜಾಸಾಬ್ ಮಂಗಳಾಪುರ ಕೋಳೂರು (ಅಂಚೆ)	೩೫	ಮೊದಲು ಕರಡಿಯಾಡಿಸುತ್ತಿದ್ದು ಈಗ ಇಟ್ಟಿಗೆಯ ಕೆಲಸ ಮಾಡುತ್ತಿದ್ದು
೧೬. ಇಮಾಂಸಾಬ್ ಹುಲಿಹೈದರ್ ಕನಕಗಿರಿ (ಅಂಚೆ)	೩೨	ಮೊದಲು ಕರಡಿಯಾಡಿಸುತ್ತಿದ್ದು ಈಗ ಮನೆಯಲ್ಲಿರುವರು
೧೭. ರಾಜಾಹುಸೇನ್ ಮಂಗಳಾಪುರ ಕನಕಗಿರಿ (ಅಂಚೆ)	೩೮	ಕರಡಿಯಾಡಿಸುವುದು.
೧೮. ರಾಜಾಸಾಬ್ ಕಲ್ಲೂರು ಹುಲಿಹೈದರ್ ಕನಕಗಿರಿ (ಅಂಚೆ)	೫೦	ಮೆಣಸಿನ ಕಾಯಿ ವ್ಯಾಪಾರ
೧೯. ವೀರಣ್ಣ ಡಣಾಪುರ (ಅಂಚೆ)	೩೮	ಬಿಲ್‌ಕಲೆಕ್ಟರ್ (ಗ್ರಾಮ ಪಂಚಾಯಿತಿ)
೨೦. ಹುಸೇನ್ ಹುಲಿಹೈದರ್ ಕನಕಗಿರಿ (ಅಂಚೆ)	೨೯	ಶಿಕ್ಷಕರು

೨೧. ಬಸವರಾಜ ಮಂಗಳಾಪುರ ಕೋಳೂರು (ಅಂಚೆ)	೩೦	ಬಿಲ್‌ಕಲೆಕ್ಟರ್ (ಗ್ರಾಮ ಪಂಚಾಯಿತಿ)
೨೨. ಗೂಡುಸಾಬ್ ಕುರುಗೋಡು	೫೦	ಕೋತಿಯಾಡಿಸುವುದು.
೨೩. ದೊಡ್ಡ ರಾಜಾಸಾಬ್ ಮಂಗಳಾಪುರ ಕೊಳೂರು (ಅಂಚೆ)	೪೨	ಮೊದಲು ಕರಡಿಯಾಡಿಸುತ್ತಿದ್ದು ಈಗ ಕೂಲಿ ಕೆಲಸ.
೨೪. ಚಾಂದ್ ಬಾಷಾ ವೆಂಕಟಾಪುರ ಡಣಾಪುರ (ಅಂಚೆ)	೨೬	ಮೊದಲು ಕರಡಿಯಾಡಿಸುತ್ತಿದ್ದು ಈಗ ಲಾರಿ ಚಾಲಕನಾಗಿರುವುದು.
೨೫. ಬಿ. ಕಾಶೀಂ ವೆಂಕಟಾಪುರ ಡಣಾಪುರ (ಅಂಚೆ)	೨೨	ಮೊದಲು ಕರಡಿಯಾಡಿಸುತ್ತಿದ್ದು ಈಗ ಲಾರಿಯ ಕ್ಲೀನರ್‌ನಾಗಿರುವುದು
೨೬. ರಾರಜಾಭಿ ಹಂಪಿನ ಕಟ್ಟೆ ಡಣಾಪುರ (ಅಂಚೆ)	೩೫	ಅಂಗಡಿಯಿಟ್ಟು ಜೀವನ ನಡೆಸುತ್ತಿವರು.
೨೭. ದೊಡ್ಡ ಹುಸೇನ್‌ಸಾಬ್ ಮಂಗಳಾಪುರ ಕೋಳೂರು (ಅಂಚೆ)	೫೫	ಕರಡಿಯಾಡಿಸುವುದು.
೨೮. ಹುಸೇನ್‌ಸಾಬ್ ಬೀವುನೂರ ಮಂಗಳಾಪುರ ಕೋಳೂರು (ಅಂಚೆ)	೫೦	ಕೂಲಿ
೨೯. ಮಾಬುಸಾಬ್ ಕರಡಿ ಮಂಗಳಾಪುರ ಕೋಳೂರು (ಅಂಚೆ)	೬೫	ಕರಡಿಯಾಡಿಸಿ ಈಗ ಮನೆಯಲ್ಲಿದ್ದಾರೆ.
೩೦. ಮದಾರ್ ಸಾಬ್ ಮಂಗಳಾಪುರ ಕೋಳೂರು (ಅಂಚೆ)	೬೦	ಕರಡಿಯಾಡಿಸಿ ಈಗ ಮನೆಯಲ್ಲಿದ್ದಾರೆ.

೩೧. ಕಾಲೇ ಕಾಸೀಂಸಾಬ್ ೭೦ ಕರಡಿಯಾಡಿಸುವುದು ಈಗ

ಮಂಗಳಾಪುರ

ಮನೆಯಲ್ಲಿದ್ದಾರೆ.

ಕೋಳೂರು (ಅಂಚೆ)

೩೨. ಮಸಾಲ ಕಾಸೀಂಸಾಬ್ ೫೦ ಕರಡಿಯಾಡಿಸುವುದು ಈಗ
ಮಂಗಳಾಪುರ ಮನೆಯಲ್ಲಿರುವುದು
ಕೋಳೂರು (ಅಂಚೆ)

೩೩. ಹುಸೇನ್ ಸಾಬ್ ೬೫ ಕರಡಿಯಾಡಿಸುವುದು ಈಗ
ಮಂಗಳಾಪುರ ಮನೆಯಲ್ಲಿದ್ದಾರೆ.
ಕೋಳೂರು (ಅಂಚೆ)

೩೪. ಹುಸೇನ್ ೨೯ ಶಿಕ್ಷಕರು
ಹುಲಿಹೈದರ್
ಕನಕಗಿರಿ (ಅಂಚೆ)

೩೫. ಝಾಕೀರ್ ಹುಸೇನ್ ೪೬ ಶಿಕ್ಷಕರು
ಯತ್ನಿಟ್ಟಾಳು
ಕೋಳೂರು (ಅಂಚೆ)

೩೬. ದೊಡ್ಡಕಾಶೀಂ ಸಾಬ್ ೫೦ ಮೊದಲು ಕರಡಿಯಾಡಿಸುತ್ತಿದ್ದರು
ಹಂಪಿನಕಟ್ಟೆ ಕಾರ್ಖಾನೆ ಕೆಲಸಕ್ಕೆ ಹೋಗುತ್ತಿದ್ದು
ಡಣಾಪುರ (ಅಂಚೆ)

೩೭. ಕಸೂಲ್‌ಸಾಬ್ ೩೦ ಮೊದಲು ಕರಡಿಯಾಡಿಸುತ್ತಿದ್ದರು
ಹಂಪಿನಕಟ್ಟಿ ಈಗ ಗುಜರಿ ಕೆಲಸಕ್ಕೆ ಹೋಗುತ್ತಿದ್ದು
ಡಣಾಪುರ (ಅಂಚೆ)

೩೮. ಬಾಗಾವಾಲಾ ರಾಜಾಸಾಬ್ ೬೦ ಮೊದಲು ಕರಡಿಯಾಡಿಸುತ್ತಿದ್ದರು
ಹುಲಿಹೈದರ್ ಈಗ ಮನೆಯಲ್ಲಿರುವರು.
ಕನಕಗಿರಿ (ಅಂಚೆ)

೩೯. ಬಾರಕ್ಕೆಲ್ ಶಾಮಿದ್‌ಸಾಬ್ ೬೦ ಮೊದಲು ಕರಡಿಯಾಟ
ಹುಲಿಹೈದರ್ ಈಗ ಮನೆಯಲ್ಲಿರುವರು.
ಕನಕಗಿರಿ (ಅಂಚೆ)

೪೦. ಹುಸೇನ್‌ಸಾಬ್ ಹುಲಿಹೈದರ್ ಕನಕಗಿರಿ (ಅಂಚೆ)	೪೫	ಕೂಲಿ ಕೆಲಸಕ್ಕೆ ಹೋಗುತ್ತಿದ್ದು
೪೧. ಗೂಡುಸಾಬ್ ಆಂಧ್ರ ಹಂಪಿನಕಟ್ಟೆ ಡಣಾಪುರ (ಅಂಚೆ)	೩೫	ಕೂಲಿ ಕೆಲಸ ಮಾಡುತ್ತಿರುವರು.
೪೨. ಅಲೀಮ್ ಹಂಪಿನಕಟ್ಟೆ ಸಣಾಪುರ	೪೦	ಕಾರ್ಖಾನೆ ಕೆಲಸಕ್ಕೆ ಹೋಗುತ್ತಿರುವರು.
೪೩. ಖಾಸಿಂಬಿ ಬಳೆಗಾರ ಹಂಪಿನಕಟ್ಟೆ ಡಣಾಪುರ (ಅಂಚೆ)	೬೫	ಬಳೆ ವ್ಯಾಪಾರ ಮಾಡುತ್ತಿದ್ದು
೪೪. ಶಾಮಿದ್ ಆಂಧ್ರ ಹಂಪಿನಕಟ್ಟೆ ಡಣಾಪುರ (ಅಂಚೆ)	೫೫	ಕೂಲಿ ಕೆಲಸ
೪೫. ಇಮಾಮಲಿ ಹಂಪಿನಕಟ್ಟೆ ಡಣಾಪುರ (ಅಂಚೆ)	೩೦	ಕಂಡಕ್ಟರ್ ಕೆಲಸದಲ್ಲಿರುವುದು.
೪೬. ಭಾಷಾ ಹಂಪಿನಕಟ್ಟೆ ಡಣಾಪುರ (ಅಂಚೆ)	೨೭	ಟ್ರ್ಯಾಕ್ಟರ್ ಓಡಿಸುತ್ತಿರುವುದು
೪೭. ಇಮಾಂಸಾಬ್ ಹಂಪಿನಕಟ್ಟೆ	೩೭	ಮೊದಲು ಕರಡಿಯಾಡಿಸುತ್ತಿದ್ದು ಟ್ರ್ಯಾಕ್ಟರ್ ಓಡಿಸುತ್ತಿರುವ
೪೮. ಬಾದರದಿನ್ನಿ ಬುಡೇನ್‌ಸಾಬ್	೩೦	ಮೊದಲು ಕರಡಿಯಾಡಿಸುತ್ತಿದ್ದು ಕೂಲಿ ಕೆಲಸ ಮಾಡುತ್ತಿರುವರು.